(SRI MOHAMED ALI)

6. Facilities for dyeing and bleaching and for securing model patterns are provided.

(7) Housing Colonies are constructed for weavers.

Agricultural Colonies for Harijans in Nelavanki.

Q.—555. Sri J. NARAYANAPPA (Mulbagal—Scheduled castes).—

Will the Government be pleased to state :—

(*a*) whether any action is being taken regarding setting up of some agricultural colonies for Harijans in fallow lands in Nelavanki hobli in Srinivasapura taluk ;

(*b*) if so, the stage at which this scheme is pending ?

A.—Sri R. CHENNIGARAMIAH (Minister for Local Self-Government).-

(*a*) No action has been taken for setting up Agricultural Colony for Harijans in Nelavanki Hobli so far.

(*b*) Does not arise in view of the answer at (*a*).

Pay Scales of Employees under Local Bodies.

Q.—556. Sri B. L. NARAYANASWAMY (Mulbagal).—

Will the Government be pleased to state :—

(*a*) whether it has come to their notice that most of the Local Bodies, *viz.*, Municipalities and District Boards in the State are not in a position to grant the revised scales of pay to their employees for want of funds ;

(*b*) whether they are aware of the resulted discontentment prevailing among the employees of the Local Bodies ;

(*c*) whether they have not received adequate financial aid from the Central Government to meet this extra expenditure ;

(*d*) whether they have decided to grant similar aid to the local bodies to keep the emoluments of their employees at par with that of the Government employees ?

A.—Sri T. MARIAPPA (Minister for Finance).—

(*a*) No-

(*b*) May be.

(*c*) Adequate assistance is not assured.

(*d*) A committee has been constituted to examine this question.

Member's Representation

Sri B. S. SHANKARAPPA.—I want to make a statement regarding the inconvenience caused by the meeting time of the Assembly.

Mr. SPEAKER.—Any representation to be made may be done in my Chambers. I have stopped representations being made on the floor of the House.

BUDGET FOR 1957-58—DEMANDS FOR GRANTS.

Demand No. 23—Agriculture, Horticulture and Fisheries.

No. 24—Rural Development.

No. 25—Veterinary.

(*Discussion continued*)

Sri J. H. SHAMSUDDIN (Honavar).-Mr. Speaker, I rise to support the Demands. First I shall confine my remarks to the Department of Fisheries and, if time permits, to the question of Animal Husbandry.

Sir, in the re-organisation of States, Mysore State has acquired a territory of 200 miles consisting of a coast line which is rich in fisheries. This problem is of vital importance to the new State of Mysore on account of the fact that fisheries play a very important role in dietic system of this State. According to the old statistics that is now available so far as old Mysore State is concerned, the per capita consumption of fish was one-seventh of an ounce. But according to the recommendation of the Government of India, the

optimum per capita consumption that will make a balanced diet containing all sorts of vitamins especially animal proteins is 1.5. Now, having regard to this difference between one-seventh of an ounce which is per capita consumption of fish daily of every fish eater the leeway is rather very great. Therefore the Mysore Government should now pay serious attention to the question of development of fisheries in this State.

The importance of fisheries can be realised from the fact that fish is part and parcel of the food of an ordinary man who eats it. So naturally the increase in the production of fish will relieve the pressure on the other food articles such as rice, wheat, etc. So, the production of fish gains added importance as a subsitute for food. Due to the shortage of food supply in this country the Mysore State has to pay more attention to the development of fishery in the near furture. The problem of development of fisheries is of two types: inland fisheries development and marine fisheries development. So far as marine fisheries development *i.e.* coast line fisheries development is concerned, it is new to the administration of Mysore and therefore the Department has to be reorganised and properly staffed. I hope that with the recent bifurcation of the Department proper attention will be paid to the development of fisheries. So far as my personal knowledge goes, the man in charge of the Department is one who has had practical experience of the development of marine fisheries and he has also got sufficient training abroad in matters of transport, storage and preservation of fish. After the reorganisation of States, the problem was brought to the notice of this Government by two conferences. The House may be aware of the Mysore Fisheries Conference at Malpe in the month of May which the Chief Minister and the Minister for Law and Labour attended. There they passed several resolutions with regard to the development of fisheries and subsequently when the Malnad Conference was organised in the North Kanara District, that conference also brought to the notice of Government the importance of development of fisheries and passed several resolutions suggesting ways and means for the development of fisheries. This is a problem which has attracted the attention of the Government and the development of fisheries has become an All-India question. If one looks to the provision made in the Second Five-Year Plan for the development of Fisheries, one will be convinced of the importance attached to this problem. The Government of India and all the States put together want to spend about Rs. 12 crores only the development of fisheries during the Second Five-Year Plan period. When I look to the budgetary provision for this purpose in our State, I feel a little sorry because it has been drastically cut with the result that several important development schemes will suffer and will not receive that much attention which they deserve. I have in my hand the Second Five-Year Plan of the Mysore State. So far as the year 1957-58 is concerned, I am sorry to say that neither the budget nor the Second Five-Year Plan gives an idea about the schemes that are to be undertaken during the Second Five-Year Plan period. There is only a bald figure in a table of which the heading is, "Abstract of the Plan for 1957-58" and therein Rs. 14 lakhs have been provided for fisheries. Nowhere in the Plan has any indication been given of the different types of programme that will be launched during this year so that one may get an idea as to the programmes that will be launched by the Government for giving fillip to the production, preservation, transport and development of fisheries. So, one is at a loss to understand what is in the mind of Government by looking at the Second Five-Year Plan. It would have been better if some more indication about the proposals that the Government has in view had been given in this Plan. If we look at page 133 of 'Budget Estimates', it will be seen that there is a provision of Rs. 15,67,900 for 'Fisheries.' I feel that this is quite inadequate for several reasons. I do not know why the Government has thought it fit to reduce the expenditure, even though it is an item

(SRI J. H. SHAMSUDDIN)

which will give them return in money. I shall illustrate how it will yield return in money later on. The normal budget provision for fisheries is about Rs. 8 lakhs and the Plan expenditure will generally be above the normal budgetary provision for a year. So, the Plan expenditure is Rs. 14 lakhs and the normal expenditure on establishment, etc. is Rs. 8 lakhs. Therefore, the total expenditure for this year ought to have been Rs. 22 lakhs whereas the provision made is only Rs. 15 lakhs. There is no explanation forthcoming either in the budget or in the supplementary statement that has been given as to why such a drastic reduction has been effected in respect of this item. I hope the Hon'ble Minister will enlighten me on this point.

As I was saying, the fisheries problem is to be looked upon from two points of view. One is the fisherman's point of view and the other point of view is the abstract problem of increasing the production and affording better facilities for transport and storage. There are about 1 lakh of people who live chiefly on this occupation. That is their main source of income. They are very poor, ill-equipped and backward. So far as the Madras Gover ment was concerned, the fishermen were classified as backward classes. So far as the Bombay Government was concerned, they were not classified as backward classes. So, they were suffering under handicap. a Naturally, the Malpe Conference requested the Government of Mysore that all the fishermen in the State irrespective of the region in which they lived should be classified as backward and brought on a par. I do not know whether the Government has taken any step to implement that resolution and if the Government has not taken any step in that direction, then it should expedite the grant of these facilities to these backward class people in the Bombay Karnatak region.

Mr. SPEAKER.—Only one minute more.

Sri J. H. SHAMSUDDIN.—I did not know of the time limit. Is the rationing of time to start with me?

Mr. SPEAKER.—It has been there.

Sri J. H. SHAMSUDDIN.—I will try to stick to the time limit, Sir.

What I want to say is that the most important problem so far as fisheries is concerned is the improvement of the method of fishing and equipment. The fishermen have been rather conservative and uneducated and were using old types of boats and canvas. They are to be fitted with mechanical propellers, because what is more important is the production of fish and the production can be increased if deep-sea fishing is encouraged. Deep-sea fishing is possible only if mechanised boats are given to them. I do not know how many such boats will be available during the year, because the budget provision is only Rs. 1½ lakhs. There are maritime States like Bombay which has provided 800 mechanised boats and has also organised co-operative societies. Madras has also organised co-operative societies and the boats are fitted with mechanised propellers. Naturally production is going space there. The Mysore State has now got a coast line of 200 miles and is rich in food production. The Government of Mysore should encourage deep-sea fishing and for that purpose they should give the fishermen either loan or subsidy for mechanising their boats.

Secondly, the question of transport of fish is there. The fish that is caught should be carried to the interior. For that purpose cold storage plants fitted in lorries should be granted to these people so that the catch at a particular place may be distributed to the people in the inland market. Fish is a dollar earning product and so the production of fish will bring foregin exchange to Government. We know that in Kerala they have got several varieties of fishes like Prans, Oyster, Kraft, etc. These fishes are processed and tinned and sent to America. They are one of the best dollar earners for our country. Mysore State also may follow the Kerala way and introduce facilities for processing of fish so that the fishes that are caught may be sent to America and we may earn dollar for our country.

ಶ್ರೀ ಎಂ. ದಾನಪ್ಪ (ಹರಪನಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ದಿನ ರೂರಲ್ ಡೆವಲಪ್‌ಮೆಂಟ್ ಮೇಲೆ

ಕೆಲವು ಮುಖ್ಯವಾದ ವಿಷಯಗಳನ್ನು ಮಾತನಾಡಬೇಕೆಂದಿದ್ದೇನೆ. ಈ ವಿಷಯದಮೇಲೆ ನನ್ನ ಮಾನ್ಯ ಸ್ನೇಹಿತರು ಬಹಳ ಮಂದಿ ಮಾತನಾಡಿದ್ದಾರೆ. ಹರಿಜನರ ವಿಷಯದಲ್ಲಿ ಮೈಸೂರು ಸರ್ಕಾರ ತೆಗೆದುಕೊಳ್ಳತಕ್ಕ ಚರ್ಯೆಗಳೇನಿವೆ, ಅವು ಒಂದೂ ಪ್ರಯೋಜನವಿಲ್ಲವೆಂದು ಮಾತ್ರ ನನಗೆ ಕಂಡು ಬರುತ್ತದೆ. ಈ ಸರ್ಕಾರಮಾಡತಕ್ಕ ಕಾನೂನುಗಳು ಮತ್ತು ಇವರ ಚರ್ಯೆಗಳು ಇವೆಲ್ಲ, ಹರಿಜನರನ್ನೂ ಹಿಂದುಳಿದ ಪ್ರಜೆಗಳನ್ನೂ ಒಂದು ವಿಧವಾಗಿ ಮೋಸಮಾಡಿ, ಅವರಿಂದ ಓಟುಗಳನ್ನು ತಗೆದುಕೊಂಡು ಅಧಿಕಾರದಲ್ಲಿ ಬರಲಿಕ್ಕೆ ಎಷ್ಟು ಮಾತ್ರ ಪ್ರಯತ್ನವನ್ನು ಮಾಡಬಹುದೋ ಅಷ್ಟು ಮಾತ್ರ ಪ್ರಯತ್ನ ಮಾಡುತ್ತಿದ್ದಾರೆ. ಹರಿಜನರ ಮತ್ತು ಹಿಂದುಳಿದವರ ಶ್ರೇಯಸ್ಸಿಗಾಗಿ, ಅವರ ಅಭಿವೃದ್ಧಿಗಾಗಿ ಮಾತ್ರ ಯಾವ ಒಂದು ಕೆಲಸವನ್ನೂ ಮಾಡಲಿಕ್ಕೆ ಪ್ರಯತ್ನಮಾಡಿಲ್ಲ. ನಮಗೆ ಸ್ವರಾಜ್ಯ ಬಂದು ಹತ್ತು ವರ್ಷಗಳಾಗಿವೆ. ಈ ಹತ್ತು ವರ್ಷಗಳಲ್ಲಿ ಸಂವಿಧಾನದ 38–46 ಆರ್ಟಿಕಲ್ಸ್‌ಪ್ರಕಾರ ಪ್ರತಿಯೊಬ್ಬರಿಗೂ ಸರಿಸಮನವಾದ ಹಕ್ಕುಗಳು ಇರಬೇಕು, ಸೋಷಿಯಲ್ ಕಂಡಿಷನ್ಸ್, ಎಕನಾಮಿಕ್ ಕಂಡಿಷನ್ಸ್ ಇವನ್ನು ಸರಿಪಡಿಸಿ ಎಲ್ಲರೂ ಸರಿಸಮಾನವಾಗಿರಲಿಕ್ಕೆ ಇಷ್ಟು ಕೆಲಸ ಮಾಡಬೇಕೆಂದು ಸಂವಿಧಾನದಲ್ಲಿ ಸ್ಪಷ್ಟವಾಗಿ ಹೇಳಿದೆ. ಆ ರೀತಿ ಮಾಡುತ್ತೇವೆಂದು ಪ್ರತಿಯೊಬ್ಬರೂ ವಾಗ್ದಾನ ಮಾಡಿದ್ದಾರೆ. ಸಂವಿಧಾನದ ಪ್ರಕಾರ ಹರಿಜನರಿಗೆ ಹತ್ತು ವರ್ಷಗಳ ಕಾಲ ವಿಶೇಷ ಸೌಲಭ್ಯಗಳನ್ನು ಕೊಡಲಾಗಿದೆ. ಈ ಕಾಲವು ಮುಗಿಯುತ್ತ ಬಂದು ಇನ್ನು 3-4 ವರ್ಷಗಳು ಮಾತ್ರ ಉಳಿದಿವೆ. ಆದರೆ ಇವರ ಅಭಿವೃದ್ಧಿಯ ಬಗ್ಗೆ ಏನೊಂದು ಕೆಲಸಗಳೂ ಆಗಿಲ್ಲ. ಇವರ ಗೋಳನ್ನು ವಿಚಾರ ಮಾಡುವವರೇ ಇಲ್ಲದ ಪರಿಸ್ಥಿತಿ ಈದಿನ ಬಂದಿದೆ. ಕೋಟ್ಯನು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ; ಹರಿಜನರನ್ನು ಉದ್ಧಾರಮಾಡುತ್ತೇವೆ ಎಂದು ಪ್ರತಿಯೊಬ್ಬ ಮಾನ್ಯ ಮಂತ್ರಿಗಳೂ ಮತ್ತು ನಾಯಕರೂ ಹೇಳುತ್ತಿದ್ದಾರೆ. ಆದರೆ ಹರಿಜನರು ಎಲ್ಲಿರಬೇಕೋ ಅಲ್ಲಿಯೇ, ಹಾಗೆಯೇ ಇದ್ದಾರೆ, ಒಂದು ಹೆಜ್ಜೆಯೂ ಮುಂದುವರಿದಿಲ್ಲ. ತೆಲುಗಿನಲ್ಲಿ ಒಂದು ಗಾದೆ ಹೇಳುತ್ತಾರೆ, ‘ ಎಕ್ಕಡ ಉಂದಿ ಗೊಂಗಡಿ ಅಂಟೇ ಅಕ್ಕಡೇ ಉಂದಿ ’ ಎಂದು. ಎಲ್ಲಿರುವವರು ಅಲ್ಲಿಯೇ ಇದ್ದಾರೆಯೇ ಹೊರತು, ಆ ಸ್ಥಳ ಬಿಟ್ಟು ಮುಂದುವರಿದಿರುವುದಿಲ್ಲ. ಸರ್ಕಾರ ಮಾಡತಕ್ಕ ಕಾನೂನುಗಳೇನಿವೆ. ಅವುಗಳ ಪ್ರಕಾರ ಹರಿಜನರ ಅಭಿವೃದ್ಧಿಮಾಡಬೇಕೆಂಬ ದೃಷ್ಟಿಕೋನದಿಂದ ಕೆಲಸ ಮಾಡಿಲ್ಲ. ಅವರಿಗೆ ಮೋಸಮಾಡಿ, ಆಸೆ ತೋರಿಸಿ ಅವರಿಂದ ಓಟುಗಳನ್ನು ತೆಗೆದುಕೊಂಡು ಅಧಿಕಾರಕ್ಕೆ ಬರಲಿಕ್ಕೆ ಎಷ್ಟು ಮಾತ್ರ ಉಪಯೋಗಿಸಬಹುದೋ ಅಷ್ಟು ಮಾತ್ರ ಉಪಯೋಗಿಸಿದ್ದಾರೆಯೇ ಹೊರತು ಬೇರೇನೂ ಇಲ್ಲ. ಇವೊತ್ತು ಹರಿಜನರ ಪರಿಸ್ಥಿತಿ ಹೇಗಿದೆ ಎಂದರೆ, ಹಿಂದೆ ಒಂದು ಸಲ forcible conversion ಎಂಬ ಸಮಸ್ಯೆ ಬಂದಾಗ, Scheduled Castes ಮತ್ತು ಇತರ ಹಿಂದುಗಳಿಗೆ ಯಾವ ವಿಧವಾದ ಸಂಬಂಧವೂ ಇಲ್ಲವೆಂದು ಪಾಶ್ಚಾತ್ಯ ಸರ್ಕಾರದವರು ಜವಾಬು ಕೊಟ್ಟಿದ್ದರು. ಅವರ ಮಾತು ನಿಜವೆಂದು ತೋರುತ್ತದೆ. ಏಕೆಂದರೆ, ಇವೊತ್ತು ಹರಿಜನರ ಮನೆಗಳು ಬೇರೆ, ಅವರ ಸುಡುಗಾಡು ಸಹ ಬೇರೆ, ಸತ್ತವರ ಹೆಣಗಳನ್ನು ಹೂಳುವುದಕ್ಕೆ ಸಹ ಅವರಿಗೆ ಬೇರೆ ಸುಡುಗಾಡು, ಅವರಿಗೆ ಬಾವಿಗಳು ಬೇರೆ, ರಸ್ತೆಗಳು ಬೇರೆ, ಅವರ ದೇವಸ್ಥಾನಗಳು ಬೇರೆ, ಹೀಗೆ ಎಲ್ಲ ದೂರ ದೂರವಾಗುತ್ತ ಬರುತ್ತಿದೆ. ಎಂದರೆ ಹರಿಜನರಿಗೆ ಹಿಂದೂ ಸಮಾಜದಲ್ಲಿ ಯಾವ ವಿಧವಾದ ಸಂಬಂಧವೂ, ಸ್ಥಾನವೂ ಇಲ್ಲದಂತೆ ದೂರ ದೂರವಾಗುತ್ತ ಬರುತ್ತಿದೆ. ಮತ್ತು ಒಂದು ದೇಶದಲ್ಲಿ ಹುಟ್ಟಿರುವ ಎರಡು ಪಂಗಡಗಳೂ ಕಲೆತು, ಒಂದೇ ಕಡೆ ಬೆಳೆದು ಅನ್ಯೋನ್ಯವಾಗಿ ಜೀವನ ಮಾಡುವುದಕ್ಕೆ ಅವಕಾಶವಿಲ್ಲದ ಹಾಗೆ ಆಗಿದೆ. ಹರಿಜನರಲ್ಲಿ ಒಂದು ವಿಧವಾದ ಐಕಮತ್ಯ, ಒಂದು ವಿಧವಾದ ಒಕ್ಕಟ್ಟು ಬಂದರೆ, ನಮಗೆಲ್ಲಿ ತೊಂದರೆ ಬರುತ್ತದೆಯೋ, ದೇಶಕ್ಕೆ ಎಲ್ಲಿ ಒಂದು ವಿಧವಾದ ಕಷ್ಟ ಬರುತ್ತದೆಯೋ ಎಂಬ ಒಂದು ರೀತಿಯ ಭಯದಿಂದ ಹರಿಜನರಲ್ಲಿರತಕ್ಕ ಒಗ್ಗಟ್ಟನ್ನು ಕೆಡಿಸಲಿಕ್ಕೆ ಮೂರು ವಿಧವಾದ ಕಾನೂನುಗಳನ್ನೂ ನಮ್ಮ ಸರ್ಕಾರದವರು ಕಂಡುಹಿಡಿದಿದ್ದಾರೆ. ಹರಿಜನರಲ್ಲಿ ಒಗ್ಗಟ್ಟು ಇರುವುದು ನಿಜ. ಆದರೆ ಇಲ್ಲಿ ನೋಡಿದರೆ ಎಡಗೈ ಮತ್ತು ಬಲಗೈ ಎನ್ನುವ ಭೇದಗಳುಇವೆ. ಈ ಸರ್ಕಾರದಲ್ಲಿ ಮಾತ್ರ ಈ ಶಬ್ದಗಳನ್ನು ಕೇಳಿದ್ದೇನೆ; ಇನ್ನು ಯಾವ ಸರ್ಕಾರದಲ್ಲಿಯೂಕೇಳಿಲ್ಲ. ಹೀಗೆ ಮಾಡಿರುವುದರ ಉದ್ದೇಶ ಒಂದು ಸಲಎಡಗೈಯವರು ಹೆಚ್ಚೆಂದು ಹೇಳುವುದು, ಮತ್ತೊಂದು ಸಲ ಬಲಗೈಯವರು ಹೆಚ್ಚೆಂದು ಹೇಳುವುದು ಹೀಗೆ ಇವರಲ್ಲಿ ಭಿನ್ನಾಭಿಪ್ರಾಯಗಳು ಬರುವಂತೆ ಮಾಡಲು ಮಾತ್ರ ಇಟ್ಟುಕೊಂಡಿದ್ದಾರೆಂದು ಭಾವಿಸುತ್ತೇನೆ.

Sri H. K. VEERANNA GOWDH (Minister for Public Works).—There is no such thing as ‘Edagai’ and ‘Balagai’ in Government records.

Sri M. DANAPPA.—There are official records to show that they are used in Government records. I have got such records with me.

Sri H. K. VEERANNA GOWDH.—That is a usage prevalent only in local areas, but in Government records the usage is ‘Adikarnatakas’.

ಶ್ರೀ ಎಂ. ದಾನಪ್ಪ.—ಈ ಎಡಗೈ ಮತ್ತು ಬಲಗೈ ಎನ್ನುವ ಶಬ್ದವನ್ನುಸರ್ಕಾರ ಏಕೆ ಉಪಯೋಗಿಸುತ್ತ ಬಂದರು ಎಂದರೆ, ಇವರನ್ನು ಒಂದು ವಿಧವಾಗಿ ಕೆಡಿಸಬೇಕೆಂಬ ದುರುದ್ದೇಶದಿಂದ ಮಾಡಿದ್ದಾರೆಂದು ಕಾಣುತ್ತದೆ. ಒಂದು ವಿಷಯವನ್ನು ಮಾತ್ರ ಸರ್ಕಾರದವರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಈ ರೀತಿ ಮಾಡುವುದರಿಂದ ಬಹಳ ನಷ್ಟವಿದೆ, ಬಹಳ ಕೆಡುಕಿದೆ. ಬ್ರಿಟಿಷರು ನಮ್ಮ ದೇಶವನ್ನು ಪರಿಪಾಲನೆ ಮಾಡುತ್ತಿದ್ದ ಸಮಯದಲ್ಲಿdivide and rule ಎಂಬ ನೀತಿಯ ಮೇಲೆ ರಾಜ್ಯ ವಾಳುತ್ತಿದ್ದರು. ಅದರ ಪ್ರತಿಫಲ ಇಂದು ನಾವು ನೋಡುತ್ತಿದ್ದೇವೆ.

One-fourth of them have gone to Pakistan on account of this policy of Government. Millions and millions of people are suffering at the hands of the caste Hindus. My sympathies are there for them.

ಇದನ್ನು ಸ್ವಲ್ಪ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. Divide and rule ಎಂಬ ಯಾವ ನೀತಿಯನ್ನು ಬ್ರಿಟಿಷರು ನಮ್ಮ ದೇಶವನ್ನು ಪರಿಪಾಲನೆ ಮಾಡುತ್ತಿದ್ದಾಗ ಇಟ್ಟುಕೊಂಡಿದ್ದರೋ ಆಗ ಒಂದು ಸಲ ಮುಸ್ಲಿಮರನ್ನು ಎತ್ತಿಕಟ್ಟುವುದು, ಮತ್ತೊಂದು ಸಲ ಹಿಂದು

(ಶ್ರೀ ಎಂ. ದಾನಪ್ಪ)

ಗಳನ್ನು ಎತ್ತಿಕಟ್ಟುವುದು ಹೀಗೆ ಮಾಡಿ ರಾಜ್ಯವನ್ನು ಪರಿಪಾಲನೆ ಮಾಡುತ್ತ ಬಂದರು. ಅದೇ ಪ್ರಕಾರ ಈ ಸರ್ಕಾರದವರೂ ರಾಜ್ಯವನ್ನು ಪರಿಪಾಲನೆ ಮಾಡಬೇಕೆಂಬ ದುರುದ್ದೇಶವನ್ನಿಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಇದರಿಂದ ಸರ್ಕಾರಕ್ಕೆ ಮತ್ತು ದೇಶಕ್ಕೆ ಯಾವಾಗಲೂ ಲಾಭವಾಗಲಾರದು. ಆದಕಾರಣ ಇಂಥ ಧ್ವತಿಯ ರೀತಿ ನೀವು ರಾಜ್ಯವನ್ನು ಪರಿಪಾಲನೆ ಮಾಡಲಿಕ್ಕೆ ಪ್ರಯತ್ನ ಮಾಡಬಾರದು.

ಹರಿಜನರಿಗೆ ಕಾಂಗ್ರೆಸ್‌ನವರಲ್ಲಿ ನಂಬಿಕೆ ಇಲ್ಲ. ಕಾಂಗ್ರೆಸ್‌ನವರಲ್ಲಿದ್ದ ನಂಬಿಕೆ ನಮಗೆ ಹೋಗಿದೆ. ಇವರನ್ನು ನಂಬಿ ನಾವು ಹಾಳಾಗಿ ಹೋಗತಕ್ಕ ಪರಿಸ್ಥಿತಿ ಇವೊತ್ತು ಬಂದಿದೆ. ನಮ್ಮ ಜನರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಹತ್ತು ವರ್ಷಗಳಲ್ಲಿ ಎಷ್ಟು ಅಭಿವೃದ್ಧಿಗೆ ತರಬೇಕೆಂದು ಇದೆಯೋ ಅದರ ಪ್ರಕಾರ ಒಂದು ಕೆಲಸವೂ ಆಗಿಲ್ಲ. ಇವೊತ್ತು ಕೇರಳ ರಾಜ್ಯದಲ್ಲಿರುವ ಕಮ್ಯುನಿಸ್ಟ್ ಸರ್ಕಾರ ತನ್ನ ಪ್ರಜೆಗಳಿಗಾಗಿ ಏನೇನು ಕಾರ್ಯಗಳನ್ನು ಮಾಡುತ್ತಿದೆಯೋ ಅದು ಇಡಿಯ ಹಿಂದೂ ದೇಶಕ್ಕೆ ಒಂದು ಮಾರ್ಗದರ್ಶನವಾಗಿರುತ್ತದೆ. ಇಷ್ಟರಲ್ಲಿಯೇ ಹತ್ತುವರ್ಷಗಳ ಗಡುವು ಮುಗಿದುಹೋಗುತ್ತದೆ. Entire Harijan population ಏನಿದೆ ಅದೆಲ್ಲ ಒಂದು ಕಡೆ ಕಮ್ಯುನಿಸ್ಟ್ ಆಗಿ ಬಂದರೆ ಆ ದೇಶಕ್ಕೆ ಒಂದು ದೊಡ್ಡ ಭೂತ ಬಂದಂ ತಾಗುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಹರಿಜನರನ್ನು ಮೋಸಮಾಡಲಿಕ್ಕೆ ಪ್ರಯತ್ನ ಮಾಡಬೇಡಿ. ಅವರನ್ನು ಕೆಳಕ್ಕೆ ತುಳಿಯುವುದಕ್ಕೆ ಪ್ರಯತ್ನ ಮಾಡಬೇಡಿ. ಈ ಮೂರುನಾಲ್ಕು ವರ್ಷಗಳಲ್ಲಿ ಹಗಲೂ ರಾತ್ರಿ ನಿಂತುಕೊಂಡು, ಒಟ್ಟು ದೇಶದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಎಂದು ತಿಳಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ಮಾತನಾಡುವಾಗ 'ನನಗೆ ಹರಿಜನರ ಮೇಲೆ ಹೆಚ್ಚಾದ ಪ್ರೀತಿ ಇದೆ, ಅವರು ಇವೊತ್ತು ಏನು ಕೇಳಿದರೂ ಸಹ, ಏನು ಅಂದರೂ ಸಹ ನನಗೆ ಕೋಪವಿಲ್ಲ, ಅವರ ಅಭಿವೃದ್ಧಿಗಾಗಿ ಎಲ್ಲ ಕಾರ್ಯವನ್ನೂ ಮಾಡಲು ಸಿದ್ಧ ಎಂದು" ಮುಂತಾಗಿ ಹೇಳಿದ್ದಾರೆ. ಈ ರೀತಿ ಹೇಳಿರುವುದು ಬಹಳ ಸಂತೋಷ. ಮಾನ್ಯ ಮುಖ್ಯ ಮಂತ್ರಿಗಳು ಮಾತಿನಲ್ಲಿ ಹೇಳಿರುವುದನ್ನು ಕಾರ್ಯರೂಪಕ್ಕೆ ತರಬೇಕು; ಮತ್ತು ಆ ಪ್ರಕಾರ ಕೆಲಸ ಮಾಡಬೇಕು. ಆ ರೀತಿ ನಿಜವಾಗಿ ಕೆಲಸಮಾಡಿದರೆ ನಾವು ಅವರನ್ನು ಪೂಜಿಸುತ್ತೇವೆ, ಗೌರವಿಸುತ್ತೇವೆ, ದೇವರ ಹಾಗೆ ನೋಡುತ್ತೇವೆ. ಆ ರೀತಿ ಕೆಲಸಮಾಡದೆ ಇದ್ದರೆ ಅದರಿಂದ ಮುಂದೆ ಬಹಳ ತೊಂದರೆಯಾಗುತ್ತದೆ ಎಂದು ಮಾತ್ರ ಹೇಳುತ್ತೇನೆ.

MR. SPEAKER.—The House will now rise for lunch and meet again at 10-30 A.M.

The House rose for lunch at Ten of the Clock and reassembled at Thirty Minutes past Ten of the Clock.

[MR. DEPUTY SPEAKER in the Chair]

ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮಾಲೂರು).—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರುವ ಪಶುವೈದ್ಯಕೀಯ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ನಾನು ಸರಕಾರದ ಗಮನಕ್ಕೆ ತರಬೇಕೆಂದಿದ್ದೇನೆ. ಈ ಮೊದಲು ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ ದಾನಪ್ಪ ಅವರು ಹರಿಜನರ ಸಲುವಾಗಿ ಏನೂ ಮಾಡಿಲ್ಲ ಎಂದು ಕೇವಲ ವಿರೋಧಕ್ಕಾಗಿ ವಿರೋಧಮಾಡಿ ಟೀಕೆಮಾಡಿದರು. ಈ ರೀತಿಯಾಗಿ ಸುಮ್ಮನೆ ಟೀಕೆ ಮಾಡದೆ ಏನಾದರೂ ರಚನಾತ್ಮಕ ಸಲಹೆ ಕೊಟ್ಟಿದ್ದರೆ ಚೆನ್ನಾಗಿತ್ತು. ಕಾಂಗ್ರೆಸ್ ರಾಜ್ಯ ಬಂದ ಲಾಗಾಯ್ತು ಹರಿಜನರಿಗೆ ಉಚಿತ ಶಿಕ್ಷಣ, ಮನೆಗಳ ಸೌಕರ್ಯ ಮುಂತಾದುವುಗಳನ್ನು ಮಾಡುತ್ತಿದ್ದಾರೆ. ಹರಿಜನರ ಅಭಿವೃದ್ಧಿಗಾಗಿ ಬೇರೆ ಜನರು ದುಡಿಯುವುದಿಲ್ಲ, ಕೇವಲ ಹರಿಜನರಾದವರೇ ಒಳ್ಳೆಯ ಸಲಹೆ ಕೊಡಬಲ್ಲರು; ಹಾಗು ಕೆಲಸಮಾಡತಕ್ಕವರು ಎನ್ನುವ ವಾದ ಸರಿಯಲ್ಲ. ಹರಿಜನರ ಉದ್ಧಾರ ಮಾಡುವುದರ ಸಲುವಾಗಿ ಇನ್ನುಳಿದ ಅನೇಕ ಜನರು ಸತತ ಕೆಲಸ ಮಾಡುತ್ತಿದ್ದಾರೆ. ಅವರು ರಚನಾತ್ಮಕ ಸಲಹೆಗಳನ್ನು ಕೊಡಬೇಕಾಗಿತ್ತು. ಹಾಗೆ ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದರೆ ಸರಕಾರಕ್ಕೂ ಹರಿಜನರಿಗೂ ಒಳ್ಳೆಯದು ಆಗುತ್ತಿತ್ತು. ಸುಮ್ಮನೆ ಟೀಕೆಗೋಸ್ಕರ ಟೀಕೆಮಾಡುತ್ತಾ ಹೋದರೆ ಅದರಿಂದ ಏನೂ ಪ್ರಯೋಜನವಾಗಲಾರದು.

ಇನ್ನು ಅನೇಕ ಸ್ನೇಹಿತರು ವ್ಯವಸಾಯದ ಸಂಬಂಧವಾಗಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ವ್ಯವಸಾಯಗಾರರ ಏಳಿಗೆಗೆ, ಅವರ ಉದ್ಧಾರಕ್ಕೆ ಸರಕಾರದವರು ಅಷ್ಟು ಗಮನ ಕೊಟ್ಟಿಲ್ಲವೆಂದು ಹೇಳಬೇಕಾಗುತ್ತದೆ. ಎಲ್ಲಿ ನೋಡಿದಲ್ಲಿ ವಿದ್ಯಾರ್ಥಿಗಳು, ಸರಕಾರಿ ನೌಕರರು, ಗುಮಾಸ್ತರು ಕೈಗಾರಿಕೆಯ ಕ್ಷೇತ್ರದಲ್ಲಿಯ ಕಾರ್ಮಿಕರು ಶಿಸ್ತಿನಿಂದ ಸಂಘಟನೆ ಮಾಡಿಕೊಂಡು ತಮ್ಮ ಏಳ್ಗೆಗಾಗಿ ದುಡಿಯುತ್ತಾ ಇದ್ದಾರೆ. ಆದರೆ ರೈತರು ಶಿಸ್ತಿನಿಂದ ಸಂಘಟಿತರಾಗಿ ಕೆಲಸ ಮಾಡುತ್ತಿಲ್ಲ. ರೈತರಾದರೂ ಸಹ ಶಿಸ್ತಿನಿಂದ ಒಕ್ಕಟ್ಟಿನಿಂದ ತಮ್ಮ ಏಳ್ಗೆಗಾಗಿ ಬೇಡಿಕೆಗಳನ್ನು ಸರಕಾರದ ಮುಂದಿಟ್ಟರೆ, ಸರಕಾರವು ಹೆಚ್ಚು ಗಮನ ಕೊಡಬಹುದೆಂದು ನನಗೆ ಎನಿಸುತ್ತದೆ.

ರೈತರು ಗೊಬ್ಬರವನ್ನು ಉಪಯೋಗಿಸುವುದರಿಂದ ಬೆಳೆಯು ಚೆನ್ನಾಗಿ ಬರುತ್ತದೆ. ಇತ್ತೀಚೆಗೆ ಅಮೋನಿಯಂ ಸಲ್ಫೇಟ್ ಮುಂತಾದ ಕೃತಕ ಗೊಬ್ಬರದ ಬೆಲೆಯು ಹೆಚ್ಚಾಗಿದೆ. ಬಡ ರೈತರಿಗೆ ಜಾಸ್ತಿ ಬೆಲೆ ಕೊಟ್ಟು ಕೃತಕ ಗೊಬ್ಬರವನ್ನು ಕೊಂಡುಕೊಳ್ಳುವದಕ್ಕೆ ಸಾಧ್ಯವಿಲ್ಲದಾಗಿದೆ. ಆದುದರಿಂದ ಸರಕಾರದವರು ಕೃತಕ ಗೊಬ್ಬರದ ಬೆಲೆಯು ಕಡಮೆಯಾಗುವಂತೆ ಮಾಡಬೇಕು. ಎಂದು ನಾನು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಈ ಮೊದಲು ಟ್ರ್ಯಾಕ್ಟರ್ ಬಾಡಿಗೆಯ ದರವು ಕಡಿಮೆಯಾಗಿತ್ತು. ಸಾಗು ಜಮೀನು ಉಳುಮೆ ಮಾಡಬೇಕಾದರೆ ಟ್ರಾಕ್ಟರ್ ಬಾಡಿಗೆಗೋಸ್ಕರ ಎಳು ರೂಪಾಯಿ ಕೊಟ್ಟಿದ್ದರೆ ಸಾಕಾಗಿತ್ತು. ಸಾಗು ಮಾಡದೇ ಇದ್ದ ಜಮೀನಿನ ಸಲುವಾಗಿ 10 ರೂಪಾಯಿ ಬಾಡಿಗೆ ಕೊಡಬೇಕಾಗಿತ್ತು. ಈಗ ಸಾಗುವಳಿ ಭೂಮಿಗೆ ಬಾಡಿಗೆಗಾಗಿ 18 ರೂಪಾಯಿ ಸರಕಾರಕ್ಕೆ ಕೊಡಬೇಕಾಗುತ್ತದೆ. ಇದರಿಂದ ಬಡ ರೈತರಿಗೆ ಬಹಳ ಅನ್ಯಾಯವಾಗುತ್ತಿದೆ. Service at cost ಖರ್ಚು ವಸೂಲು ಮಾಡುವ ದೃಷ್ಟಿಯಿಂದ ಜಾಸ್ತಿ ಮಾಡಿದ್ದಾರೆ. ರೈತರಿಗೆ ಸಹಾಯ ಮಾಡುವ ಉದ್ದೇಶದಿಂದ ಹೆಚ್ಚು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಸರಕಾರಕ್ಕೆ ಹೆಚ್ಚು ಖರ್ಚು ಬಂದರೂ ಚಿಂತೆಯಿಲ್ಲ, ಕಡಮೆ ದರದಲ್ಲಿ ಟ್ರಾಕ್ಟರ್ ಒದಗಿಸುವ ವ್ಯವಸ್ಥೆ

ಯನ್ನು ವ್ಯವಸಾಯ ಇಲಾಖೆಯ ಮುಖಾಂತರ ಸರಕಾರವು ಹೆಚ್ಚು ಹಣವನ್ನು ಒದಗಿಸಿ ಸಹಾಯಮಾಡಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಪಶುವೈದ್ಯ ಶಾಲೆಯ ಬಗ್ಗೆ ಹೇಳುತ್ತೇನೆ. ಮಾನವರ ಆಸ್ಪತ್ರೆಗಾಗಿ ಸರಕಾರ ಬಹಳ ಹಣ ಖರ್ಚು ಮಾಡುತ್ತಿದೆ. ಜಿಲ್ಲಾ ಬೋರ್ಡು, ಪೌರಸಭೆಗಳು ಕಟ್ಟಡ ಕಟ್ಟಿಸುವುದಕ್ಕೆ ಹಣ ಕೊಡುತ್ತಿವೆ. ಹೋಬಳಿಗೆ ಒಂದಾದರೂ ಆಸ್ಪತ್ರೆಯಾಗಿದೆ. ಆದರೆ ಈ ಮೂಕ ಪ್ರಾಣಿಗಳ ಆರೋಗ್ಯ ರಕ್ಷಣೆಯ ಕಡೆಗೆ ಸರಕಾರ ಹೆಚ್ಚು ಗಮನ ಕೊಡುತ್ತಿಲ್ಲ. ತಾಲ್ಲೂಕಿಗೆ ಒಂದೆರಡು ಪಶುವೈದ್ಯಶಾಲೆಗಳು ಇವೆ. ಪಶುವೈದ್ಯಶಾಲೆಗಳನ್ನು ಕಟ್ಟಬೇಕಾದರೆ ಯಾರಾದರೂ ದಾನಿಗಳು ಮುಂದೆ ಬರಬೇಕಾಗಿದೆಯೇ ಹೊರತು ಸರಕಾರ ತಾನಾಗಿಯೇ ಕಟ್ಟಡಗಳನ್ನು ಕಟ್ಟಿಸುತ್ತಿಲ್ಲ. ಆಯವ್ಯಯ ಪಟ್ಟಿಯಲ್ಲಿ ಸಾಕಷ್ಟು ಹಣ ಇಟ್ಟಿಲ್ಲ. ಯಾರಾದರೂ donation ಕೊಟ್ಟರೆ ಈ ಬಗ್ಗೆ ಅವಕಾಶ ಮಾಡಿಕೊಡುತ್ತಾರೆ. ಮಾನವರ ಆರೋಗ್ಯವು ಎಷ್ಟು ಮುಖ್ಯವೋ ಅಷ್ಟೇ ಮೂಕ ಪ್ರಾಣಿಗಳ ಪಶುಗಳ ಆರೋಗ್ಯ ರಕ್ಷಣೆಮಾಡುವುದೂ ಮುಖ್ಯವಾದುದು. ನಾನು ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುವದೇನೆಂದರೆ ಪಶುವೈದ್ಯಶಾಲೆಯ ಕಟ್ಟಡಗಳ ಸಲುವಾಗಿ ಹಣವನ್ನು ಮೀಸಲಾಗಿಟ್ಟು ಅಲ್ಲಲ್ಲಿ ಪಶುವೈದ್ಯಶಾಲೆಯ ಕಟ್ಟಡಗಳನ್ನು ಕಟ್ಟಿಸಬೇಕು. ಮಾಲೂರು ತಾಲ್ಲೂಕು, ಶಿವಾರ ಪಟ್ಟಣದಲ್ಲಿ ಪಶುವೈದ್ಯಶಾಲೆಯ ಕಟ್ಟಡವಿಲ್ಲ. 3,000 ರೂಪಾಯಿ ಬೇಡುತ್ತಿದ್ದಾರೆ. ಆಸ್ಪತ್ರೆಯ ಕಟ್ಟಡದ ಸೌಕರ್ಯವಿಲ್ಲದೇ ಇರುವಲ್ಲಿ ಸರಕಾರವು ಜಾಗ್ರತೆ ಕಟ್ಟಡ ಕಟ್ಟಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜನರ ಆರೋಗ್ಯಕ್ಕೆ ಚಲಿಸುವ ಆಸ್ಪತ್ರೆಗಳನ್ನು ಉಪಯೋಗಿಸುವಂತೆ ಪಶುವೈದ್ಯಕೀಯ mobile hospital ಗಳನ್ನು ತಾಲ್ಲೂಕಿಗೆ ಒಂದೆರಡು ಮಾಡಬೇಕು. ಏಕೆಂದರೆ ಕಾಯಿಲೆ ಬಿದ್ದ ದನಗಳನ್ನು ತಾಲ್ಲೂಕು ಆಸ್ಪತ್ರೆಗೆ ಹೊಡೆದುಕೊಂಡು ಬರಲಿಕ್ಕೆ ಸಾಧ್ಯವಿಲ್ಲ. ಪಶುವಿನ ಆರೋಗ್ಯ ಕಾಪಾಡಲಿಕ್ಕೆ ಹೋಬಳಿಗೆ ಒಂದೆರಡು mobile hospitals for treatment of cattle diseases ಮಾಡಿದರೆ ಬಹಳ ಪ್ರಯೋಜನವಾಗುವುದೆಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ. ಇದಕ್ಕೆ ಹಣ ಒದಗಿಸಿ ಏರ್ಪಾಡು ಮಾಡಬೇಕೆಂದು ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಗ್ರಾಮಾಭಿವೃದ್ಧಿಯ ಸಲುವಾಗಿ ಸರಕಾರ ಸ್ವಲ್ಪ ಹಣ ಕೊಟ್ಟಿದ್ದಾರೆ. ಗ್ರಾಮಾಭಿವೃದ್ಧಿಗೆ ಒದಗಿಸಲಾಗುತ್ತಿರುವ ಹಣ ಸಕಾಲದ ತಾಲ್ಲೂಕುಗಳಿಗೆ ತಲುಪುತ್ತಿಲ್ಲ. ಇದರಿಂದ ಒದಗಿಸಿದ ಹಣ ವೆಚ್ಚವಾಗುತ್ತಿಲ್ಲ. ಹಣ ಖರ್ಚಾಗದೆ ಕೆಲಸ ನಿಂತುಹೋಗುತ್ತದೆ. ಇದನ್ನು ಅನೇಕ ಸದಸ್ಯರು ಈ ಮೊದಲೇ ಹೇಳಿದ್ದಾರೆ. ಜಾಗ್ರತೆಯಾಗಿ ಹಣ ತಾಲ್ಲೂಕಿಗೆ ಸೇರುವ ಹಾಗೆ ಮಾಡಬೇಕು. ಅಡ್ವೈಜರಿ ಸಮಿತಿ ಮಾಡಿದ್ದಾರೆ. ಡೆವಲಪ್‌ಮೆಂಟ ಬೋರ್ಡ್ಸ್ ಪ್ಲಾನಿಂಗ್ ಮಾಡಬೇಕಾಗುತ್ತದೆ ಎಂದು ನನಗೆ ಗೊತ್ತಾಗಿದೆ. ಸಮಿತಿಯನ್ನು ಜಾಗ್ರತೆಯಾಗಿ ರಚನೆಮಾಡಿ ಯೋಜನೆಯನ್ನು ತಯಾರು ಮಾಡಬೇಕು ಮತ್ತೆ ಯೋಜನೆಗಳನ್ನು ಕಾರ್ಯಗತಮಾಡುವುದಕ್ಕೆ ಒದಗಿಸಿದ ಹಣ ಸದ್ವಿನಿಯೋಗವಾಗುವುದಕ್ಕೆ ಸಕಾಲದಲ್ಲಿ ತಾಲ್ಲೂಕಿಗೆ ಹಣ ದೊರಕುವಂತೆ ಜಾಗ್ರತೆ ಏರ್ಪಾಡು ಮಾಡಬೇಕೆಂದು ಹೇಳಿ ಸಭೆಯ ಮುಂದಿರುವ ಬೇಡಿಕೆಗಳನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜೆ. ವೆಂಕಟಪ್ಪ (ಶಿಡ್ಲಘಟ್ಟ).—ಅಧ್ಯಕ್ಷ ಮಹಾಶಯರೇ, ಈ ದಿನ ಸರ್ಕಾರದವರು ನಮ್ಮ ಮುಂದೆ ವ್ಯವಸಾಯದ ಬೇಡಿಕೆಯನ್ನು ಇಟ್ಟಿದ್ದಾರೆ. ವ್ಯವಸಾಯದಲ್ಲಿಯೇ ನಮ್ಮ ದೇಶದ ಬಹು ಜನರು ನಿರತರಾಗಿರತಕ್ಕವರು. ಅವರು ನೆಲಸತಕ್ಕ ಸ್ಥಳಗಳು ಹಳ್ಳಿಗಳು. ಇದು ವ್ಯವಸಾಯದಲ್ಲಿ ಅತಿ ಮುಖ್ಯ ಪಾತ್ರವನ್ನು ವಹಿಸಲಿರುವ ಪಶುಸಂಪತ್ತು, ಇವುಗಳ ಆರೋಗ್ಯ ರಕ್ಷಣೆ ಮತ್ತು ಪಶುಸಂಪತ್ತಿನ ಅಭಿವೃದ್ಧಿ ಇವುಗಳಿಗೆ ಸಂಬಂಧಪಟ್ಟ ಬೇಡಿಕೆಯಾಗಿದೆ. ವ್ಯವಸಾಯದ ಅಭಿವೃದ್ಧಿ ಮತ್ತು ದೇಶದ ಆರ್ಥಿಕಾಭಿವೃದ್ಧಿ ಇವೆರಡೂ ಒಂದನ್ನೊಂದು ಅವಲಂಬಿಸಿವೆ. ಈ ನೀತಿಯನ್ನು ಸರ್ಕಾರ ಅರಿತು ವ್ಯವಸಾಯಾಭಿವೃದ್ಧಿಗಾಗಿ ಹೆಚ್ಚಿನ ಯೋಜನೆಗಳನ್ನು ತಯಾರುಮಾಡಿ ಅವುಗಳನ್ನು ಅನುಷ್ಠಾನದಲ್ಲಿ ತಂದು ಆಮೂಲಕ ಅನೇಕ ಲೋಪದೋಷಗಳನ್ನು ಹೋಗಲಾಡಿಸಲು ನಮ್ಮ ಸರ್ಕಾರಕ್ಕೆ ಈ ಬೇಡಿಕೆಗಳು ಅವಶ್ಯವಾಗಿದೆ. ಆದರೆ ಈ ಲೋಪ ದೋಷಗಳು ಆಯಾ ಮಟ್ಟದಲ್ಲಿ ಇದ್ದು ಅಲ್ಲಿರುವ ತೊಡಕುಗಳನ್ನು ಹೋಗಲಾಡಿಸಲಿಕ್ಕೆ ಅಶಕ್ಯವಾದ ಈ ಸರ್ಕಾರದ ಬೇಡಿಕೆಯನ್ನು ನಾವು ಅನುಮೋದಿಸುವುದು ಎಂದರೆ ಅರ್ಥವೇನು? ಈಗಿರತಕ್ಕ ವ್ಯವಸಾಯ ನೀತಿಯು ಯೋಜನಾಕಾರ್ಯಗಳೇನಾದರೂ ಕಾರ್ಯಗತವಾದರೆ ಇನ್ನೂ ಅನೇಕಜನ ನಿರುದ್ಯೋಗಿಗಳಾಗುತ್ತಾರೆ. ಆದ್ದರಿಂದ ಪ್ರತಿಯೊಂದು ಸಂಸಾರಕ್ಕೂ ಒಂದು ಎಕನಾಮಿಕ್ ಯೂನಿಟ್ ಎಂದು ಮಾಡಬೇಕು. ನಾವು ಇಂತಹ ಯೋಜನೆಯನು ಮಾಡದಿದ್ದರೆ, ಮುಂದುವರಿ ದಿದ್ದರೆ, ನಿರುದ್ಯೋಗ ಸಮಸ್ಯೆ ಪೂರ್ತಿಯಾಗಿ ಬಗೆ ಹರಿಯದೆ ಇನ್ನೂ ಹೆಚ್ಚಾಗುತ್ತದೆ. ಅದಕ್ಕಾಗಿ ಹೆಚ್ಚು ಪಶುಸಂಪತ್ತಿನ ಅಭಿವೃದ್ಧಿಯನು ಉಂಟುಮಾಡಬೇಕು. ನಮ್ಮ ಪಶುಗಳನ್ನು ಶಕ್ತಿಯುತವಾಗಿ ಮಾಡಬೇಕು ಎನ್ನುವಾಗ ಸರ್ಕಾರ ಕೇವಲ ಈ ಬಾಬಿಗೆ 75 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ನ್ಯಾಯರಹಿತವಾದುದು. ಇದರಿಂದ ನಾವು ಯಾವ ನಿರ್ದಿಷ್ಟವಾದ ಯೋಜನೆಯನ್ನು ಸಾಧಿಸುವುದಕ್ಕಾಗುವುದಿಲ್ಲ. ಹೀಗಿರುವಾಗ ಈಗ ಒದಗಿಸಿರುವ ಮೊತ್ತ ಏನೇನೂ ಸಾಲದು. ನಮ್ಮ ಪಶು ಸಂಪತ್ತನ್ನು ಅಭಿವೃದ್ಧಿಪಡಿಸಬೇಕಾದರೆ, ಒಳ್ಳೆಯ ಬೀಜದ ಹೋರಿಗಳು ಬೇಕು. ಆದರೆ ಈಗ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ನಿಗೋಸ್ಕರ ಒಳ್ಳೆಯ ಬೀಜದ ಹೋರಿಗಳಿಂದ ವೀರ್ಯವನ್ನು ತೆಗೆಯುವುದರಿಂದ ಅವುಗಳಲ್ಲಿ ವೀರ್ಯ ದಿನೇ ದಿನೇ ಕಡಮೆಯಾಗಿ ನಿಶ್ಶಕ್ತಿಯನ್ನು ಕಾಣುತ್ತಿದ್ದೇವೆ ಕೆಲವು ತಿಂಗಳಲ್ಲಿಯೇ ಅವುಗಳ ಶಕ್ತಿಕುಂದಿರುವುದು, ಅವುಗಳ ರೂಪರೇಖೆಗಳಿಂದಲೇ ಕಂಡುಬರುತ್ತದೆ ಕೆಲವು ಕಡೆ ಸರ್ಕಾರದವರು ಹೋರಿಗಳನ್ನು ಸಪ್ಲೈ ಮಾಡಿದ್ದಾರೆ. ಅವುಗಳಲ್ಲಿ ಎಷ್ಟೋ ಹೋರಿಗಳು ಇಂಪೊಟೆಂಟ್ ಎಂದು ಸರ್ಕಾರಕ್ಕೆ ಕಂಡು ಬಂದು ಅವುಗಳನ್ನು ಬದಲಾಯಿಸಿರುವ ಸಂದರ್ಭಗಳೂ ಇವೆ. ಹೋದ ಮಾರ್ಚಿಯಲ್ಲಿ ನಮ್ಮ ಸರ್ಕಾರದವರು ಶಿಡ್ಲಘಟ್ಟದಲ್ಲಿ ಒಂದು ಕೋಣವನ್ನು ಒದಗಿಸಿ ಕೊಟ್ಟಿದಾರೆ. ಆ ಕೋಣ 1,600 ರೂಪಾಯಿ ಬೆಲೆ ಬಾಳತಕ್ಕದ್ದು. ಅಂತಹ ಕೋಣವು ಸಹ ಇಂಪೊಟೆಂಟ್ ಎಂದರೆ ಸರ್ಕಾರದ ಸಹಾಯವೇನಾಯಿತು? ಇಂತಹ ಕೋಣಗಳಿಂದ ಏನು ಉಪಯೋಗವಾಗುತ್ತದೆ ಎಂಬುದನ್ನು ತಾವೇ ಯೋಚನೆಮಾಡಬೇಕು. ನಮ್ಮ ವ್ಯವಸಾಯದ ಮಟ್ಟವನ್ನು ಹೆಚ್ಚಿಸುವುದಕ್ಕೆ ಸರ್ಕಾರ ಯೋಚನೆ ಮಾಡಬೇಕು. ಈಗ

(ಶ್ರೀ ಜೆ. ವೆಂಕಟಪ್ಪ)

ಅನುಷ್ಠಾನಕ್ಕೆ ತಂದಿರುವ ಕೆಲವು ಯೋಜನೆಗಳ ಬಗ್ಗೆ ಪುನಃ ಪರಿಶೀಲನೆ ಆವಶ್ಯಕ. ವ್ಯವಸಾಯದ ಮಟ್ಟ ಹೆಚ್ಚಬೇಕಾದರೆ ರೈತನಿಗೆ ಸಕಾಲದಲ್ಲಿ ಸರಿಯಾದ ಬಿತ್ತನೆ ಬೀಜ ಹಾಗೂ ಗೊಬ್ಬರ ಆವಶ್ಯಕ. ಅವನಿಗೆ ಅವುಗಳ ಕುಂದುಕೊರತೆಗಳು ಹೇಳತೀರದು. ನಮ್ಮ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ವ್ಯವಸಾಯದ ಒಂದು ಸೆಕ್ಷನ್ನನ್ನು ತೆರೆದು ಅಲ್ಲಿ ಒಬ್ಬ ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರನ್ನು ನೇಮಿಸಿ ಅವರ ವಶದಲ್ಲಿ ಇಬ್ಬರು ಮೂವರು ಫೀಲ್ಡ್‌ಮೆನ್‌ಗಳನ್ನು ಇಟ್ಟು ಆಯಾ ತಾಲ್ಲೂಕು ಪರ್ಯಂತ ಸಕಾಲದಲ್ಲಿ ಬಿತ್ತನೆ ಬೀಜ ಮತ್ತು ಗೊಬ್ಬರಗಳನು ಒದಗಿಸುವ ಪ್ರಯತ್ನ ಮಾಡದೇ ಇದ್ದರೆ ಆಗ ಅಧಿಕಾರಿಗಳಲ್ಲಿ ಅನುಭವ ಶೂನ್ಯ ಎಂದು ಹೇಳಬೇಕು. ಯಾವ ಒಂದು ನಿರ್ದಿಷ್ಟವಾದ ಸೀಜನ್ನಿನಲ್ಲಿ ಬಿತ್ತನೆಯ ಬೀಜ ಒದಗಬೇಕೋ ಅದು ಒದಗುತ್ತಾ ಇಲ್ಲ. ಹೀಗಾಗಿರುವುದರಿಂದ ಈ ಕಾರ್ಯವನ್ನು ವಹಿಸಿಕೊಂಡಿರುವವರು ಅನುಭವಶೂನ್ಯರು ಎಂದು ನನಗೆ ಕಂಡು ಬರುತ್ತದೆ. ನಾಲ್ಕು ಪ್ರದೇಶಗಳ ಗ್ರಾಮಾಂತರ ಪ್ರದೇಶಗಳಲ್ಲಿ ಬೆಳೆ ಪ್ರತಿ ವರ್ಷವೂ ಬರುತ್ತದೆ. ಒಂದೇ ತರಹವಾದ ಬೀಜದ ಅಭಾವ, ಬಿತ್ತನೆಯ ಬೀಜದ ಅಭಾವ ಬರುತ್ತದೆ. ಬಿತ್ತನೆಯ ಬೀಜ ಎಷ್ಟು ಬೇಕು ಎಂಬ ನಿಗದಿ ಇರುತ್ತದೆ. ಕೆಲವು ವೇಳೆ ಮಳೆಯ ದೆಸೆಯಿಂದ ಎಲ್ಲೆಲ್ಲಿ ನಾಲೆ, ನೀರಾವರಿ, ನದಿ, ಕುಂಟೆಗಳಿವೆಯೋ ಅಲ್ಲಿನ ಬೆಳೆಗಳು ಹಾಳಾಗುವುದುಂಟು ಮುಂದಿನ ವರ್ಷ ಬಿತ್ತನೆಗೆ ಹೆಚ್ಚಿನ ಬೀಜ ಬೇಕಾಗುವುದರಿಂದ ಜನತೆಯ ಬೇಡಿಕೆ ಬಂದೇ ಬರುತ್ತದೆ ಎನ್ನುವುದನ್ನು ಸರಕಾರದವರು ಮೊದಲೇ ಮನವರಿತು ಹೆಚ್ಚಿನ ಏರ್ಪಾಡುಗಳನ್ನು ಮಾಡಬೇಕು. ಬಿತ್ತನೆಯ ಬೀಜಗಳನ್ನು ಒದಗಿಸುವ ಕಾರ್ಯವನ್ನು ಇನ್ನು ಮಾಡಲಿಲ್ಲ. ಹಾಗೆಯೇ ಭೂಮಿಯ ಸತ್ತ್ವಗುಣವೂ ಕಡಮೆಯಾಗಿದೆ. ಆದ್ದರಿಂದ ಬೆಳೆಯದೆ ಇರತಕ್ಕ ಭೂಮಿ ಎಂಥಾದ್ದು ಎಂದು ಆಗಾಗ್ಗೆ ಪರೀಕ್ಷೆಮಾಡಿ ಆಯಾ ಬೆಳೆಗೆ ತಕ್ಕ ಭೂಮಿಯನ್ನು ಒದಗಿಸಬೇಕು. ಆ ರೀತಿಯಾದ ಅನುಕೂಲಗಳನ್ನು ಒದಗಿಸಬೇಕಾಗಿದ್ದರೆ ತರೀತರಹ ಗೊಬ್ಬರ, ಬಿತ್ತನೆಯ ಬೀಜಗಳನ್ನು ಒದಗಿಸಬೇಕು. ಈ ಸಾರಿ ಮಾನ್ಯ ಮಂತ್ರಿಗಳು ಸಕಾಲದಲ್ಲಿ ಇವುಗಳನ್ನು ರೈತರಿಗೆ ಒದಗಿಸುವ ಹಾಗೆ ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಬೇಡುತ್ತೇನೆ. ಈಗೀಗ ಕೆಲವು ಬೆಳೆಗಳಿಗೆ ಕೆಲವು ರೋಗಗಳು ಅತಿ ಮುಖ್ಯವಾಗಿ ಉಂಟಾಗುತ್ತವೆ. ಈಗ ಆಲೂಗಡ್ಡೆ ಮತ್ತು ಹೊಗೆಸೊಪ್ಪು ಬೆಳೆಗಳನ್ನು ತೆಗೆದುಕೊಳ್ಳೋಣ. ಇವು ವಿಶೇಷವಾಗಿ ದೇಶಕ್ಕೆ ಉತ್ಪತ್ತಿಯನ್ನು ತರತಕ್ಕವು ದೇಶಕ್ಕೆ ಹಣವನ್ನು ಒದಗಿಸುವಂಥವು. ಈಚೆಗೆ ಹೊಸದಾಗಿ ಕಪ್ಪು ರೋಗ ಹೊರಟಿದೆ. ಅದು ಭೂಮಿಯ ಮಟ್ಟದಿಂದ ಫಸಲು ಬರುವುದಕ್ಕೆ ಇನ್ನೇನು ಒಂದು ಒಂದೂವರೆ ತಿಂಗಳಿದೆ ಎಂದು ಗೊತ್ತಾದ ಕಾಲದಲ್ಲಿ ಬರುತ್ತದೆ. ಇದರಿಂದ ಬೆಳೆಗಳು ನಷ್ಟವಾಗುತ್ತವೆ. ಆ ರೋಗ ಬಂದ ಮೇಲೆ ಬೆಳೆ ಪೂರ್ತಿಯಾಗಿ ಆಗುವುದೇ ಇಲ್ಲ ಇದರಿಂದ ವಿಪರೀತ ನಷ್ಟವಾಗುತ್ತದೆ. ಒಂದು ವೇಳೆ ಹೊಗೆಸೊಪ್ಪಿಗೆ ಈ ಕಾಯಿಲೆ ಬಂದರೆ, ತಕ್ಷಣ ಇದ್ದಕ್ಕಿದ್ದ ಹಾಗೆಯೇ ಒಣಗಿ ಕೆಳಗೆಬಿದ್ದು ಹೋಗುತ್ತದೆ. ಆದುದರಿಂದ ಸರ್ಕಾರದವರು ಈ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ರೈತರಿಗೆ ಆದಷ್ಟು ಜಾಗ್ರತೆ ಸೂಕ್ತ ಪರಿಹಾರವನ್ನು ಕೊಡಬೇಕೆಂದು ಬೇಡುತ್ತೇನೆ.

Sri H. V. KOUJALGI (Sampagaon I).—I rise to support the Demands now before the House. I confine my remarks so fa ras Bombay Karnatak area is concerned, with which I am concerned. Firstly, I confine my speech to some of the local research centres which are situated in my areas. I want to make certain suggestions so far as these centres are concerned. They are not working properly for two or three reasons.

In the first place, this research problem is such which requires specialisation and only a few graduates can take up this subject. In this Scheme, Sir, I find that the officers are transferred often. When a particular officer takes a particular subject in research, in a year or two he is transferred so that that subject is hampered or research cannot proceed. Secondly, Sir, I find that an officer who is doing research in cereal is transferred to do research in tobacco and the tobaccoman is transferred to the cereal department. I do not know how this research can go on successfully if hands are changed when it is a special subject. The other drawback which I find is that the result of the research is not carried to the villages at the door of the agriculturists which is necessary. The results of the research whatever they are, are published on one day in a year, calling 'Farmers' day' as it is observed in my side and on that occasion some big people like leaders, doctors and rich people are invited and the farmers are not at all invited there and such functions are observed in urban areas. The real farmers cannot take advantage of it. The results of research are meant for the farmers and they are expected to go to the farm and take advantage of the research. The difficulty is that they are ignorant. In my humble opinion, the results of research should reach the doors of the agriculturists by way of propaganda. Now, Sir, the third point so far as research is concerned, is, that there is a research station in my District. At Arbhavi and roundabout, maize is grown abundantly. The Central Government have chalked out a hybrid maize growing programme. So far as I learn, that has been recommended by the Indian

Council of Agricultural Research and I am also told that this is a beneficial scheme. Now-a-days maize has got very great importance and it is even used as food. That scheme should be accepted. There are two reasons for it. The Rockfeller Foundation have given some liberal contribution sbecause they bear the expenses required for appartus and implements and they give also technical help free of cost. So, what the Government simply has to do is to give some area and irrigation facilities. Here, Sir, we have got hundresds of acres of land; irrigation facilities and electric power are also available. So, what is required to be done is to construct a few buildings worth about Rs. 20,000 to Rs. 30,000. While under the Rockfeller Scheme, we got nearly Rs. 1,00,000 and that will become subsequently the Government property. I therefore strongly request the Government to accept the scheme as early as possible. Now, Sir, the fourth point which I want to suggest is, in my side, there are schemes called the Demonstration schemes. Some demonstrations are carried on in one or two villages here and there. But they are not properly working. My humble opinion is that it is a sheer waste of money. Either they should be reorganised or they should be abolished altogether. So far as Veterinary is concerned, in the four districts of old Bombay State, we have got one dispensary for each taluka and the Bombay Government used to say that for want of veterinary surgeon, more dispensaries could not be opened. To meet the demand of the Public, they introduced a short course called tne Stockmen's course. But for the last two years, that course has been stopped and I request the Government that Stockmen's course should be reintroduced and they should be trained. On our side, the Panchayets and villagers are willing to bear expenses if a dispensary with a stockman is opened; they are also prepared to give a building and meet the expenses of medicine. So, what the Government has todo is to only provide stockmen. So, I submit, Sir, considering the wealth of our cattle on our side and the handicaps to which our villagers are put at present, since they will have to go 30 to 40 miles for medical aid to their cattle, this course should be reopened and stockmen should be trained and dispensaries should be provided in large numbers. Lastly, Sir, there is a proposal before the Government to open a veterinary college and I have already said once on the floor of this House and I still say that Dharwar would be the proper place to open this College. I earnestly request the Government to open the Veterinary College at Dharwar where all the necessary facilities are available. I thank you.

Sri V. SRINIVASA SHETTY (Coondapur).—Sir, within the short space of time allowed to me, I will not be able to do full justice to all the Demands. So, I wish to say a very few words with regard to one subject, fisheries. I happily concur with what my Hon'ble friend Mr. Shamsuddin said and I wish to add a few words thereto. Many Members here do not know what delicious and nutritious food fish is. I would like more people to take to tasting and eating fish. The house, perhaps knows that in Japan, it is a staple food and that she has advanced by leaps and bounds because of the fact that the phosphate content in fish is very high and it is the poor man's protein as a substitute for mutton. So, I wish more and more people to take to eating fish because in Northern India and in Bengal, it is generally called a vegetable. After all, it is midway between flesh and vegetable and there is nothing wrong in considering it a vegetable and in beginniug to eat fish.

Sri R. CHENNIGARAMIAH.—It will then become costlier!

Sri V. SRINIVASA SHETTY.—Economically, also, in America, it has been found that an acre of fishing tank yields more income than an agricultural area of similar size. It is found to be an economic proposition to rear fish in areas where you cannot grow other foodstuffs. I am really glad that the Government of India and also this State have come to the realisation that it is one of the most important things

(SRI V. SRINIVASA SHETTY)

that the Government has to do because the area which we have got for growing food is very limited, but the area where we can rear fish is unlimited, and we can produce unlimited quantities of fish which we can substitute for other varieties of foodstuffs. Sir, I have got a better claim to speak about these things rather than most other Members because I come from South Kanara and there are only two Districts where fishing is one of the most important vocations. Mr. Shamsuddin comes from North Kanara and I come from South Kanara and we are better qualified to speak about fish and further I am a fish eater and therefore I can speak with personal knowledge. I find from the Mysore Second-Five Year Plan that Rs. 74·42 lakhs have been set apart for developing fishing industry. If I go into all the developmental schemes that are adumbrated in the Budget, it will take me a long time. What I wish to bring to the notice of the Government is that I have gone through several schemes which they have put forth in the Budget but I find that they depend more upon foreign experts, American, Norwegian and Swedish Experts, to develop our industry. I have got great admiration for the Minister for Agriculture, but I do not know whether he knows the taste of fish. So he may not have appreciated the nutritious qualities or the economic aspects of the fishing industry as such. My friend Mr. Shamsuddin spoke something about fish. Before coming to the question of fishing industry, we have to consider the lot of fishermen. I know fishermen intimately because most of the voters in my constituency come from the fishermen community. We have to consider the condition in which they live. There are what are called middlemen. They advance a lot of money to the fishermen. The fishermen are in the grips of the middlemen. Whatever they catch, 75 per cent of that goes to the middlemen. These illiterate fishermen borrow a lot of money from the middlemen for their livelihood and whatever they catch, they cannot note it down, they cannot ask for accounts. It is the middlemen who get the benefit of the bulk catch. The question has not been gone into at all. Throughout the coastal belt for 200 miles, these fishermen are in the grips of middlemen. They borrow a lot of money. Does the house know the rate of interest that is charged ? It is about 25 per cent. It is fantastic. Unless we take these fishermen away from the grips of the middlemen, any amount of lecture or high sounding words, will be of no avail. My suggestion is, the Government must give easy credit facilities to the fishermen.

The next thing is, for whatever they catch, they don't get marketing facilities and transport facility. The first thing the Government have to do is to go to the coastal villages and see whether there are easy approaches to the sea. Give them good roads so that they can have good markets. Either the purchasers can go to the place where the catch is got or the fish caught can easily be transported to the market area. So I would suggest that easy transport facilities and easy road communication should be given to them in these coastal regions.

Unfortunately, a portion of South Canara has been ceded to Kerala. We have only a few miles of railway. Unless the Government connect North Canara and South Canara with railway communication, this industry cannot be improved. This Government should impress upon the Central Government to have a railway line throughout the coastal belt from one end to the other. A number of experts have come; a number of other people are coming. Instead of mechanising the whole thing, in the first instance, they must train a good number of fishermen in their trade. They must send a sufficent number of people to countries like Japan, England or Norway to know all about this industry. They say 'We do not know what is mechanisation'. They are simply flabbergasted on knowing that a ship or a mechanised transport costs about Rs. 50,000 or one lakh. They are afraid that they will be deprived of their livelihood. My suggestion to the

Government is: upgrade the present system of fishing, the nets and boats and gradually mechanise the whole thing instead of jumping to the mechanisation in the first instance. I suggest that these few things may be taken into consideration with regard to the fisheries in the two districts. The fishing industry is one of the most important industries as it increases the food value of the whole State. I have got a lot of things to say, but I have no time. I would suggest that Government may consider these things seriously and appoint a non-official committee. People here in the interior parts of Mysore may not be knowing of things about fishing. So the non-official committee may consist of persons coming from the two coastal districts—a few non-officials who are in the know of things. Such a committee may be constituted and their advice taken—don't say, followed—before introducing any drastic things in this affair.

ಶ್ರೀ ಟಿ. ಎಣ್. ಮೂಡಲಗಿರಿಗೌಡ (ಕುಣಿಗಲು).—ಈ ಡಿಮ್ಯಾಂಡ್ ಬಗ್ಗೆ ಚರ್ಚೆ ಎಷ್ಟು ಹೊತ್ತಿನವರೆಗೆ ಮುಂದುವರಿಯುತ್ತದೆ ; ಮತ್ತು ಈ ದಿವಸದ ಕಾರ್ಯಕ್ರಮದ ಪ್ರಕಾರ ಏನು ಕೆಲಸ ನಡೆಯುಬೇಕೋ ಅದಕ್ಕೆಲ್ಲ ಅವಕಾಶವಿದೆಯೆ ಎಂಬುದು ಗೊತ್ತಾಗಬೇಕು. ಇದು ಒಂದು ವೇಳೆ ಮುಂದುವರಿಯುವುದಾದರೆ ಯಾರುಯಾರಿಗೆ ಮಾತನಾಡುವುದಕ್ಕೆ ಇಷ್ಟವಿದೆಯೋ ಅವರೆಲ್ಲರಿಗೂ ಅವಕಾಶ ಸಿಕ್ಕುತ್ತದೆಯೆ ಎಂಬುದನ್ನು ತಿಳಿಸಬೇಕು. ಎಲ್ಲರಿಗೂ ಅವಕಾಶ ಸಿಕ್ಕುವುದಿಲ್ಲವೆಂಬ ಭಾವನೆಯಿದೆ. ಹಾಗಿರುವಾಗ ಕಾಲ ನಿಗದಿ ಮಾಡಿದೆಯೆ ಇಲ್ಲವೆ ಎಂಬುದು ಗೊತ್ತಾಗಬೇಕು.

ಉಪಾಧ್ಯಕ್ಷರು.—ಏಳು ನಿಮಿಷ ಒಬ್ಬ ಸದಸ್ಯರಿಗೆ ನಿಗದಿಮಾಡಿದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಈ ಡಿಮ್ಯಾಂಡ್ ಸಂಬಂಧವಾದ ಚರ್ಚೆಗೆ ಎಷ್ಟು ಕಾಲಾವಕಾಶವಿದೆಯೆಂಬುದನ್ನು ನಾನು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಅದನ್ನು ಆ ಮೇಲೆ ಹೇಳುತ್ತೇನೆ.

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ವ್ಯವಸಾಯ ಮತ್ತು ವೆಟರಿನರಿ ಡಿಮ್ಯಾಂಡ್‌ಗಳನ್ನು ಸ್ವಾಗತಿಸಿ ನಾಲ್ಕು ಮಾತುಗಳನ್ನು ಸಲಹಾ ರೂಪವಾಗಿ ಹೇಳುತ್ತೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಲ ವಿಳಂಬಮಾಡದೆ ಪಟ್ಟಣಗಳಲ್ಲಿ ಯಥೇಚ್ಛವಾಗಿ ಹಾಲನ್ನೊದಗಿಸಲು ಡೈರಿಫಾರಂಗಳನ್ನು ಜಾಗ್ರತೆಯಾಗಿ ತೆರೆದು ಸಾರ್ವಜನಿಕರಿಗೆ ಸಹಾಯಮಾಡಿ ಜನಾಂಗ ಮತ್ತು ಮಕ್ಕಳು ಅಭಿವೃದ್ಧಿಯಾಗಿ ದೃಢಕಾಯರಾಗಿ ಬೆಳೆಯಲು ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶಿವಮೊಗ್ಗ ಡಿಸ್ಟ್ರಿಕ್ಟು ಮಲೆನಾಡಿನ ಭಾಗವಾಗಿದೆ. ಮೈಸೂರು ಸಂಸ್ಥಾನದಲ್ಲಿ ಮೂರನೆಯದಾಗಿದೆ. ನಮ್ಮ ಕಡೆಯವರು ವ್ಯವಸಾಯ ಮಂತ್ರಿಗಳಾಗಿದ್ದಾರೆ. ಅವರಿಗೆ ರೈತರ ವಿಚಾರ ಚೆನ್ನಾಗಿ ಗೊತ್ತಿದೆ. ರೈತನ ಮನೆತನದವರಾದ ಶ್ರೀ ಎಚ್. ಎಸ್. ರುದ್ರಪ್ಪನವರು, ಮಂತ್ರಿಗಳಾಗಿರುವುದರಿಂದ ಬಹಳ ಸಂತೋಷವಾಗಿದೆ. ಇವರ ಕಾಲದಲ್ಲಿ ನಮ್ಮ ಡಿಸ್ಟ್ರಿಕ್ಟಿಗೆ ಒಂದು ಅಗ್ರಿಕಲ್ಚರಲ್ ಕಾಲೇಜನ್ನು ಮಂಜೂರುಮಾಡಿ ದೇಶಕ್ಕೆ ಕೀರ್ತಿ ತರಬೇಕಾದ್ದು ಅವರ ಆದ್ಯ ಕರ್ತವ್ಯವಾಗಿದೆ. ಅದಲ್ಲದೆ ಅಗ್ರಿಕಲ್ಚರಲ್ ಕಾಲೇಜುಗಳಲ್ಲಿ ಪಟ್ಟಣಿಗರಿಗೆ ಹೆಚ್ಚಾಗಿ ಸೀಟುಗಳನ್ನು ಕೊಡುತ್ತಿದ್ದಾರೆ. ಹೆಚ್ಚು ಸ್ಥಾನಗಳು ಹಳ್ಳಿಗರಿಗೆ ದೊರೆಯಬೇಕಾದುದೂ ಆವಶ್ಯಕ. ಆದ್ದರಿಂದ ಹಳ್ಳಿಗಳವರಿಗೆ ಸೇಕಡ 60 ಸ್ಥಾನಗಳನ್ನು ರಿಜರ್ವ್‌ಮಾಡಿ ಹಳ್ಳಿಗಳ ಅಭಿವೃದ್ಧಿ ಮತ್ತು ರೈತ ಜನಾಂಗದ ಅಭಿವೃದ್ಧಿ ಕಾಪಾಡಬೇಕಾದು ಅತ್ಯಗತ್ಯವಾದ ಕರ್ತವ್ಯವಾಗಿದೆ.

ಚನ್ನಗಿರಿ ತಾಲ್ಲೂಕಿನಲ್ಲಿರುವ ಕೊರಟಗೆರೆ ಮತ್ತು ಅದರ ಮಲಹಾಳ್ ಫಾರೆಸ್ಟ್ ಇರುವ ಅರಣ್ಯ ಪ್ರದೇಶವನ್ನು ರಿಲೀಜ್‌ಮಾಡಿ ಗೋಮಾಳಕ್ಕಾಗಿ ಸಾಕಷ್ಟು ಜಮೀನನ್ನು ಕೊಟ್ಟು, ದನಗಳ ಮೇವಿಗೆ ಮತ್ತು ರೈತರಿಗೆ ಸಾಗುವಳಿಗೆ ಕೊಟ್ಟು ಅನುಕೂಲಪಡಿಸಬೇಕೆಂದು ಒತ್ತಿ ಹೇಳುತ್ತೇನೆ.

ತಳಿಗಳ ಅಭಿವೃದ್ಧಿಗೆ ಪಂಚಾಯಿತಿಗಳಿಗೆ ಒಳ್ಳೆಯ ಮುರ್ರಾ ಜಾತಿಯ ಕೋಣಗಳನ್ನು ಮತ್ತು ಬೀಜದ ಹೋರಿಕರಗಳನ್ನು ಕೊಡಬೇಕು ; ಮತ್ತು ರೈತರು ಇಷ್ಟಪಟ್ಟರೆ ಅಪ್ಸೆಟ್ ಪ್ರೈಸಿನಲ್ಲಿ ಮುರ್ರಾ ಜಾತಿಯ ಹೋರಿ ಮತ್ತು ಕೋಣಗಳನ್ನು ಕೊಡಬೇಕು.

ವ್ಯವಸಾಯದ ವಿಚಾರ ನೋಡಿದರೆ ಬಹಳ ಶೋಚನೀಯವಾಗಿದೆ. ಹಳ್ಳಿಗಳಲ್ಲಿ ರೈತರು ಸರ್ಕಾರದ ಬೆನ್ನುಮೂಳೆಯೆಂದು ಹೇಳುತ್ತಿದ್ದಾರೆಯೇ ವಿನಾ ಕಾರ್ಯತಃ ಏನೂ ಅವರಿಗಾಗಿ ಸರಿಯಾದ ಸಹಾಯ ನೀಡುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಹೋದ 24ನೆಯ ತಾರೀಖಿಗೆ ಒಂದು ವಾರದಲ್ಲಿ ನಮ್ಮ ಊರಿನ ಅಕ್ಕಪಕ್ಕದಲ್ಲಿ ಸುಮಾರು 600 ದನಗಳು, ಎಮ್ಮೆಗಳು, ಆಕಳುಗಳು ಸತ್ತುಹೋದುವು. ಅದನ್ನು ತಡೆಗಟ್ಟಲು ಸರಿಯಾದ ಕ್ರಮ ಕೈಕೊಳ್ಳಲಿಲ್ಲ. ಡೈರೆಕ್ಟರು ಒಳ್ಳೆಯವರೇ ಇರಬಹುದು, ಆದರೆ ಅವರ ಕೈಕೆಳಗಿನ ನೌಕರರು ಅವರ ಆಜ್ಞೆಯನ್ನು ಸರಿಯಾಗಿ ಪರಿಪಾಲಿಸುತ್ತಿಲ್ಲ. ಚಪ್ಪೆರೋಗ ಬಂದರೆ ಬಹಳ ಕಷ್ಟ. ಅದಕ್ಕೆ ಇಂಜೆಕ್ಷನ್ ಕೊಟ್ಟರೆ ದನಗಳು ಉಳಿಯಬಹುದು. ಆದರೆ ಸಕಾಲದಲ್ಲಿ ಹಾಗೆ ಮಾಡದೆ ದನಗಳು ಸಾಯುವುದಕ್ಕೆ ಅವಕಾಶವಾಗಿದೆ. ಇದನ್ನು ಕಣ್ಣಾರೆ ನಾನು ನೋಡಿದ್ದೇನೆ. ಅಧಿಕಾರಿಗಳು, ಮಂತ್ರಿಗಳು, ಆ ಕಡೆ ಹೋದಾಗ ಎಷ್ಟೋ ಕೆಲಸ ಮಾಡುವಂತೆ ನಟನೆಮಾಡುತ್ತಾರೆ. ಆದರೆ ರೈತರಿಗೆ ಸರಿಯಾಗಿ ಸಹಾಯಮಾಡುತ್ತಿಲ್ಲ. ಸರಿಯಾದ ಕ್ರಮ ಕೈಕೊಂಡು ಸರ್ಕಾರಿ ಆಜ್ಞೆಗಳನ್ನು ಮೇಲ್ಪಟ್ಟ ಆಫೀಸರುಗಳ ಹುಕುಮನ್ನು ಅನುಸರಿಸಿ ಸರಿಯಾಗಿ ಆಚರಣೆಮಾಡಿದರೆ ರೈತರು ಉದ್ಧಾರವಾಗುತ್ತಾರೆ, ಇಲ್ಲದಿದ್ದರೆ ಅವರು ಹಾಳಾಗುವುದರಲ್ಲಿ ಸಂದೇಹವಿಲ್ಲ.

ಬೀಜ ,ಗೊಬ್ಬರ ಕೊಡುತ್ತೇವೆಂದು ಪ್ರಚಾರಮಾಡುತ್ತಾರೆ, ಪ್ರದರ್ಶನ ಮಾಡುತ್ತಾರೆ. ಆದರೆ ಹಳ್ಳಿಗಳಲ್ಲಿ ರೈತರಿಗೆ ಸರಿಯಾಗಿ ತೋರಿಸುವುದಿಲ್ಲ. ಶಾಸನಸಭೆಯ ಸದಸ್ಯರ ಮುಂದೆ ಸರ್ಕಾರ ಎಷ್ಟು ಸಹಾಯ ಮಾಡುತ್ತಿದೆ ಎಂದು ತೋರಿಸಲು ಮಾಡುತ್ತಾರೆಯೇ ವಿನಾ ರೈತರಿಗೆ ಉಪಯೋಗವಾಗುವ ಗಾಡಿ ಪಟ್ಟೆ, ಗುಳ, ಕಬ್ಬಿಣ ಸರಿಯಾಗಿ ಒದಗಿಸುವುದಿಲ್ಲ. ಇಂಥ ಉಪಯೋಗವಾಗುವ ಸಾಮಾನುಗಳನ್ನು ಸಹಾಯಮಾಡದೆ ಸುಮ್ಮನೆ ಹಾಗೆ ಮಾಡಿದ್ದೇವೆ, ಹೀಗೆ ಮಾಡಿದ್ದೇವೆ

(ಶ್ರೀ ಕುಂದೂರು ರುದ್ರಪ್ಪ)

ಎಂದು ಹೇಳಿದರೆ ಪ್ರಯೋಜನವಿಲ್ಲ. ರೈತರಿಗೆ ಸಕಾಲದಲ್ಲಿ ಅವರಿಗೆ ಬೇಕಾದ ಗೊಬ್ಬರ ಮತ್ತು ಇತರ ಸಾಮಾನುಗಳನ್ನೂ ದಗಿಸಬೇಕು. ಅವರು ಬೆಳೆಯುವ ಧಾನ್ಯಗಳ ಬೆಲೆ ಕಡಮೆಯಾಗದಂತೆ ಮಾಡಬೇಕು. ಸುಮಾರು 12 ವರ್ಷಗಳ ಹಿಂದೆ ಪಲ್ಲಾ ಒಂದಕ್ಕೆ ಎರಡು ಮೂರು ರೂಪಾಯಿ ಬತ್ತ, ಜೋಳ, ರಾಗಿ ಧಾರಣೆ ಇದ್ದುದರಿಂದ ಆಗ ರೈತರಿಗೆ ಬಹಳ ನಷ್ಟವಾಯಿತು, ತೊಂಗರಪಟ್ಟರು, ಯಾರೂ ಸಹಾಯ ಮಾಡಲಿಲ್ಲ. ಈಗ ಸ್ವಲ್ಪ ಧಾರಣೆ ಏರಿದೆ. ಸರ್ಕಾರ ರೈತರಿಗೆ ಸಹಾಯ ಮಾಡುವುದಾದರೆ, ಧಾರಣೆ ನಿಗದಿ ಮಾಡಿ, ಆ ಬೆಲೆಗೆ ತಾವೇ ಕೊಂಡು ಕೊಳ್ಳುತ್ತೇವೆಂಬ ಭರವಸೆಯನ್ನು ರೈತರಿಗೆ ಕೊಡಬೇಕು. ರೈತರಿಗೆ ಋಣದ ಅಭಾವ ಹೆಚ್ಚಾಗಿದೆ. ರೈತರು ದೇಶದ ಬೆನ್ನು ಮೂಳೆ ಎಂದು ಹೇಳುತ್ತಾರೆ. ಹೀಗಿರುವಾಗ ವ್ಯವಸಾಯಕ್ಕೆ ಅಗತ್ಯವಾದ ಸಾಮಾನುಗಳು, ಎಂದರೆ, ನೊಗ, ನೇಗಿಲು ಮುಂತಾದುವನ್ನು ಮುಫತ್ತಾಗಿ ಒದಗಿಸಬೇಕು. ವ್ಯವಸಾಯ ಇಲಾಖೆ ಅಥವಾ ಫಾರೆಸ್ಟ್ ಇಲಾಖೆಯಿಂದ ತರುವಂತೆ ಇಲ್ಲದಿದ್ದರೆ ಬೇರೆ ಡಿಪೋವಿಂದಲಾದರೂ ಕೊಡಿಸಿಕೊಡಬೇಕು.

ಚೆನ್ನಗಿರಿ ತಾಲ್ಲೂಕಿನಲ್ಲಿ ಹತ್ತಿಯನ್ನು ಹೆಚ್ಚು ಬೆಳೆಯುತ್ತಾರೆ. ಅಲ್ಲೊಂದು ಜಿನ್ನಿಂಗ್ ಫ್ಯಾಕ್ಟರಿಯನ್ನು ಪ್ರಾರಂಭಮಾಡಿದ್ದಾರೆ. ಆ ತಾಲ್ಲೂಕಿನಲ್ಲಿ ಒಂದು ಲಕ್ಷದ ಎಂಟುಸಾವಿರ ಜನರಿದ್ದಾರೆ. ಒಂದು ಲಕ್ಷ ರೂಪಾಯಿ ಸಾಲವನ್ನು ಕೊಟ್ಟು ಆ ಫ್ಯಾಕ್ಟರಿಯನ್ನು ಅಭಿವೃದ್ಧಿಮಾಡಬೇಕು. ಅದೇ ತಾಲ್ಲೂಕಿನ ಹೊಸಳ್ಳಿಯಲ್ಲಿ ಒಂದು ಎಣ್ಣೆ ಕಾರ್ಖಾನೆಯನ್ನು ಸ್ಥಾಪನೆಮಾಡಬೇಕೆಂದು ಇಂಡಿಯಾ ಸರ್ಕಾರದವರು ನಾಲ್ಕುಲಕ್ಷ ರೂಪಾಯಿ ಗ್ರಾಂಟು ಮಂಜೂರುಮಾಡಿ ನಾಲ್ಕುನೂರು ಎಕರೆ ಜಮೀನನ್ನು ರಿಜರ್ವ್ ಮಾಡಿದ್ದಾರೆ. ಆದರೆ ಈ ಹೊತ್ತಿನ ವರೆಗೂ ಏನೂ ಕೆಲಸ ನಡೆದಿಲ್ಲ. ಆ ತಾಲ್ಲೂಕಿನ ಜನರಿಗೆ ಕೂಲಿ ದೊರಕುತ್ತದೆ. ಜೀವನ ಮಾಡಿಕೊಳ್ಳಲು ಅನುಕೂಲವಾಗುವಂತೆ ಸಹಾಯ ಮಾಡಿರಿ. ಯಾವ ಭಿನ್ನಾಭಿಪ್ರಾಯವೂ ಇಲ್ಲದೆ ಸರ್ಕಾರದವರು ಇಂಡಿಯಾ ಸರ್ಕಾರಕ್ಕೂ ಹೇಳಿ ಆ ಕಾರ್ಖಾನೆಯನ್ನು ಸ್ಥಾಪನೆಮಾಡಬೇಕು.

ಇನ್ನು ದನಗಳ ಅಭಿವೃದ್ಧಿಯ ವಿಚಾರ. ದನಗಳು ರೋಗದಿಂದ ಸಾಯದಂತೆ ಪಶುವೈದ್ಯ ಇಲಾಖೆಯವರು ಕಾರ್ಯಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು.

ಸ್ಥಳೀಯ ಸಂಸ್ಥೆಗಳ ವಿಚಾರ ಹೇಳುವಾಗ ಕುಡಿಯುವ ನೀರಿನ ವ್ಯವಸ್ಥೆಗೆ ಸಹಾಯಮಾಡಿದ್ದೇವೆಂದು ಹೇಳಿದರು. ಆಹಾರಕ್ಕಿಂತ ಹೆಚ್ಚಾಗಿ ಮನುಷ್ಯನಿಗೆ ನೀರು ಆವಶ್ಯಕ. ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಕೇಳಿದರೆ ಸುಲಭವಾಗಿ ಸಿಕ್ಕುವುದಿಲ್ಲ. ಇದರಿಂದ ಅನೇಕ ಕಡೆ ತೊಂದರೆಯಾಗಿದೆ. ಪ್ರತಿಯೊಂದು ಊರಿಗೂ ನೀರಿನ ಅನುಕೂಲ ಮಾಡಿಕೊಡಬೇಕು. ಹಳ್ಳಿಗಳಿಂದ ಹಳ್ಳಿಗಳಿಗೆ ಸರಿಯಾದ ರಸ್ತೆಗಳಿಲ್ಲದೆ ಬಹಳ ತೊಂದರೆಯಾಗಿದೆ. ಮಾನ್ಯ ಮಂತ್ರಿಗಳಾದ ಚೆನ್ನಿಗರಾಮಯ್ಯನವರು ಅನುಭವಶಾಲಿಗಳು, ಹಳಬರು. ರೂರಲ್ ಡೆವಲಪ್‌ಮೆಂಟಿಗೆ 1,26,72,000 ರೂಪಾಯಿ ಒದಗಿಸಿದ್ದಾರೆ. ಇದು ಬಹಳ ಶೋಚನೀಯ. ಇದು ಸಾಲದು. ಇನ್ನೂ ಹೆಚ್ಚು ಹಣ ಒದಗಿಸಿ ಹಳ್ಳಿಗಳ ಅಭಿವೃದ್ಧಿ ಮಾಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಟ್ರ್ಯಾಕ್ಟರುಗಳ ಚಾರ್ಜನ್ನು ಎಕರೆಗೆ ಎಂಟೂವರೆ ರೂಪಾಯಿಯಂತೆ ರೈತರಿಂದ ವಸೂಲುಮಾಡುತ್ತಿದ್ದರು; ಈಗ ಇದಕ್ಕೆ 20 ರೂಪಾಯಿ ವಸೂಲುಮಾಡುತ್ತಿದ್ದಾರೆ. ಆದರೂ 30 ಲಕ್ಷ ರೂಪಾಯಿ ನಷ್ಟವಾಗಿದೆ. ರೈತರೇ ಟ್ರ್ಯಾಕ್ಟರುಗಳನ್ನು ಕೊಂಡುಕೊಳ್ಳುವಂತೆ ಅವರಿಗೆ ಸಾಲದ ಮೇಲೆ ಕೊಟ್ಟರೆ ಅನುಕೂಲ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಇಲ್ಲಿಗೆ ನಿಲ್ಲಿಸಿ ಕುಳಿತುಕೊಳ್ಳಬೇಕು.

(Sri Kundur Rudrappa was still on his legs)

Sri V. S. PATIL.—May I konw, Sir, whether it is proper for an Hon'ble Member to continue his speech even after the warning bell has been sounded by the Speaker that his time has been finished ? I want a ruling on this point.

Mr. DEPUTY SPEAKER.—I request the Hon'ble Members to adhere to the time limit.

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಸ್ವಾಮಿ, ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಈ ಬೇಡಿಕೆಯ ಮೇಲೆ ಬಹಳ ದೀರ್ಘವಾದ ಚರ್ಚೆ ನಡೆದಿದೆ. ಸಭೆಯ ಕಾರ್ಯಕ್ರಮದ ಪ್ರಕಾರ ನಿನ್ನೆಗೇ ಇದು ಮುಗಿಯಬೇಕಾಗಿತ್ತು; ಆದರೆ ಹೆಚ್ಚು ಮಂದಿ ಮಾನ್ಯ ಸದಸ್ಯರು ಮಾತನಾಡಬೇಕಾಗಿದ್ದುದರಿಂದ ಈ ಚರ್ಚೆ ಈ ದಿನಕ್ಕೂ ಮುಂದುವರಿದಿದೆ. ಈ ದೀರ್ಘ ಚರ್ಚೆಯಿಂದ ಒಂದು ಅಂಶ ವ್ಯಕ್ತವಾಗುತ್ತದೆ. ಅದೇನೆಂದರೆ, ಇಂದು ಜನತೆ ಹೆಚ್ಚು ಹೆಚ್ಚಾಗಿ ವ್ಯವಸಾಯದ ಪ್ರಗತಿಯಲ್ಲಿ ಆಸಕ್ತಿಯನ್ನಿಟ್ಟುಕೊಂಡಿದ್ದಾರೆಂಬುದು ಕಾಣುತ್ತದೆ. ಈ ಸಂದರ್ಭದಲ್ಲಿ ನನಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ನಾವು ಮಕ್ಕಳಾಗಿದ್ದಾಗ ಊರಿಗೆ ಪೋಲೀಸ್ ಇನ್‌ಸ್ಪೆಕ್ಟರು ಬಂದರೆಂದು ಯಾರಿಂದಾದರೂ ಕೇಳಿದರೆ ಜನ ಒಳ್ಳೆಯ ಬಟ್ಟೆ ಹಾಕಿಕೊಂಡು ಭಯಭಕ್ತಿಯಿಂದ ಅವರಲ್ಲಿಗೆ ಬರುತ್ತಿದ್ದರು. ಒಂದುವೇಳೆ ಅವರೇನಾದರೂ ವ್ಯವಸಾಯದ ಇಲಾಖೆಯ ಇನ್‌ಸ್ಪೆಕ್ಟರಾಗಿದ್ದರೆ, ಜನ ವಾಪಸುಹೋಗಿ ಕೋಟುಗಳನ್ನು ಮನೆಯಲ್ಲಿ ತಗಲುಹಾಕಿ, 'ಅಯ್ಯೋ ನಾವು ಪೋಲೀಸ್ ಇನ್‌ಸ್ಪೆಕ್ಟರು ಬಂದರೇನೋ ಎಂದು ಕೊಂಡಿದ್ದೆವು' ಎಂದು ಹೇಳುತ್ತಿದ್ದರು. ಆದರೆ ಈಹೊತ್ತು ಯಾವುದಾದರೂ ಊರಿಗೆ ಪೋಲೀಸ್ ಇನ್‌ಸ್ಪೆಕ್ಟರು ಬಂದರೆ, 'ಯಾರೋ ತಪ್ಪುಮಾಡಿದ್ದಾರೆಂದು ಕಾಣುತ್ತದೆ, ವ್ಯವಸಾಯ ಇಲಾಖೆಯ ಇನ್‌ಸ್ಪೆಕ್ಟರು ಬಂದರೆ ಹೋಗೋಣ' ಎಂದು ಹೇಳುತ್ತಾರೆ. ಎಂದ ಮೇಲೆ, ಈಗ ವ್ಯವಸಾಯದ ವಿಚಾರದಲ್ಲಿ ಜನರಿಗೆ ಎಷ್ಟುಮಟ್ಟಿನ ಆಸಕ್ತಿ ಇದೆ ಎಂಬುದನ್ನು ಇದು ತೋರಿಸುತ್ತದೆ. ಇಲಾಖೆಯವರೂ ಕೂಡ ಅಷ್ಟೇ ಆಸಕ್ತಿಯಿಂದ ಕೆಲಸಮಾಡಿ ಜನರ ಮನಸ್ಸಿನಲ್ಲಿರುವ ಗೌರವವನ್ನು ಹೆಚ್ಚಿಸಲು ಅವರೊಡನೆ ಸಹಕರಿಸಿ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ ಕೆಲವು ವಿಷಯಗಳನ್ನು ಹೇಳುತ್ತೇನೆ. ಈ ಇಲಾಖೆಯಿಂದ ಎಷ್ಟು ಪ್ರಗತಿಯಾಗಬೇಕೋ ಅಷ್ಟು ಪ್ರಗತಿಯಾಗಿದೆಯೇ? ಎಂಬುದನ್ನು ವಿಚಾರಮಾಡೋಣ. ದೇಶದಲ್ಲಿ ಹಿಡುವಳಿಯಲ್ಲಿದ್ದು ಚೌಳು, ಕರಲು ಮುಚ್ಚಿರುವ ಜಮೀನು-ತರಿ, ಖುಷ್ಕಿ ಎಷ್ಟೋ ಇದೆ. ಸರ್ವೆ ನಡೆಸಿ ಕರಲು ಜಮೀನೆಷ್ಟು, ಇದರಲ್ಲಿ ತರಿ ಎಷ್ಟು, ಖುಷ್ಕಿ ಎಷ್ಟು, ಕರಲನ್ನು ಸರಿಮಾಡಿ ವ್ಯವಸಾಯಕ್ಕೆ ಯೋಗ್ಯವಾಗುವಂತೆ ಎಷ್ಟು ಜಮೀನನ್ನು

ಉತ್ತಮಗೊಳಿಸಿದ್ದಾರೆ ಎನ್ನುವ ಅಂಕಿ ಅಂಶಗಳು ವ್ಯವಸಾಯ ಇಲಾಖೆಯಲ್ಲಿಲ್ಲ. ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಹಿಡುವಳಿಯಲ್ಲಿದ್ದು ಸಾಗುವಳಿಗೆ ಬಾರದೇಯಿರುವ ಜಮೀನುಗಳ ವಿಷಯದಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಎನ್.ಇ.ಎಸ್. ಯೋಜನೆಯಲ್ಲಿ ಒಂದು ಕಡೆ ಪ್ರಯೋಗ ಮಾಡಿದರು—ಯಾವ ಜಮೀನಿಗೆ ಯಾವ ಕೃತಕಗೊಬ್ಬರ ಹಾಕಬೇಕು, ಯಾವ ಬೆಳೆ ಬೆಳೆಸಬಹುದು ಎಂಬುದನ್ನು ತಿಳಿಸಿ, ಒಂದು ಜಮೀನಿನಲ್ಲಿ ಕೃತಕ ಗೊಬ್ಬರವನ್ನು ಹಾಕಿ ಬೆಳೆಯನ್ನು ಬೆಳೆಸಿದರು. ಯಾವಕಾಲದಲ್ಲಿಯೂ ಬೆಳೆಬಾರದೇ ಇದ್ದ ಆ ಜಮೀನಿನಲ್ಲಿ ಅರ್ಧ ಎಕರೆಗೆ 14 ಪಲ್ಲ ಬತ್ತ ಬಂತು. ಹೀಗೆ ಕರಲನ್ನು ಹೋಗಲಾಡಿಸಿ ಹೆಚ್ಚು ಬೆಳೆ ಬೆಳೆಯುವುದಕ್ಕೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ಕೇಳಿದರೆ, ಅಂಕಿ ಅಂಶಗಳನ್ನ ಕೊಡುವುದಕ್ಕೆ ಸಾಧ್ಯವೋ ಇಲ್ಲವೋ ಗೊತ್ತಿಲ್ಲ, ಇದಕ್ಕೆ ಸರ್ಕಾರ ಉತ್ತರ ಕೊಡಬೇಕು.

ಕಬ್ಬಿನ ಬೆಳೆಯ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಸರ್ಕಾರದಿಂದ ಒದಗಿಸತಕ್ಕ C.V. 419 ಕಬ್ಬನ್ನು ಬೆಳೆಯಬೇಕಾದರೆ, ಜೂನ್ ತಿಂಗಳಿಂದ ಅಕ್ಟೋಬರ್‌ವರೆಗೆ ಮಾತ್ರ ನೆಡಬೇಕಾಗಿದೆ. ಈ ಕಾಲದಲ್ಲಿ ಬತ್ತದ ಬೆಳೆಯ ಸಂಬಂಧವಾದ ಎಲ್ಲ ವ್ಯವಸಾಯ ಕೆಲಸವೂ ಇರುವುದರಿಂದ ರೈತನಿಗೆ ಕೆಲಸ ಹೆಚ್ಚಾಗಿ ಬೇಸರವಾಗಿ ಸಾಕಾಗಿ ಹೋಗುತ್ತದೆ. ಹಿಂದೆ H.M. 320 ಎಂದು ಒಂದು ಬಗೆಯ ಕಬ್ಬು ಬರುತ್ತಿತ್ತು. ಅದು ಕೆಡುತ್ತಬಂದಮೇಲೆ ಈಗ ಒದಗಿಸುವುದು C.O. 419ನೆಯ ಜಾತಿಯ ಕಬ್ಬು. ಬೇರೆ ಬೆಳೆಗಳ ಸಂಬಂಧವಾದ ಕೆಲಸಗಳು ರೈತರಿಗಿಲ್ಲದೇ ಇರುವ ಕಾಲದಲ್ಲಿ ಕಬ್ಬಿನ ಬೆಳೆ ತೆಗೆಯಲು ಅನುಕೂಲವಾಗುವಂಥ ಮಾರ್ಗವನ್ನು ಸೂಚಿಸಿದ್ದಾರೆಯೇ ಎಂದರೆ, ಅದೂ ಕೂಡ ಇಲಾಖೆಯಿಂದ ಆಗಿರುವುದಿಲ್ಲ.

ಈಗ ರಾಗಿ, ಬತ್ತ, ಕಬ್ಬು ಇವುಗಳನ್ನು ಬಿತ್ತುವುದು ಮತ್ತು ಇವುಗಳ ವ್ಯವಸಾಯದ ಕೆಲಸವೆಲ್ಲವೂ ಜೂನ್ ಜುಲೈ ತಿಂಗಳಲ್ಲೇ ಬರುತ್ತಿರುವುದರಿಂದ ಆ ಸಮಯದಲ್ಲಿ ರೈತರಿಗೆ ಬೇಸರವಾಗಿ ವ್ಯವಸಾಯವನ್ನು ಬಿಟ್ಟರೆ ಸಾಕು ಎನ್ನಿಸುತ್ತದೆ. ಆದುದರಿಂದ ಯಾವ ಯಾವ ಕಾಲದಲ್ಲಿ ಯಾವ ಯಾವ ಬೆಳೆಯನ್ನು ತೆಗೆಯಲು ಅನುಕೂಲವಾಗುತ್ತದೆಂಬುದನ್ನು ಯೋಚಿಸಿ ಜನವರಿ ಕೊನೆ ಅಥವಾ ಫೆಬ್ರುವರಿಯಲ್ಲಿ ಯಾವ ಕಬ್ಬನ್ನು ಬೆಳೆಯುವುದು ಸಾಧ್ಯ ಎನ್ನುವುದನ್ನು ರೈತರಿಗೆ ತಿಳಿಸುವುದು ವ್ಯವಸಾಯ ಇಲಾಖೆಯ ಕರ್ತವ್ಯ. ಅದಕ್ಕೇನಾದರೂ ಮಾರ್ಗವನ್ನು ಕಂಡು ಹಿಡಿದಿದ್ದಾರೋ ಇಲ್ಲವೊ ಗೊತ್ತಿಲ್ಲ.

ಸಹಕಾರ ಸಂಘಗಳ ಮೂಲಕ ಕೃತಕ ಗೊಬ್ಬರವನ್ನು ರೈತರಿಗೆ ಸರಬರಾಜು ಮಾಡುವ ಏರ್ಪಾಡು ಮಾಡಿದ್ದಾರೆ. ಬೆಳೆಯುವ ರೈತರಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಇದನ್ನು ಮಾಡಿದ್ದಾರೆ. ಆದರೆ ಈಗ ಕೊಡುವವರೊಬ್ಬರು, ಮಾರುವವರೊಬ್ಬರು ಈ ಪರಿಸ್ಥಿತಿಯುಂಟಾಗಿದೆ. ಇದನ್ನು ಬದಲಾಯಿಸಿ ಯಾರು ಮಾರಾಟ ಮಾಡುತ್ತಾರೋ ಅವರ ಕೈಯಲ್ಲೇ ಪೂರ್ತಿಯಾಗಿ ಕೃತಕ ಗೊಬ್ಬರದ ಆಡಳಿತವಿರುವಂತೆ ಮಾಡಬೇಕು. ಪೂರ್ಣವಾಗಿ ಸಹಕಾರ ಸಂಘಗಳಿಗೇ ಈ ಕೆಲಸವನ್ನು ವಹಿಸಿ ರಿಜಿಸ್ಟ್ರಾರ್‌ಅವರ ಹತೋಟಿಯಲ್ಲಿರುವಂತೆ ಮಾಡಬೇಕು.

ಗೊಬ್ಬರಕ್ಕಾಗಿ ಗ್ರೀನ್ ಸೀಡಿಯ ಎಂಬ ಬೆಳೆಯನ್ನು ಬೆಳಸಬೇಕೆಂದು ಡಾ॥ ನಾಗನಗೌಡರು ಹೇಳುತ್ತಿದ್ದರು. ಆದರೆ ವ್ಯವಸಾಯ ಇಲಾಖೆಯಿಂದ ಇದರ ಬಿತ್ತನೆಯನ್ನು ಕೊಡುತ್ತೀರಾ ಎಂದು ಕೇಳಿದರೆ, ಇಲ್ಲವೆಂದು ಹೇಳಿದರು. ಇದನ್ನು ನೆಡಬೇಕಾದರೆ ಒಂದು ಕಾಲವಿರುತ್ತದೆ, ಆಗ ದೊರಕದೇ ಹೋದರೆ ಏನು ಪ್ರಯೋಜನ? ಇದನ್ನು ಹೆಚ್ಚು ಹೆಚ್ಚಾಗಿ ರೈತರಿಗೆ ಒದಗಿಸಬೇಕೆಂದು ಪ್ರಾರ್ಥಿಸಿ ವ್ಯವಸಾಯದ ಇಲಾಖೆ ಪ್ರಗತಿ ಮಾರ್ಗದಲ್ಲಿ ಹೆಜ್ಜೆ ಇಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎಂ. ಹನುಮಂತಯ್ಯ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಮುಂದಿರತಕ್ಕ ಬೇಡಿಕೆಗಳನ್ನೊಪ್ಪಿಕೊಂಡು ರೈತರ ಪರವಾಗಿ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ನಿಂತಿದ್ದೇನೆ. ನಮ್ಮ ಸಂಸ್ಥಾನದಲ್ಲಿ ನೂರಕ್ಕೆ ಎಂಬತ್ತು ಜನ ವ್ಯವಸಾಯಗಾರರೆಂದು ನಾವೂ ಹೇಳುತ್ತಿದ್ದೇವೆ, ಸರ್ಕಾರದವರೂ ಒಪ್ಪಿಕೊಂಡಿದ್ದಾರೆ. ನಮ್ಮ ಮಂತ್ರಿಗಳು ಅನೇಕ ಕಡೆ ಭಾಷಣ ಮಾಡುವಾಗ ರೈತರು ದೇಶಕ್ಕೂ ಸರ್ಕಾರಕ್ಕೂ ಬೆನ್ನುಮೂಳೆ ಎಂದು ಹೇಳುತ್ತಿದ್ದಾರೆ. ರೈತರಿಗೆ ಈಗ ಇರತಕ್ಕ ಅನಾನುಕೂಲಗಳನ್ನೂ ತೊಂದರೆಗಳನ್ನೂ ನಾವೆಲ್ಲರೂ ಅರಿತಿದ್ದೇವೆ. ಮೂರು ನಾಲ್ಕು ತಿಂಗಳ ಹಿಂದೆ ನಾವೂ ಮಂತ್ರಿಗಳೂ ನಮ್ಮ ನಮ್ಮ ಕ್ಷೇತ್ರಗಳಲ್ಲಿ ತಿರುಗಿ ರೈತರ ಕಷ್ಟವೇನು, ಅವರಿಗೆ ಮನೆ ಮಠಗಳು ಎಷ್ಟರಮಟ್ಟಿಗಿವೆ ಎಂಬುದನ್ನೆಲ್ಲಾ ನೋಡಿದೇವೆ. ಆ ಸಂದರ್ಭದಲ್ಲಿ ಓಟು ಕೊಡಬೇಕೆಂದು ಅವರನ್ನು ಕೇಳುವಾಗ ಅನೇಕ ರಿಯಾಯಿತಿಗಳನ್ನೂ ಸೌಲಭ್ಯಗಳನ್ನೂ ಕೊಡುತ್ತೇವೆಂಬ ಭರವಸೆಯನ್ನೂ ಕೊಟ್ಟಿದ್ದಾಯಿತು. ಈಗ ಬಡ್ಜೆಟ್ಟಿನಲ್ಲಿ ವ್ಯವಸಾಯದ ಬಾಬಿಗೆ 2,05,23,000 ರೂಪಾಯಿಗಳನ್ನು ಸರ್ಕಾರದವರು ಒದಗಿಸಿದ್ದಾರೆ. ಇದು ಸಾಲದು; ಸುಮಾರು ಆರೇಳು ಕೋಟಿ ರೂಪಾಯಿಗಳನ್ನಾದರೂ ಒದಗಿಸಬೇಕಾಗಿತ್ತು. ರೈತರನ್ನು ಸರ್ಕಾರದವರು ಬಹಳ ಜಾಗರೂಕತೆಯಿಂದ ನೋಡಿಕೊಳ್ಳಬೇಕು. ರೈತರಿಂದ ನಮಗೆಲ್ಲ ಸಣ್ಣಕ್ಕಿ ಅನ್ನ, ತೊಗರಿಬೇಳೆ, ಅವರ ದನದಿಂದ ಬಂದ ಹಾಲು ತುಪ್ಪ ಎಲ್ಲವೂ ಸಿಕ್ಕುತ್ತಿರುವುದು. ಇಂಥವರಿಗೆ ಸರಿಯಾಗಿ ಸಹಾಯ ಮಾಡದೇ ಹೋದರೆ ದೇಶಕ್ಕೇ ತೊಂದರೆಯಾಗುತ್ತದೆ. 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಲೇಸು' ಎಂದು ಜ್ಞಾನಿಗಳು ಹೇಳಿದ್ದಾರೆ. ವ್ಯವಸಾಯ ಮಾಡುವ ರೈತರನ್ನು ಪ್ರಶಂಸೆ ಮಾಡಿದ್ದಾರೆ. ಇಂಥ ರೈತರಿಗೆ ಸರ್ಕಾರ ಸರಿಯಾದ ಉತ್ತೇಜನ ಕೊಡುತ್ತಿಲ್ಲ. ರೈತರು ಅನೇಕ ರೀತಿಯಲ್ಲಿ ಕಷ್ಟಪಡುತ್ತಿದ್ದಾರೆ. ಉದಾಹರಣೆಗೆ, ತನ್ನ ಜಮೀನಿನ ಮೇಲೆ ಸಾಲ ಪಡೆಯಬೇಕಾದರೆ, ಜಮೀನು ಅವನ ಹೆಸರಿನಲ್ಲಿ ಖಾತೆಯಾಗಿರುವುದಿಲ್ಲ; ಮನೆಯ ಯಜಮಾನ ಪೌತಿಯಾಗಿರುತ್ತಾನೆ? ಮಗನ ಹೆಸರಿಗೆ ಖಾತೆಯಾಗಿರುವುದಿಲ್ಲ, ಶ್ಯಾನುಭೋಗರನ್ನು ಕೇಳಿದರೆ ಪಟೇಲರ ಮೇಲೆ ಹಾಕುತ್ತಾರೆ, ಪಾಟೇಲರನ್ನು ಕೇಳಿದರೆ ಶ್ಯಾನುಭೋಗರ ಮೇಲೆ ಹಾಕುತ್ತಾರೆ. ಹೀಗೆ ಒಂದೊಂದು ತಾಲ್ಲೂಕಿನಲ್ಲಿಯೂ ಸುಮಾರು ಎಂಟು ಹತ್ತು ಸಾವಿರಕ್ಕೂ ಮೇಲ್ಪಟ್ಟು ಖಾತೆ ಬದಲಾವಣೆಯಾಗಬೇಕಾದ ಸಂದರ್ಭಗಳಿರುತ್ತವೆ. ಈ ಕೆಲಸವನ್ನು ಮಾಡಿಸುವ ಏರ್ಪಾಡನ್ನು ಸರ್ಕಾರದವರು ಬೇಗ ಮಾಡಬೇಕು. ಸರ್ಕಾರಿ ಕೆಲಸ ಕಾರ್ಯಗಳಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿಲ್ಲ. ಮಂತ್ರಿಗಳು ಕಚೇರಿಗಳಿಗೆ ಅನಿರೀಕ್ಷಿತ ಭೇಟಿ ಕೊಟ್ಟು ವಿಚಾರ

(ಶ್ರೀ ಎಂ. ಹನುಮಂತಯ್ಯ)

ಮಾಡಬೇಕು. ಈಗ ಹಾಗೆ ಮಾಡುತ್ತಿಲ್ಲ. ಮೊದಲೇ ತಮ್ಮ ಟೂರ್ ಪ್ರೋಗ್ರಾಂ ಕಳುಹಿಸಿ ಹೋಗುತ್ತಾರೆ, ಇದು ಸರಿಯಲ್ಲ. ಅವರು ಯಾರಿಗೂ ಗೊತ್ತಿಲ್ಲದಂತೆ ತಾಲ್ಲೂಕ್, ಡಿಸ್ಟ್ರಿಕ್ಟು ಕಚೇರಿಗಳಿಗೆ ಅನಿರೀಕ್ಷಿತ ಭೇಟಿ ಕೊಟ್ಟು ವಿಚಾರಣೆ ನಡೆಸಿದರೆ ಆಗ ಸ್ವಲ್ಪ ಚುರುಕಾಗಿ ಕೆಲಸ ನಡೆಯುತ್ತದೆ. ಹಿಂದೆ ಶ್ರೀಮಾನ್ ಕೆ. ಸಿ ರೆಡ್ಡಿಯವರ ಕಾಲದಲ್ಲಿ ಕೂಡ ಈ ಸಲಹೆಯನ್ನು ನಾನು ಹೇಳಿದ್ದೆ. ಕಳ್ಳತನ ಅಥವಾ ಕೆಟ್ಟ ಕೆಲಸಗಳನ್ನು ಮಾಡುವವನನ್ನು ಹಿಡಿಯಬೇಕಾದರೆ ಅವರಿಗೆ ಪೂರ್ವಭಾವಿಯಾಗಿ ತಿಳಿವಳಿಕೆ ಕೊಟ್ಟು ಹೋಗುವುದು ಸರಿಯಲ್ಲ. ದೇಶದ ಕೆಲಸಕಾರ್ಯಗಳು ಸರಿಯಾಗಿ ನಡೆದು ದೇಶ ಉದ್ಧಾರವಾಗಬೇಕಾದರೆ, ಈ ದೃಷ್ಟಿಯಿಂದ ಅನಿರೀಕ್ಷಿತ ಭೇಟಿಕೊಡುವುದನ್ನು ಮುಂದುವರಿಸಬೇಕು.

ಉಪಾಧ್ಯಕ್ಷರು.—ತಮಗೆ ಕೊಟ್ಟಿರುವ ಕಾಲಾವಕಾಶ ಆಯಿತು.

ಶ್ರೀ ಎಂ. ಹನುಮಂತಯ್ಯ.—ನಾನು ಹಳಬ. ನನಗೆ ಸ್ವಲ್ಪ ಹೆಚ್ಚು ಕಾಲವನ್ನು ಕೊಡಬೇಕೆಂದು ಪ್ರಾರ್ಥನೆ.

ನಮ್ಮ ಸಂಸ್ಥಾನದ ಆದಾಯ ಮೂರುವರೆ ಕೋಟಿ ರೂಪಾಯಿ ಇದ್ದಾಗ ರೈತನಿಗೆ ಅನುಕೂಲವಾಗಿತ್ತು. ಒಂದು ಗುಳಕ್ಕೆ ನಾಲ್ಕೈದು ಆಣೆ ಇತ್ತು, ಒಂದು ಗಾಡಿ ಪಟ್ಟೆಗೆ 16 ರೂಪಾಯಿ ಇತ್ತು ಒಟ್ಟೆ ಮರಕ್ಕೆ ಎರಡೂವರೆ ರೂಪಾಯಿ ಬೆಲೆ ಇತ್ತು. ಆದರೆ ಈ ಹೊತ್ತು ಗುಳಕ್ಕೆ ಒಂದು ರೂಪಾಯಿ, ಪಟ್ಟೆ 32 ರೂಪಾಯಿ, ಒಟ್ಟೆ ಮರಕ್ಕೆ ಎಂಟು ರೂಪಾಯಿ ಆಗಿದೆ. ಇದರ ಬೆಲೆಗಳನ್ನಾದರೂ ಕಡಮೆ ಮಾಡಿದರೆ ರೈತರಿಗೆ ಎಷ್ಟೋ ಸಹಾಯ ಮಾಡಿದ ಹಾಗಾಗುತ್ತದೆ. ಇದನ್ನು ಸರ್ಕಾರದವರು ಖಂಡಿತ ಮಾಡಬೇಕು.

ಗ್ರಾಮಾಭಿವೃದ್ಧಿಯ ವಿಷಯದಲ್ಲಿ ಒಂದೇ ಮಾತು ಹೇಳುತ್ತೇನೆ. ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ಸುಮಾರು 60 ಸಾವಿರ ಕೋಟಿ ತಳವಾರರಿರಬಹುದು, ಇವರಿಗೆ ಈ ಬಡ್ಜೆಟ್ಟಿನಲ್ಲಿ ಸರ್ಕಾರ ಏನು ಸಹಾಯವನ್ನೂ ಕೊಟ್ಟಿಲ್ಲ. ಇದು ಧರ್ಮ ಪರಿಪಾಲನೆಯೇ? ಈ ಬಡಪಾಯಿಗಳಿಗೆ ಏನೂ ಸಹಾಯ ಬೇಡವೇ ? ನಾನು ಈ ವಿಷಯವನ್ನು ಇಪ್ಪತ್ತುವರ್ಷಗಳಿಂದಲೂ ಕೇಳುತ್ತಿದ್ದೇನೆ. ಆದರೂ ಇದುವರೆಗೂ ಏನೂ ಸಹಾಯ ಮಾಡಿಲ್ಲ. ಇದು ಯಾವಧರ್ಮ, ಯಾವ ನ್ಯಾಯ ? ಈ ಬಜೆಟ್ ಮಾಡುವಾಗ ನಮ್ಮ ಹರಿಜನ ಮಂತ್ರಿಗಳು ಮಲಗಿದ್ದರೋ ತೂಕಡಿಸುತ್ತಿದ್ದರೋ ಗೊತ್ತಿಲ್ಲ. ಮೇಲೆ ನೋಡಿದರೆ ಈ ಸಭೆಯಲ್ಲಿ ಧರ್ಮವನ್ನು ತೂಗುವ ತಕ್ಕಡಿ ಇದೆ, ವಿಧಾನಸೌಧದ ಮುಂಬಾಗಿಲಿನಲ್ಲಿ 'ಸರ್ಕಾರಿ ಕೆಲಸ, ದೇವರ ಕೆಲಸ' ಎಂದು ಬರೆದಿದೆ. ಆದರೂ ಇಷ್ಟು ಅನ್ಯಾಯ ತರವಲ್ಲ. ಈಗ ಮಂಡಿಸಿರುವ ಆಯವ್ಯಯ ಪಟ್ಟಿಯಲ್ಲಿ ಗ್ರಾಮಾಧಿಕಾರಿಗಳಿಗೆ ಎಂಟು ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿ ಹೊಟ್ಟೆಗೆ ಅನ್ನವಿಲ್ಲದೆ, ಮೈಗೆ ಬಟ್ಟೆಯಿಲ್ಲದೆ, ದರಿದ್ರಾವಸ್ಥೆಯಲ್ಲಿರುವ ಗ್ರಾಮ ನೌಕರರಾದ ತೋಟಿ, ತಳವಾರರಿಗೆ ಏನೂ ಕೊಡದೇ ಇರುವುದು ತುಂಬಾ ಶೋಚನೀಯ. ಈ ಮೇಲ್ಗಡೆ ಇರುವ ತಕ್ಕಡಿಗೆ ಜೀವವಿದ್ದ ಪಕ್ಷಕ್ಕೆ, ಅದು ಏರುಪೇರಾಗುತ್ತಿತ್ತು. ಸಂಸ್ಥಾನದಲ್ಲಿ 90 ಜನ ಐ.ಎ.ಎಸ್. ಅಧಿಕಾರಿಗಳಿದ್ದಾರೆ. ಆದರೆ ಹರಿಜನರು ಇಬ್ಬರು ಮಾತ್ರ ಇದ್ದಾರೆ.

ಉಪಾಧ್ಯಕ್ಷರು.—ತಾವು ಮುಗಿಸಬೇಕು.

ಶ್ರೀ ಎಂ. ಹನುಮಂತಯ್ಯ.—ಸ್ವಾಮಿ, ನಾನು ಆಗಲೇ ಕೇಳಿಕೊಂಡಿದ್ದೇನೆ, ನಾನು ಹಳಬನಾದುದರಿಂದ ನನಗೆ ಹೆಚ್ಚು ಕಾಲಾವಕಾಶ ಕೊಡಬೇಕು ಎಂದು. ಆದರೆ ಕೊಡಲಿಲ್ಲ. ಆದರೂ ಚಿಂತೆಯಿಲ್ಲವೆಂದು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri C. J. MUCKANNAPPA (Gubbi).—On a point of order Sir. Can the Chair make any discrimination between an old member and a new member.

Mr. DEPUTY SPEAKER.—There is no discrimination made.

ಶ್ರೀ ಎಸ್. ವೈ. ಪಾಟೀಲ್.—ಯಾರಾದರೂ ಸದಸ್ಯರು ಮಾತನಾಡುವಾಗ ಅಧ್ಯಕ್ಷರು ಆ ಸದಸ್ಯರು ಭಾಷಣವನ್ನು ನಿಲ್ಲಿಸಬೇಕೆಂದು ಗಂಟೆ ಬಾರಿಸಿದರೆ ಆ ಸದಸ್ಯರು ತಮ್ಮ ಮಾತನ್ನು ನಿಲ್ಲಿಸಿ ಕೂಡಲೇಬೇಕು. ಬೊಂಬಾಯಿಯಲ್ಲಿ ಸ್ಪೀಕರ್ ಅವರು ಗಂಟೆ ಬಾರಿಸಿದ ಕೂಡಲೇ ಅರ್ಧ ಭಾಷಣವನ್ನು ಮಾಡುತ್ತಿದ್ದರೂ ಕೂಡ ಸದಸ್ಯರು ಅಷ್ಟಕ್ಕೇ ನಿಲ್ಲಿಸಿ ಕುಳಿತುಕೊಳ್ಳುತ್ತಿದ್ದರು. ಆದರೆ ಇಲ್ಲಿ ಈಗ ಅಧ್ಯಕ್ಷರು ಗಂಟೆ ಬಾರಿಸಿದ ಮೇಲೂ ಭಾಷಣ ನಡೆಯುತ್ತಿರುವುದನ್ನು ನೋಡಿ ನಮಗೆ ಅವಮಾನವಾಗುತ್ತಿದೆ.

Sri M. C. NARASIMHAN (Kolar Gold Fields).—A Representation, Sir...

Mr. DEPUTY SPEAKER.—No representations, please.

Sri M. C. NARASIMHAN.—You stated, Sir, that you would come to a decision whether the discussion on the Demand would go on throughout the day or it will come to a close . . . . .

Mr. DEPUTY SPEAKER.—No representations now.

ಶ್ರೀ ಕೆ. ಟಿ. ಜಂಬಣ್ಣ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದವರು ಸಭೆಯ ಮುಂದಿಟ್ಟಿರತಕ್ಕ ವ್ಯವಸಾಯ ಮತ್ತು ಗ್ರಾಮಾಭಿವೃದ್ಧಿ ಈ ಎರಡು ವಿಚಾರಗಳಮೇಲೆ ನಾನೀಗ ಪ್ರಸ್ತಾಪಮಾಡಬೇಕೆಂದು ನಿಂತಿದ್ದೇನೆ. ಮೊಟ್ಟ ಮೊದಲನೆಯದಾಗಿ ವ್ಯವಸಾಯದ ವಿಚಾರ ಹೇಳುವುದಾದರೆ ವ್ಯವಸಾಯವು ನಮ್ಮ ಆಹಾರ ಆಹಾಗೂ ದೇಶಾಭಿವೃದ್ಧಿಗೆ ಬಹಳ ಮಹತ್ತ್ವವುಳ್ಳದಾಗಿದೆ.. ಆದರೆ ಇಂಥ ವ್ಯವಸಾಯದ ಬಾಬಿನ ಬಗ್ಗೆ ನಮ್ಮ ಸರ್ಕಾರದರು ಬಹಳ ಅಶ್ರದ್ಧೆಯಿಂದ ನೋಡುತ್ತಿರುವುದಕ್ಕೆ ರೈತಾಪಿ ಜನರಲ್ಲಿ ಬಹಳ ಅಸಮಾಧಾನ ಉಂಟಾಗಿದೆ. ನಮ್ಮ ಸರ್ಕಾರದವರು ವ್ಯವಸಾಯದ ಬಾಬಿಗಾಗಿ ನಮ್ಮ ದೇಶದಲ್ಲಿ ವಿಶೇಷವಾಗಿ ಹಣವನ್ನೇನೋ ಖರ್ಚುಮಾಡುತ್ತಿದ್ದಾರೆ. ಆದರೆ ಅದರಿಂದ ಅಷ್ಟಾಗಿ ಏನೂ ಪ್ರಯೋಜನವಾಗಿಲ್ಲ. ಕಾರಣವೇನೆಂದರೆ ಸರ್ಕಾರದವರು ಈ ಬಾಬಿನ ಬಗ್ಗೆ ಪ್ರತಿಯೊಂದು ವಿಚಾರದಲ್ಲೂ ಬಹಳ ಮಂದವಾದ ರೀತಿಯಲ್ಲಿ ಕೆಲಸ ಮಾಡುತ್ತಾ ಬಂದಿರುವುದೇ ಒಂದು ಮುಖ್ಯ ಕಾರಣ. ಇದರ ಪರಿಣಾಮದಿಂದ ಸರ್ಕಾರದವರು ಈ ಬಾಬಿಗಾಗಿ ಏನು ಖರ್ಚು ಮಾಡುತ್ತಿದ್ದಾರೋ ಅದಕ್ಕೆ ತಕ್ಕ ಪ್ರತಿಫಲ—ಎಂದರೆ ಇವರು ನಿರೀಕ್ಷಿಸಿದ್ದ ಪ್ರತಿಫಲದ ಅಂಶದಲ್ಲಿ ಒಂದು ಭಾಗ ಕೂಡ ಬರುತ್ತಿಲ್ಲ. ಆದುದರಿಂದಲೇ ಗ್ರಾಮಾಂತರ ಜನರ ಜೀವನ ಬಹಳ ದುಸ್ತರವಾದ ಸ್ಥಿತಿಯಲ್ಲಿದೆ. ನನಗೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರ ಸ್ಥಿತಿಗತಿಗಳೇನೆಂಬುದು

ಚೆನ್ನಾಗಿ ಗೊತ್ತಿದೆ. ಅದರಲ್ಲೂ ನಮ್ಮ ಬಯಲುಸೀಮೆಯ ವಿಚಾರದಲ್ಲಿ ನನಗೆ ಇನ್ನೂ ಹೆಚ್ಚಿನ ಅನುಭವವಿದೆ. ಈ ಬಯಲುಸೀಮೆಯ ಲಕ್ಷಣವೇನೆಂದರೆ ಇಲ್ಲಿ ರೈತರಿಗೆ ಹೆಚ್ಚಾಗಿ ನೀರಾವರಿ ಸೌಲಭ್ಯಗಳಿರುವುದಿಲ್ಲ. ಅಲ್ಲದೆ ಕೆಲವು ವರ್ಷ ಮಳೆ ಒಂದೊಂದು ಸಾರಿ ಒಂದೊಂದು ರೀತಿ ಬೀಳುತ್ತದೆ. ಕೆಲವು ಕಡೆ ಮಳೆಬಿದ್ದರೆ ವಿಶೇಷವಾಗಿ ಬೀಳುತ್ತದೆ, ಇಲ್ಲವೆ ಸಂಪೂರ್ಣವಾಗಿ ಬೀಳುವುದೇ ಇಲ್ಲ. ಈ ರೀತಿಯ ಅತಿವೃಷ್ಟಿ—ಅನಾವೃಷ್ಟಿಗಳ ವಿಶೇಷದಿಂದ ಈ ನಾಡಿನಲ್ಲಿರುವ ಜನರ ಹಾಗೂ ರೈತರ ಪರಿಸ್ಥಿತಿ ಬಹಳ ಕೆಟ್ಟಿರುತ್ತದೆ. ರೈತರನ್ನು ಈ ಕಷ್ಟದಿಂದ ಪಾರು ಮಾಡಬೇಕಾಗಿದ್ದರೆ ಆ ಭಗವಂತನಿಗೊಬ್ಬನಿಗೆ ಸಾಧ್ಯವೇ ಹೊರತು ಈ ಸರ್ಕಾರದವರಿಂದೇನೂ ಸಾಧ್ಯವಾಗುವುದಿಲ್ಲ. ದೇಶದಲ್ಲಿರತಕ್ಕ ರೈತ ಚೆನ್ನಾಗಿದ್ದರೆ ಆಗ ಆ ದೇಶದ ಸ್ಥಿತಿಯೂ ಚೆನ್ನಾಗಿರುತ್ತದೆ. ಆದುದರಿಂದ ರೈತನಿಗೆ ಸರಿಯಾದ ಊಟ, ಅವನಿಗೆ ಸರಿಯಾದ ಎತ್ತುಗಳು ಮತ್ತು ಜಮೀನ್ ವ್ಯವಸಾಯದ ಸಲಕರಣೆಗಳೂ ಕೃತಕ ಗೊಬ್ಬರದ ಸರಬರಾಯಿ ಇತ್ಯಾದಿಗಳನ್ನು ಸರಿಯಾಗಿ ಒದಗಿಸಿಕೊಡಬೇಕಾದ್ದು ಅತ್ಯಗತ್ಯ. ಆದರೆ ನನಗೆ ಗೊತ್ತಿರುವ ಹಾಗೆ ಈ ವರ್ಷ ರೈತನಿಗೆ ನಮ್ಮ ಕಡೆ ಈ ಕೃತಕ ಗೊಬ್ಬರದ—ಎಂದರೆ ಅಮೋನಿಯಂ ಸಲ್ಫೇಟ್-ಸೂಪರ್ ಮತ್ತು ಯುರಿಯಾ ಈ ಗೊಬ್ಬರಗಳೊಂದೂ ಸರಿಯಾದ ಕಾಲಕ್ಕೆ ಸರಬರಾಯಿ ಆಗಲೇ ಇಲ್ಲ. ನಮ್ಮ ಜಿಲ್ಲೆಯಲ್ಲೇ ಈ ಗೊಬ್ಬರಗಳು ಒಂದು ಕಡೆಯೂ ದೊರೆಯದಂತಾಗಿ ಹೋಯಿತು. ನಾನು ಕೊನೆಗೆ ಬೆಂಗಳೂರಿಗೆ ಬಂದು ಇಲ್ಲಿ ಡೈರೆಕ್ಟರವರನ್ನೇ ಕಂಡು ಅವರಲ್ಲಿ ಈ ತೊಂದರೆಗಳನ್ನೆಲ್ಲಾ ಮನವಿ ಮಾಡಿಕೊಂಡೆನು. ಆದಾಗ್ಗೂ ಪುನಃ ಆ ಗೊಬ್ಬರ ನಮಗೆ ಸರಬರಾಯಿಯಾದದ್ದು ಯಾವಾಗ? ನಮ್ಮ ಜಿಲ್ಲೆಯಲ್ಲಿ ಈ ಉಳುಮೆ ಮತ್ತು ಬಿತ್ತನೆ ಆರಂಭ ಸಾಮಾನ್ಯವಾಗಿ ಪ್ರಾರಂಭವಾಗುವುದು—ರೋಹಿಣಿ, ಮೃಗಶಿರ, ಆರಿದ್ರ—ಮಳೆಗಳಲ್ಲಿ. ಆದರೆ ನನಗೆ ಗೊಬ್ಬರ ಸರಬರಾಯಿ ಆದದ್ದು ಆರಿದ್ರ ಮಳೆ ಪೂರೈಸಿ ಪುನರ್ವಸು ಮಳೆ ಮುಗಿಯುತ್ತಿದೆ ಎನ್ನುವಾಗ. ಹೀಗೆ ರೈತನ ವಿಚಾರದಲ್ಲಿ ಸರ್ಕಾರ ತುಂಬ ತಾತ್ಸಾರಮನೋಭಾವ ತಾಳಿದೆ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಆಕ್ಷೇಪಣೆಮಾಡದಂತೆ ಈ ಕೃತಕ ಗೊಬ್ಬರಗಳ ಬೆಲೆ ಕೂಡ ಇತ್ತೀಚಿಗೆ ಸಲ್ಪ ಜಾಸ್ತಿಯಾಗಿದೆ. ರೈತರು ರಿಯಾಯಿತಿ ಕೊಡಿ ಎಂದು ಕೇಳುತ್ತಿದ್ದಾರೆ. ಆದರೆ ಅವರನ್ನು ಕೇಳುವವರೇ ಇಲ್ಲ. ಇದರಲ್ಲಿ ಇನ್ನೂ ಒಂದು ವಿಶೇಷವಾದ ಸಂಗತಿಯಿದೆ. ಈ ಕೃತಕ ಗೊಬ್ಬರಗಳಲ್ಲಿ ಬರುವ ಅಮೋನಿಯಂ ಸಲ್ಫೇಟ್—ಸೂಪರ್ ಫಾಸ್ಫೇಟ್ ಮತ್ತು ಯೂರಿಯಾ ಇತ್ಯಾದಿ ಗೊಬ್ಬರಗಳಲ್ಲಿ ಯಾವಯಾವ ಭೂಮಿಗೆ ಯಾವಯಾವ ಪ್ರಮಾಣದಲ್ಲಿ ಉಪಯೋಗಿಸಬೇಕೆಂಬುದನ್ನು ರೈತರಿಗೆ ಇಲ್ಲಿಯ ವರೆಗೂ ತಿಳಿಸಲೂ ಸರ್ಕಾರದವರಿಗೆ ಸಾಧ್ಯವಾಗಿಲ್ಲ. ರೈತರು ಸ್ಥಳೀಯ ವ್ಯವಸಾಯಾಧಿಕಾರಿಗಳನ್ನು ಕೇಳಿದರೆ ಅದಕ್ಕೆ ಸಾಯಿಲ್ ಪರೀಕ್ಷೆ ಮಾಡಿಕೊಡಬೇಕಾಗಿದೆ ಎಂದು ಹೇಳುತ್ತಾರೆ. ಆದರೆ ಈವರೆಗೂ ಪ್ರತಿ ತಾಲ್ಲೂಕಿನಲ್ಲೂ ಇರತಕ್ಕ ನಾನಾ ಸಾರದ ಭೂಮಿಗಳ ವಿಸ್ತೀರ್ಣವೇನು—ಯಾವ ಯಾವ ಭೂಮಿಗೆ ಯಾವ ಸಾರ ಕಡಮೆಯಿದೆ—ಅದಕ್ಕೆ ಯಾವಗೊಬ್ಬರ ಹಾಕಬೇಕೆಂಬುದಕ್ಕೆ ಇಲ್ಲಿಯ ತನಕ ಯಾವ ಒಂದು ಪರೀಕ್ಷೆಯೂ ನಡೆದಿಲ್ಲ. ಇದನ್ನೆಲ್ಲಾ ನಿರ್ಧಾರ ಮಾಡಬೇಕಾದದ್ದು ಸರ್ಕಾರದವರ ಕರ್ತವ್ಯ. ಆದಾಗ್ಗೂ ಅವರು ಇಲ್ಲಿಯವರೆಗೂ ಇದರ ಕಡೆಗೆ ಗಮನ ಕೊಟ್ಟಿಲ್ಲ. ಇನ್ನು ವ್ಯವಸಾಯಗಾರರಿಗೆ ಅತ್ಯಗತ್ಯವಾಗಿ ಬೇಕಾದಂಥ ವ್ಯವಸಾಯೋಪಕರಣಗಳಲ್ಲಿ ಬಹು ಮುಖ್ಯವಾದವುಗಳೆಂದರೆ—ಕುಳ ಮತ್ತು ಕುಡ. ಈ ದಿವಸ ರೈತರಿಗೆ ಜೂನ್ ತಿಂಗಳು ಆಖೈರಾಗುತ್ತಾ ಬಂದರೂ ಸರಿಯಾಗಿ ಒಂದು ಕುಳವಾಗಲೀ—ಕುಡವಾಗಲೀ ಸಿಕ್ಕುತ್ತಿಲ್ಲ. ರೈತರಿಗೆ ಬಹಳ ಕಷ್ಟವಾಗುತ್ತಿದೆ ಅವರು ಈ ಸಾಮಾನುಗಳನ್ನು ಈಗ ಬ್ಲಾಕ್ ಮಾರ್ಕೆಟ್‌ನಲ್ಲಿ ಕೊಳ್ಳುತ್ತಿದ್ದಾರೆ. ಇದರಿಂದ ಒಂದಕ್ಕೆ ಎರಡರಷ್ಟು ಹಣ ಅವರಿಗೆ ವ್ಯಯವಾಗುತ್ತಿದೆ. ಕುಡ—ಕುಳಗಳನ್ನು ತಯಾರಿಸತಕ್ಕ ಒಂದು ಫ್ಯಾಕ್ಟರಿ ಈಗ ಹರಿಹರದಲ್ಲಿದೆ. ಅವರನ್ನು ನೀವೇಕೆ ಸಕಾಲಕ್ಕೆ ಸರಿಯಾಗಿ ಸಾಮಾನುಗಳನ್ನು ಒದಗಿಸುತ್ತಿಲ್ಲವೆಂದು ಕೇಳಿದರೆ ಅವರು ಸರ್ಕಾರದವರು ನಮಗೆ ಕಬ್ಬಿಣದ ಕೋಟಾವನ್ನು ಸರಿಯಾಗಿ ಕೊಡುತ್ತಿಲ್ಲವೆಂದು ಹೇಳುತ್ತಾರೆ. ನ್ಯಾಯವಾಗಿ ಗಾಡಿಹಳಿ ಇತ್ಯಾದಿ ಸಾಮಾನುಗಳನ್ನು ಬೇಸಿಗೆಯಲ್ಲೂ—ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳನ್ನು ಮಳೆಗಾಲದಲ್ಲೂ ಒದಗಿಸತಕ್ಕದ್ದು ಆವಶ್ಯಕ. ಹೀಗೆ ಸಕಾಲಕ್ಕೆ ರೈತರಿಗೆ ಬೇಕಾದ ಉಪಕರಣ ದೊರೆಯದೆ ಅವರು ಬ್ಲಾಕು ಮಾರ್ಕೆಟ್‌ಗಳಲ್ಲಿ ಒಂದಕ್ಕೆ ಎರಡರಷ್ಟು ಹಣ ತೆತ್ತು ಕೊಳ್ಳಬೇಕಾಗಿದೆ. ಇದು ತುಂಬಾ ಶೋಚನೀಯವಾದಂಥ ಪರಿಸ್ಥಿತಿ! ಈ ಬುಲ್‌ಡೋಸರ್ಸ್ ಮತ್ತು ಟ್ರ್ಯಾಕ್ಟರುಗಳ ವಿಚಾರದಲ್ಲಿ ಕೆಲವರು ಇವು ನಮ್ಮ ದೇಶಕ್ಕೆ ಅನಾವಶ್ಯಕವೆಂಬುದಾಗಿ ಹೇಳಿದರು. ನಾನು ಅದನ್ನು ಒಪ್ಪುವುದಿಲ್ಲ, ಈ ದಿವಸ ಎಷ್ಟೋ ಕಡೆ ಅನೇಕ ಗ್ರಾಮಗಳಲ್ಲಿ ಕೂಲಿಗೆ ಜನರೇ ಸಿಕ್ಕುತ್ತಿಲ್ಲ. ಕಳ್ಳಭಟ್ಟಿ ಸಾರಾಯಿಯನ್ನು ತಯಾರಿಸುವುದಕ್ಕಾದರೆ ಜನ ಕೂಲಿಗೆ ಸಿಕ್ಕುತ್ತಾರೆ, ವ್ಯವಸಾಯದ ಬದುಕಿಗೆ ಯಾರೂ ಬರುವುದಿಲ್ಲ. ಆದರಿಂದ ಈ ಬುಲ್‌ಡೋಸರ್ಸ್ ಮತ್ತು ಟ್ರ್ಯಾಕ್ಟರುಗಳನ್ನು ಕಡಮೆ ರೇಟಿನಲ್ಲಿ ರೈತರಿಗೆ ದೊರೆಯುವಂತೆ ಮಾಡಬೇಕು, ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ರೈತನಿಗೆ ರಸ್ತೆ ಸೌಕರ್ಯಗಳಿಲ್ಲದೆ ತಾನು ಬೆಳೆದ ದವಸವನ್ನು ಮಾರುಕಟ್ಟೆಗೆ ತರಲು ಅವಕಾಶವಿಲ್ಲದಂಥಾ ಸನ್ನಿವೇಶಗಳೂ ಕೂಡ ಈ ದಿವಸ ಕೆಲವು ಕಡೆ ಇರುತ್ತವೆ. ನಮ್ಮ ಹರಿಹರ—ದಾವಣಗೆರೆ ತಾಲ್ಲೂಕುಗಳಲ್ಲಿರುವ ರಸ್ತೆಗಳು ಸರಿಯಾದ ಸ್ಥಿತಿಯಲ್ಲಿಲ್ಲ. ಆರೋಗ್ಯದ ವಿಚಾರದಲ್ಲೂ ಸಹ ಅನೇಕ ಹಳ್ಳಿಗಳಲ್ಲಿ ಜನರು ನಾನಾ ಕಷ್ಟ ನಷ್ಟಗಳಿಗೀಡಾಗುತ್ತಿದ್ದಾರೆ. ಕೆಲವು ಹಳ್ಳಿಗಳಲ್ಲಿ ಕೆರೆ ತುಂಬಿದಾಗ ಜೌಗು ಹಿಡಿದು ಜನರು ಅನಾರೋಗ್ಯದಿಂದ ನರಳುತ್ತಿರುತ್ತಾರೆ. ಆದಿ ಕರ್ಣಾಟಕರಿಗೆ ವಸತಿ ಸೌಕರ್ಯಗಳನ್ನು ಒದಗಿಸಿಕೊಡತಕ್ಕ ವಿಚಾರದಲ್ಲಿ ಈಗಾಗಲೇ ಅನೇಕ ಸದಸ್ಯರು ಮಾತನಾಡಿರುತ್ತಾರೆ. ಆದರೆ ಈ ಹಿಂದೆ ಅವರಿಗೆ ಹಣವನ್ನೊದಗಿಸಲು ಒಂದು ತಾಲ್ಲೂಕು ಅಡ್ವೈಸರಿ ಕಮಿಟಿ ಎಂದು ಒಂದು ಕಮಿಟಿಯನ್ನು ಮಾಡಲಾಗಿತ್ತು ಆ ಕಮಿಟಿಯ ಮೂಲಕ ಆಗ ಇವರಿಗೆ ಆ ಅನುಕೂಲಗಳನ್ನು ಕಲ್ಪಿಸಲಾಗುತ್ತಿತ್ತು. ಆದರೆ ಈಗ ಆ ಕಮಿಟಿಯನ್ನು ತೆಗೆದುಹಾಕಲಾಗಿದೆಯೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಈ ಜವಾಬ್ದಾರಿಯನ್ನೀಗ ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ವಹಿಸಲಾಗಿದೆಯೆಂದು ಕೇಳುತ್ತೇನೆ. ಆದರೆ ಈಗ ನಮ್ಮ ದಾವಣಗೆರೆಗೆ ಮೂರು ಮೈಲಿದೂರದಲ್ಲಿರತಕ್ಕ ಒಂದು ಹಳ್ಳಿಯಲ್ಲಿ ಕೆಲವು ಬೋವಿ ಜನಾಂಗದವರಿಗೆ ಮನೆ ಕಟ್ಟಿಕೊಳ್ಳಲು ಅರ್ಧಮರ್ಧ ಹಣಕೊಟ್ಟು ಈಗ ಅವರು ಅರ್ಧಮರ್ಧ ಮನೆಕಟ್ಟಿ ಅದನ್ನು ಪೂರೈಸಲು ಅವಕಾಶವಿಲ್ಲದೆ

(ಶ್ರೀ ಕೆ. ಟಿ. ಜಂಬಣ್ಣ)
ಗೋಳಾಡುತ್ತಿದ್ದಾರೆ, ಆ ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ಈ ಕೆಲಸ ಕೊಟ್ಟಿದ್ದರಿಂದ ಈಗ ಹೀಗೆ ನಡೆಯುತ್ತಿದೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಎಚ್. ರುದ್ರಪ್ಪ (ಕಡೂರು)—ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದವರು ನಮ್ಮ ಮುಂದಿಟ್ಟಿರತಕ್ಕ ಅಗ್ರಿಕಲ್‌ಚರಲ್, ವೆಟರಿನರಿ ಮತ್ತು ರೂರಲ್ ಡೆವಲಪ್‌ಮೆಂಟ್ ಡಿಮ್ಯಾಂಡ್‌ಗಳನ್ನು ನಾನು ಅಂಗೀಕರಿಸುತ್ತ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ದಿವಸ ನಮ್ಮ ಮತ್ತು ದೇಶದ ಮುಂದಿರತಕ್ಕ ಅನೇಕ ದೊಡ್ಡ ದೊಡ್ಡ ಸಮಸ್ಯೆಗಳಲ್ಲಿ ಮೊದಲನೆಯದು ಜಮೀನಿನ ಹಂಚಿಕೆಯ ಸಮಸ್ಯೆ. ಈ ಸಮಸ್ಯೆಯ ಕಡೆಗೆ ಸರ್ಕಾರ ಸಾಕಷ್ಟು ನಿಗಾ ಕೊಡದಿರುವುದೇ ಈ ದಿವಸ ದೇಶದಲ್ಲಿ ನಮ್ಮ ಆಹಾರದ ಕೊರತೆಯುಂಟಾಗುವುದಕ್ಕೆ ಮುಖ್ಯ ಕಾರಣ. ದೇಶದಲ್ಲಿ ಇವೊತ್ತು ಜನರಿಗೆ ಸಾಕಷ್ಟು ಆಹಾರ ದೊರೆಯುತ್ತಿಲ್ಲ. ಆಹಾರ ಧಾನ್ಯಗಳನ್ನು ಬೆಳೆಸಲು ಕೇಂದ್ರ ಹಾಗೂ ಪ್ರಾಂತ ಸರ್ಕಾರಗಳು ವಿಶೇಷವಾಗಿ ಹಣವನ್ನೇನೋ ಖರ್ಚುಮಾಡಿರುತ್ತವೆ. ಆದರೂ ಪರಿಸ್ಥಿತಿಯೇನೋ ಇದ್ದಂತೆಯೇ ಇದೆ. ಇದಕ್ಕೆ ಕಾರಣವೇನೆಂದರೆ ರೈತನಿಗೆ ಸಾಕಷ್ಟು ಉತ್ತೇಜನ ಕೊಡುವುದಿಲ್ಲ. ಅವನಿಗೆ ಅತ್ಯವಶ್ಯವಾಗಿ ಬೇಕಾಗಿರುವಂಥಾ ಉಪಕರಣಗಳು ಗೊಬ್ಬರ ಇತ್ಯಾದಿಗಳು ದೊರೆಯುತ್ತಿಲ್ಲ. ಈ ದಿವಸ ರೈತನಿಗೆ ದೊರೆಯಬಹುದಾದ ಕೃತಕ ಗೊಬ್ಬರಗಳೆಲ್ಲಾ ಕೇವಲ ತರೀ ವ್ಯವಸಾಯಕ್ಕೆ ಅನುಕೂಲವಾಗಿರಬಹುದೇ ಹೊರತು ಖುಷ್ಕಿ ಬೆಳೆಗಳಿಗೆ ಅವುಗಳಿಂದ ಏನೂ ಪ್ರಯೋಜನವಿಲ್ಲ. ನಮ್ಮ ದೇಶದಲ್ಲಿ ಮಳೆಯೇ ಬಹಳ ಸಾಮಾನ್ಯ. ಅದರಲ್ಲೂ ನಮ್ಮ ಕಡೂರು ತಾಲ್ಲೂಕಿನಲ್ಲಿ ವರ್ಷಕ್ಕೆ 20-22 ಇಂಚ್ ಮಳೆ ಬಂದರೆ ಅದೇ ಬಹಳ ಹೆಚ್ಚು. ಹೀಗಿರುವಾಗ ಅಲ್ಲಿ ರೈತರು ಖುಷ್ಕಿ ಬೆಳೆಗಳಿಗೆ ಕೃತಕ ಗೊಬ್ಬರಗಳನ್ನು ಉಪಯೋಗಿಸಿದರೆ ಪೈರೇ ಬರುವುದಿಲ್ಲ. ಅದು ಅಲ್ಲೇ ಸೀದು ಹೋಗುತ್ತದೆ. ಆದ್ದರಿಂದ ಈ ಕೃತಕ ಗೊಬ್ಬರಗಳ ತಯಾರಿಕೆಯನ್ನು ಮಾಡುವಾಗ ಯಾವ ಕಡಮೆ ಪ್ರಮಾಣದಲ್ಲಿ ಯಾವ ಪರ್ಸೆಂಟೇಜಿನಲ್ಲಿ ಕೆಮಿಕಲ್‌ಗಳನ್ನು ಸೇರಿಸಿದರೆ ಆ ಖುಷ್ಕಿ ಬೆಳೆಗಳಿಗೆ ಅನುಕೂಲವಾಗಬಹುದೆಂಬುದನ್ನು ಕಂಡು ಹಿಡಿದು ಅದಕನುಸಾರವಾಗಿ ಗೊಬ್ಬರವನ್ನು ತಯಾರಿಸಿದರೆ ಆಗ ಇದರಿಂದ ರೈತರಿಗೆ ಸ್ವಲ್ಪ ಹೆಚ್ಚಿನ ಅನುಕೂಲವಾಗಬಹುದು. ಬೆಳೆ ಬೆಳೆಯುವ ಜಮೀನುಗಳು ಜಾಸ್ತಿ ಇವೆ. ಸುಮಾರು ಎರಡೂವರೆ ಕೋಟಿ ಎಕರೆಯಷ್ಟು ಜಮೀನುಗಳು ಈಗ ಸಾಗುವಳಿಯಲ್ಲಿವೆ. ಈ ಜಮೀನುಗಳಿಂದ ಎರಡು ಕೋಟಿ ಪ್ರಜೆಗಳಿಗೆ ಅನುಕೂಲವಾಗುವಂತಹ ಒಂದು ಸ್ಕೀಮನ್ನು ಸರಕಾರ ಪರ್ಯಾಲೋಚನೆ ಮಾಡಬೇಕು. ಹಿಂದೆ Chemical manures ಬೆಲೆ ಟನ್ನು ಒಂದಕ್ಕೆ ಐದು ರೂಪಾಯಿಗಳಿದ್ದದ್ದು ಈಗ ಆರರಿಂದ ಎಂಟು ರೂಪಾಯಿ ಆವರೆಗೆ ಹೆಚ್ಚಾಗಿದೆ. ಇದನ್ನು ರೈತರು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಸುಲಭ ದರದಲ್ಲಿ ಈ Chemical manures ಸಿಕ್ಕುವಂತೆ ಮಾಡಬೇಕು. ಈಗ ಸರಕಾರದ ಕೈಯಲ್ಲಿ ಸುಮಾರು 35 ಲಕ್ಷ ಎಕರೆಗಳಷ್ಟಿದೆ. ಅದರ ಉತ್ಪನ್ನವನ್ನೂ ಹೆಚ್ಚುಮಾಡುವುದಕ್ಕಾಗಿ ಆದಷ್ಟೂ ಜಾಗ್ರತೆ ಈ ಜಮೀನುಗಳನ್ನು ಹಂಚುವ ಏರ್ಪಾಡನ್ನು ಮಾಡಿದರೆ ಅದು ಬಹಳ ಒಳ್ಳೆಯದು ಎಂದು ನನಗೆನಿಸುತ್ತದೆ. ಈ ಜಮೀನುಗಳನ್ನು ಸರಿಪಡಿಸಲು ಟ್ರ್ಯಾಕ್ಟರುಗಳನ್ನು ಬುಲ್‌ಡೋಜರುಗಳನ್ನು ಈಗ ಉಪಯೋಗಿಸುತ್ತಿದೆ. ಹಿಂದೆ ಈ ಟ್ರ್ಯಾಕ್ಟರುಗಳನ್ನು ಉಪಯೋಗಿಸಲು ಅರ್ಜಿ ಹಾಕಿದರೆ ಕೊಡುತ್ತಿದ್ದರು. ಅದರಿಂದ ರೈತರಿಗೆ ಎಷ್ಟೋ ಉಪಯೋಗವಾಗುತ್ತಿತ್ತು ಮತ್ತು ಹೀಗೆ ಈಗ ಬುಲ್‌ಡೋಜರುಗಳಿಂದ ಟ್ರ್ಯಾಕ್ಟರುಗಳಿಂದ ಅನುಕೂಲವಾಗುತ್ತಿತ್ತು. ಈಗ ಒಂದು ಟ್ರ್ಯಾಕ್ಟರು ಬೇಕೆಂದರೂ ಸಿಕ್ಕುವುದಿಲ್ಲ. ಇದರಿಂದಾಗಿ ರೈತರಿಗೆ ಅನುಕೂಲವಾಗುತ್ತಿಲ್ಲ. ಏಕೆಂದರೆ ಬೇಸಿಗೆ ಕಾಲದಲ್ಲೇ ಈ ಖುಷ್ಕಿ ಜಮೀನು ಸಾಗುವಳಿ ಮಾಡುವುದು; ಮತ್ತು ಆ ಕಾಲದಲ್ಲಿ ಧಾರಣೆವಾಸಿಗಳು ಕೂಡ ಜಾಸ್ತಿಯಾಗುತ್ತವೆ. ಹಿಂದೆ ಭೂಮಿಗಳನ್ನು ಸರಿಪಡಿಸುವುದಕ್ಕಾಗಿ ಈ ಟ್ರ್ಯಾಕ್ಟರ್‌ಬಾಡಿಗೆ ಎಕರೆಗೆ ಎಂಟು ರೂಪಾಯಿಗಳಂತೆ ತೆಗೆದುಕೊಳ್ಳುತ್ತಿದ್ದರು. ಇದರಿಂದ ಬೆಟ್ಟಗುಡ್ಡಗಳಾಗಿರತಕ್ಕ ಭೂಮಿಯನ್ನು ಸರಿಪಡಿಸಿ ವ್ಯವಸಾಯಕ್ಕೆ ಅನುಕೂಲಮಾಡಿಕೊಳ್ಳುತ್ತಿದ್ದರು. ಹಿಂದೆ ನಾನು ಒಂದು ಟ್ರ್ಯಾಕ್ಟರನ್ನಿಟ್ಟಿದ್ದರಿಂದ ಇದರ ವಿಷಯ ನನಗೂ ಗೊತ್ತಿರುವುದರಿಂದ ಇಲ್ಲಿ ಹೇಳುತ್ತಿದ್ದೇನೆ. ಹಿಂದೆ ಸುಮಾರು 40—50 Bull Dozer ಗಳಿದ್ದುವು. ಮತ್ತು ಚೆನ್ನಾಗಿ ಕೆಲಸಮಾಡುತ್ತಿದ್ದುವು. ಅಲ್ಲದೆ ಈ ತರೀಕೆರೆಯ ಬಳಿ ಒಂದು ಬುಲ್ ಡೋಜರು ಹಾಗೆ "idle" ಆಗಿ ಬಿದ್ದಿದೆ ಎಂದು ಕೇಳಿದೆ. ಅದು ಏಕೆ ಹೀಗೆ ಬಿದ್ದಿದೆ ಎಂಬುದನ್ನು ವಿಚಾರಿಸಬೇಕು. ಅಲ್ಲದೆ ಎಲ್ಲೆಲ್ಲಿ Bull Dozers ಕೊಡಬೇಕಾದರೂ ಅದಕ್ಕೆ ಸರಿಯಾದ Technical men ಇಟ್ಟುಕೊಂಡು ರೈತರಿಗೆ ಸೌಕರ್ಯ ಮಾಡಿಸಿಕೊಡಬೇಕು. ಅದರಿಂದ ಟ್ರ್ಯಾಕ್ಟರುಗಳು ಸರಿಯಾದ ರೀತಿಯಲ್ಲಿ ಉಪಯೋಗವಾಗಲು ಅನುಕೂಲವಾಗುತ್ತದೆ. ಮಳೆಗಾಲದಲ್ಲಿ ಇದರಿಂದೇನೂ ಉಪಯೋಗವಾಗುವುದಿಲ್ಲ. ಬೇಸಿಗೆಯ ಕಾಲದಲ್ಲಿ ಮಾತ್ರ season cropsಗೆ ಅನುಕೂಲವಾಗುತ್ತದೆ. ಯಾವ ಯಾವ ಕಡೆಗಳಲ್ಲಿ ಯಾವ ಯಾವ ಪ್ರದೇಶಗಳಿಗೆ ಇದರಿಂದ ಸೌಕರ್ಯಗಳು ವಾಗುತ್ತದೆ ಎಂಬುದನ್ನು ಸರಕಾರ ಯೋಚಿಸಿ ಅದಕ್ಕೆ ತಕ್ಕ ಸಲಕರಣೆಗಳನ್ನು ರೈತರಿಗೆ ಒದಗಿಸುವ ಏರ್ಪಾಡು ಮಾಡಬೇಕೆಂದು ಇಲ್ಲಿ ಸೂಚಿಸುತ್ತೇನೆ.

ಸರ್ಕಾರದವರು Co-operative Marketng Society for each Taluk" ಎಂಬುದಾಗಿ ಡಿಪೋಗಳನ್ನು ಸ್ಥಾಪಿಸಿ ರೈತರಿಗೆ ಬೇಕಾಗುವ ಕಬ್ಬಿಣ, ಗೊಬ್ಬರ, ಬೀಜ ಮುಂತಾದುವುಗಳು ಸರಿಯಾಗಿ ಸಕಾಲದಲ್ಲಿ ದೊರಕುವಂತೆ ಮಾಡಬೇಕಾದುದು ಅಗತ್ಯ. ಅಲ್ಲದೆ ಈಗ ಕೆಲವು ಪದಾರ್ಥಗಳಿಗೆ ಸರಿಯಾದ ಬೆಲೆ ಸಿಕ್ಕದೆ ಇರುವುದರಿಂದ ಈ ರೀತಿಯಾದ ಡಿಪೋಗಳನ್ನು ತೆಗೆದು ಇದರ ಮೂಲಕ ಸರಿಯಾದ ಮಾರಾಟದ ವ್ಯವಸ್ಥೆಯನ್ನು ಏರ್ಪಡಿಸಬೇಕು. ಈಗ ರೈತರು ಬೆಳೆಯುವ ದವಸ ಧಾನ್ಯಗಳಿಗೆ ಸರಿಯಾದ ಬೆಲೆಗಳು ಸಿಕ್ಕದೆ ತೊಂದರೆಯಾಗಿದೆ: ಮತ್ತು ಅವರು ಬೆಳೆದ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಕ್ಕದಿರುವುದರಿಂದ ಮತ್ತು ಅವರಿಗೆ ಉತ್ತೇಜನ ಕಡಮೆಯಾಗಿರುವುದರಿಂದ ಈ ವಿಧವಾದ Co-operatie Marketing Societyಗಳನ್ನು ತಾಲ್ಲೂಕಾ ಮಟ್ಟದಲ್ಲಿ ಏರ್ಪಡಿಸಬೇಕು; ಮತ್ತು ಸರಿಯಾದ ಬೆಲೆಗಳನ್ನು ನಿಗದಿಮಾಡಿ ಮಾರಲು ಅನುಕೂಲಮಾಡಿಕೊಡಬೇಕು. ರೈತರಿಗೆ ತಕ್ಕಷ್ಟು Subsidyಯನ್ನಾದರೂ ಕೊಟ್ಟರೆ ಅದರಿಂದ ಅವರಿಗೆ ಬಹಳ ಅನುಕೂಲವಾಗುತ್ತದೆ. ಆ ರೀತಿ ಸರಕಾರ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ. ಈ ಅಡಕೆಯ ವಿಷಯದಲ್ಲಿ ಕೆಲವು ಅಂಶಗಳನ್ನು ತಿಳಿಸಬೇಕಾಗಿದೆ. ಅಡಕೆಯು ಹೆಚ್ಚಾಗಿ ಮಲೆನಾಡಿನಲ್ಲಿ ಬೆಳೆಯುವ ಉತ್ಪನ್ನಗಳಲ್ಲಿ ಮುಖ್ಯವಾದುದು. ಅದಕ್ಕೆ ಸರ

ಕಾರದವರು ಆದಷ್ಟು ಹೆಚ್ಚಿನ ಗಮನವನ್ನು ಕೊಡಬೇಕೆಂದು ಕೋರುತ್ತೇನೆ. ಈಗ Central Areca Committeeಯವರು ಒಂದು Reasearch Station ಸ್ಥಾಪಿಸಬೇಕೆಂದಿದ್ದಾರೆ. ಇದನ್ನು ಬಿರೂರಿನಲ್ಲಿ ಸ್ಥಾಪನೆಮಾಡಿದರೆ ಹೆಚ್ಚು ಅನುಕೂಲಗಳು ಒದಗುತ್ತವೆ. ಆದರಿಂದ ಈ ರೀತಿಯ Research Stationಅನ್ನು ಬೀರೂರಿನಲ್ಲಿ ಸ್ಥಾಪನೆಮಾಡಬೇಕೆಂದು ನಾನು ಸರಕಾರವನ್ನು ಒತ್ತಾಯಮಾಡುತ್ತೇನೆ. ಈ veterinary ಇಲಾಖೆಯ ವಿಚಾರವಾಗಿ ಒಂದು ಮಾತನ್ನು ಹೇಳುತ್ತೇನೆ. ಸಾಕಷ್ಟು ಆಸ್ಪತ್ರೆಗಳು ನಮ್ಮ ದೇಶದಲ್ಲಿಲ್ಲ. ಅದಕ್ಕಾಗಿ ಹೆಚ್ಚಿಗೆ ಗಮನವನ್ನು ಸರಕಾರ ಕೊಡಬೇಕು. ನಾವು ಹತ್ತು ವರ್ಷಗಳಿಂದಲೂ ಒಂದು ಆಸ್ಪತ್ರೆಗಾಗಿ ಕೇಳುತ್ತಿದ್ದೇವೆ. ಇಲ್ಲಿಯ ವರೆಗೂ ಕೊಟ್ಟಿಲ್ಲ. ಈಗಾಲಾದರೂ ನಮ್ಮ ಕಡೆಗೆ ಈ ರೀತಿಯ ಆಸ್ಪತ್ರೆಗಳನ್ನು ಕೊಡಬೇಕೆಂದು ಸರಕಾರವನ್ನು ಒತ್ತಾಯ ಪೂರ್ವಕವಾಗಿ ಕೇಳುತ್ತೇನೆ.

ರೂರಲ್ ಡೆವಲಪ್‌ಮೆಂಟ್ ಸ್ಕೀಂಗಳಿಗಾಗಿ ಸರಕಾರದವರು ಕೊಡುತ್ತಿರುವ ಹಣ ಸಾಕಾಗುವುದಿಲ್ಲ. ಅದನ್ನು ಇನ್ನೂ ಹೆಚ್ಚಿಗೆ ಮಾಡಬೇಕಾದುದು ಅಗತ್ಯ. ಆದಷ್ಟು ಜಾಗ್ರತೆಯಾಗಿ ಈ ಕಡೆ ಗಮನ ಕೊಡಬೇಕೆಂದು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri H. K. VEERANNA GOWDH.—Discussion on these Demands has lasted for two days and it was agreed that it must be finished today. If the Chair allows more members to speak on the same, it will not be over even today.

Mr. DEPUTY SPEAKER.—Shall we have half an hour more?

Sri R. CHENNIGARAMIAH.—Even then all the members cannot have an opportunity to speak.

Sri H. K. VEERANNA GOWDH.—The object of these observations is to elicit information from Government and if members are allowed to speak and Ministers are not given an opportunity to offer explantations, the very object of these observations will not be realised. Ministers must be allowed to answer some of the points raised in the debate. Anyway it is left to the Chair.

ಶ್ರೀ ಕೆ. ಟಿ. ದಾನಪ್ಪ (ಹಾಸನ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ವ್ಯವಸಾಯದ ವಿಚಾರದಲ್ಲಿ ಒದಗಿಸಿರುವ ಹಣ ಎಂದರೆ 2,05,23,000 ರೂಪಾಯಿಗಳು ಬಹಳ ಕಡಮೆ. ಇದನ್ನು ಸುಮಾರು ಐದಾರು ಕೋಟಿಗೆ ಏರಿಸುವುದು ಯುಕ್ತವೆಂದು ನನ್ನ ಅಭಿಪ್ರಾಯವಾಗಿದೆ. ವ್ಯವಸಾಯಕ್ಕೆ ಒದಗಿಸುವ ಹಣವನ್ನು ಕಡಮೆ ಮಾಡುವುದರಿಂದ ವ್ಯವಸಾಯಕ್ಕೆ ಉತ್ತೇಜನ ದೊರಕುವುದಿಲ್ಲ. ಹೀಗೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲವೆಂದು ಇಲ್ಲಿ ತಿಳಿಯಬಯಸುತ್ತೇನೆ. ನಮ್ಮ ಇಂಡಿಯಾ ದೇಶದಲ್ಲಿ ವ್ಯವಸಾಯಕ್ಕೆ ಬಹಳ ಮಹತ್ತ್ವದ ಸ್ಥಾನವಿದೆ ಎನ್ನುವ ವಿಚಾರ ಪ್ರತಿಯೊಬ್ಬರಿಗೂ ಗೊತ್ತು. ಆದರೆ ಈಗ ಈ ಬಾಬಗೋಸ್ಕರ ಇಟ್ಟಿರುವ ಹಣವನ್ನು ನೋಡಿದರೆ ಇದರ ಅಭಿವೃದ್ಧಿಗೆ ಉತ್ತೇಜನ ಸರಿಯಾಗಿ ದೊರೆಯುತ್ತಿಲ್ಲವೆಂದು ಸ್ಪಷ್ಟವಾಗುತ್ತದೆ ಅದರಲ್ಲಿಯೂ ಈ ಸರಕಾರ ಬಂದ ಮೇಲೆ ವ್ಯವಸಾಯಾಭಿವೃದ್ಧಿಗೆ ಇಷ್ಟು ಕಡಮೆ ಹಣ ಒದಗಿಸಿರುವುದನ್ನು ನೋಡಿ ನನಗೆ ಬಹಳ ವಿಷಾದವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರೈತರಿಗೆ ಮುಖ್ಯವಾಗಿ ಬೇಕಾಗಿರುವ ಬಿತ್ತನೆಯ ಬೀಜಗಳು, ಗೊಬ್ಬರ ಮುಂತಾದವುಗಳು ಸಿಕ್ಕುತ್ತಿಲ್ಲ. ಅವರಿಗೆ ಈ ರೀತಿಯಾಗಿ ಬೀಜಗಳು ಬಿತ್ತನೆಗೆ ಒದಗದೆ ತೊಂದರೆಯಾಗಿದೆ. ಸರಕಾರದವರು ಸರಿಯಾದ ಬಿತ್ತನೆಯ ಬೀಜಗಳನ್ನು ಸಕಾಲದಲ್ಲಿ ಒದಗಿಸದೆ ಇರುವುದೇ ಈ ತೊಂದರೆಗೆ ಮುಖ್ಯ ಕಾರಣವಾಗಿದೆ. ವ್ಯವಸಾಯ ಶಾಖೆಯು ರೈತರಿಗೆ ಬಿತ್ತನೆಯ ಬೀಜಗಳನ್ನು ಸರಿಯಾಗಿ ಕ್ರಮವಾದ ರೀತಿಯಲ್ಲಿ ಹಂಚುವ ಏರ್ಪಾಡು ಮಾಡಬೇಕೆಂದು ನನ್ನ ಪ್ರಾರ್ಥನೆ.

ಈ ಗೊಬ್ಬರದ ಹಂಚಿಕೆಯ ವಿಚಾರದಲ್ಲಿ ಈಗಾಗಲೇ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಾನು ಹಾಗೆಯೇ ಹೇಳಬೇಕಾಗಿದೆ. ಬೆಳೆ ಬೆಳೆಯುವ ರೈತರಿಗೆ ಸರಿಯಾದ ರೀತಿಯಲ್ಲಿ ಈ ಸೀಮೆ ಗೊಬ್ಬರ ಸಿಕ್ಕುವುದಿಲ್ಲ. ಅದಕ್ಕಾಗಿ ನನ್ನ ಸಲಹೆ ಏನೆಂದರೆ, ಈ ಬಿತ್ತನೆಯ ಬೀಜಗಳನ್ನು ಮತ್ತು ಗೊಬ್ಬರಗಳನ್ನು ಹಂಚುವ ಸೊಸೈಟಿಗಳನ್ನು ಏರ್ಪಡಿಸಿದರೆ ವ್ಯವಸಾಯಗಾರರಿಗೆ ಅವೆಲ್ಲ ಸುಲಭವಾಗಿ ಸಿಕ್ಕುವುವು. ಆದರೆ ಇಂತಹ ಸೊಸೈಟಿಗಳಿಗೆ ಸಕಾಲದಲ್ಲಿ ತಕ್ಕಷ್ಟು ಬೀಜ ಮತ್ತು ಗೊಬ್ಬರಗಳನ್ನು ಸರಬರಾಜು ಮಾಡಬೇಕು. ಹಾಗೆ ಮಾಡುವುದರಿಂದ ರೈತರಿಗೆ ಅನುಕೂಲವಾಗುತ್ತದೆ; ಮತ್ತು ಈಗ ಮಾಡಿರುವಂತೆ ಏರ್ಪಾಡು ಮಾಡಿದರೆ ಸರಿಯಾಗಿ ಬೀಜ ಮುಂತಾದವುಗಳು ಸಿಕ್ಕುವುದಿಲ್ಲ. ಅಲ್ಲದೆ ಧಾರಣೆಗಳು ಕೂಡ ಮನಸ್ಸಿಗೆ ಬಂದಂತೆ ದಿನೇ ದಿನೇ ಏರತೊಡಗಿದೆ. ಇದರಿಂದಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಸರಿಯಾದ ಬೀಜ, ಗೊಬ್ಬರಗಳು ಸಿಕ್ಕುವುದಿಲ್ಲ. ಅದ ಕಾರಣ ರೈತರಿಗೆ ಮುಖ್ಯವಾಗಿ ಬೇಕಾದ ಈ ಬೀಜ, ಗೊಬ್ಬರಗಳು ಸರಿಯಾಗಿ ದೊರಕುವಂತೆ ಏರ್ಪಾಡು ಮಾಡಬೇಕೆಂದು ನಾನು ಸರಕಾರವನ್ನು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಅನೇಕ ಟ್ರ್ಯಾಕ್ಟರುಗಳನ್ನು ಕೊಂಡುಕೊಂಡಿದ್ದಾರೆ. ಅವು ಯಾವ ಕಡೆ, ಎಲ್ಲೆಲ್ಲಿ ಕೆಲಸಮಾಡುತ್ತಿವೆ ಎಂದು ನಮ್ಮ ಗಮನಕ್ಕೆ ಬಂದಿಲ್ಲ. ನಾನು ಒಬ್ಬ ರೈತನ ಮಗ. ಟ್ರ್ಯಾಕ್ಟರು ಬೇಕು ಎಂದು ಅಪ್ಲಿಕೇಷನ್ ಹಾಕಿದರೆ, ಈ ಜಿಲ್ಲೆಯಲ್ಲಿಲ್ಲ, ಇನ್ನೊಂದುಕಡೆ ಇದೆ ಎಂದು ಹೇಳುತ್ತಾರೆ. ಹೀಗಾಗಿ ರೈತರಿಗೆ ಟ್ರ್ಯಾಕ್ಟರುಗಳು ಸರಿಯಾಗಿ ಸಿಕ್ಕುತ್ತಿಲ್ಲ. ಹಳ್ಳ ಕೊಳ್ಳಗಳಿಂದ ಕೂಡಿದ ಜಮಿನನ್ನು ಸಮ ಮಾಡಬೇಕಾದರೆ ಬುಲ್‌ಡೋಜರುಗಳು ಬೇಕು. ಬುಲ್‌ಡೋಜರು ಬೇಕೆಂದರೆ ಅವುಗಳು ಬೆಂಗಳೂರು ಜಿಲ್ಲೆಯಲ್ಲಿವೆ ಎಂದು ತಿಳಿಸುತ್ತಾರೆ. ಅಲ್ಲಿ ಏನು ಕೆಲಸಮಾಡುತ್ತಿವೆ ಎಂಬುದು ಅರ್ಥವಾಗುತ್ತಿಲ್ಲ. ಬಹಳ ಹಣವನ್ನು ಇವುಗಳ ಮೇಲೆ ಹಾಕಿ ಅವುಗಳ ಉಪಯೋಗ ರೈತರಿಗಿಲ್ಲದೆ, ದುರುಪಯೋಗ ವಾಗುತ್ತಿದೆ. ಇದು ನ್ಯಾಯವಲ್ಲ ಮತ್ತು ರೈತರಿಗೆ ಸರಿಯಾದ ಕ್ರಮದಲ್ಲಿ ಟ್ರ್ಯಾಕ್ಟರ್ ಮತ್ತು ಬುಲ್‌ಡೋಜರ್‌ಗಳ ಉಪಯೋಗ ದೊರೆಯುವ ಹಾಗೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಕೊನೆಯದಾಗಿ ಹಳ್ಳಿಗಳ ಕೆರೆ ಕಟ್ಟೆಗಳನ್ನು ತೆಗೆದುಕೊಂಡರೆ ಅವು ಯಾವಾಗ ನಿರ್ಮಾಣವಾದುವೋ ಏನೋ ಗೊತ್ತಿಲ್ಲ. ಅವುಗಳ ಕಡೆ ಸರ್ಕಾರದವರ

(ಶ್ರೀ ಕೆ. ಟಿ. ದಾಸಪ್ಪ)

ಗಮನವಿಲ್ಲ. ಈ ವಿಚಾರಕ್ಕೆ ಸರ್ಕಾರ ಗಮನ ಕೊಟ್ಟು, ಕೆರೆಕಟ್ಟೆಗಳನ್ನು ಕಟ್ಟಿಸಬೇಕು. ಸರ್ಕಾರದವರು ವ್ಯವಸಾಯಕ್ಕೆ ಅನುಕೂಲವಾಗುವಂತೆ ಬಾವಿ, ಕೆರೆ, ಕುಂಟೆ ಇವುಗಳಿಂದ ನೀರಿನ ಸೌಲಭ್ಯ ಒದಗುವಂತೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).—ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಬೇಡಿಕೆಗಳನ್ನು ನಾನು ಅನುಮೋದಿಸುತ್ತ ಎರಡು ಸಲಹೆಗಳನ್ನು ಕೊಡಬೇಕೆಂದು ಇಚ್ಛಿಸುತ್ತೇನೆ. ವ್ಯವಸಾಯ ನಮ್ಮ ದೇಶದಲ್ಲಿ ಹೆಚ್ಚಾಗಿದೆ. ಇದನ್ನು ನಾವು ಮನಗಂಡು ಪಂಚವಾರ್ಷಿಕ ಯೋಜನೆಯಲ್ಲಿ ಬೇಕಾದಷ್ಟು ಹಣಗಳನ್ನು ಖರ್ಚು ಮಾಡಿದ್ದೇವೆ. ಮೊದಲನೆಯ ಪಂಚವಾರ್ಷಿಕ ಯೋಜನೆ ಮುಗಿದು ಬಂದರೂ ಎರಡನೆಯ ಪಂಚವಾರ್ಷಿಕ ಯೋಜನೆ ಬಂದರೂ ನಮ್ಮ ದೇಶದಲ್ಲಿರುವ ಆಹಾರಾಭಾವ ಇನ್ನೂ ಪರಿಹಾರವಾಗಿಲ್ಲ. ಇದಕ್ಕೆ ಕಾರಣವನ್ನು ಕಂಡುಹಿಡಿಯಬೇಕಾಗಿದೆ. ಇದಕ್ಕೆ ಕಾರಣವನ್ನು ತಿಳಿದುಕೊಳ್ಳಲು ಹೋದರೆ, ಮೊದಲು ಮೂಲವಾಗಿ ವ್ಯವಸಾಯ ಮಾಡತಕ್ಕ ರೈತನ ಸ್ಥಿತಿಯನ್ನು ನಾವು ನೋಡಬೇಕು. ಅವನ ಸ್ಥಿತಿ ಹೇಗಿದೆ ಎಂದು ಯೋಚನೆ ಮಾಡಿದರೆ ಆತನು ಆರೋಗ್ಯದಲ್ಲಿಯಾಗಲಿ ತನಗೆ ಬೇಕಾದ ಇತರ ವಸ್ತುಗಳನ್ನು ಕೊಳ್ಳುವುದಕ್ಕಾಗಲಿ ಶಕ್ತನಾಗಿಲ್ಲ. ಅವನಿಗೆ ಬೇಕಾಗುವ ದಿನಚರಿಯ ವಸ್ತುಗಳು ಹೇಗೆ ದೊರೆಯುತ್ತವೆ ಎನ್ನುವುದಕ್ಕಿಂತಲೂ ಅವನು ವ್ಯವಸಾಯಮಾಡತಕ್ಕ ಸಾಮಗ್ರಿಗಳನ್ನು ಎಷ್ಟುಮಟ್ಟಿಗೆ ಅನುಭವಿಸುತ್ತಾನೆಯೇ ಇಲ್ಲವೇ ಎಂಬುದನ್ನು ವಿಚಾರಿಸಬೇಕು. ಅವನಿಗಿರತಕ್ಕ ಋಣಬಾಧೆ ಎಷ್ಟರಮಟ್ಟಿಗೆ ಪರಿಹಾರವಾಗಿದೆ ಎಂಬುದನ್ನು ವಿಚಾರಮಾಡಬೇಕು. ಈ ರೀತಿಯಾಗಿ ನಾವು ವಿಚಾರಮಾಡಿ, ರೈತನಿಗಿರುವ ಋಣಬಾಧೆ ಮತ್ತು ಅವನಿಗೆ ಒದಗಬೇಕಾಗಿರತಕ್ಕ ಸೌಲಭ್ಯ ಇವುಗಳನ್ನೆಲ್ಲ ನಾವು ಅನುಕೂಲ ಮಾಡಿಟ್ಟು ಅವನಿಗೆ ಸರ್ಕಾರದಿಂದ ಆಗಬೇಕಾಗುವ ಸಹಾಯಗಳನ್ನು ಒದಗಿಸಿಕೊಟ್ಟರೆ, ಅವನು ತನ್ನಲ್ಲಿರುವ ಶಕ್ತಿಯನ್ನು ಚೆನ್ನಾಗಿ ಉಪಯೋಗಿಸಿ ಉತ್ಪತ್ತಿಯನ್ನು ಹೆಚ್ಚಿಸುತ್ತಾನೆ. ನಾವು ಈಗ ಆ ಕೆಲಸಗಳನ್ನೆಲ್ಲ ಮಾಡುತ್ತಿದ್ದೇವೆಯೇ ಎಂದು ಯೋಚನೆಮಾಡಬೇಕು. Rural indebtedness ಎಂದರೆ ರೈತನಿಗಿರತಕ್ಕ ಸಾಲ. ಈ ಸಾಲ ವಿಪರೀತವಾಗಿದೆಯೆಂದು ಎಲ್ಲರಿಗೂ ಗೊತ್ತಿದೆ. ಸರ್ಕಾರದವರು ಇದರ ನಿವಾರಣೋಪಾಯಕ್ಕೆ ಸ್ವಲ್ಪಮಟ್ಟಿಗೆ ಕೈಹಾಕಿದ್ದಾರೆ. Land Mortgage Bank ಮೂಲಕ ಒಂದು ಏಜೆನ್ಸಿಯನ್ನು ಮಾಡಿಕೊಂಡು ರೈತನಿಗೆ ಸಾಲವನ್ನು ಒದಗಿಸುತ್ತಿದ್ದಾರೆ. ಆದರೆ ಅಲ್ಲಿ ಒಬ್ಬ ರೈತ ಸಾಲ ತರುವುದಕ್ಕೋಸ್ಕರ ಹೋಗಬೇಕಾದರೆ ಬಹಳ ಕಷ್ಟವಿದೆ. ಇವೊತ್ತಿನ ದಿವಸ ಸಾಲಕ್ಕೆ ಒಂದು ಅರ್ಜಿಯನ್ನು ಹಾಕಿಕೊಂಡರೆ, ಸಾಮಾನ್ಯವಾಗಿ ಆರು ತಿಂಗಳೋ, ಒಂದು ವರ್ಷವೋ ಆಗುತ್ತದೆ, ಸಾಲ ಮಂಜೂರಾಗಲು. ಇದರಲ್ಲಿರತಕ್ಕ rigidity ಯನ್ನು ಸಡಿಲುಗೊಳಿಸಿ ರೈತನಿಗೆ ತಕ್ಷಣ ಸಾಲ ದೊರೆಯುವ ಹಾಗೆ ಮಾಡಬೇಕು. Agricultural Banks ಎಂದು ಡಿಸ್ಟ್ರಿಕ್ಟುಗಳಲ್ಲಿ ಪ್ರಾರಂಭಮಾಡಿದ್ದಾರೆ. ಇದರಿಂದ ರೈತನಿಗೆ ಅನುಕೂಲವಾಗುವುದಕ್ಕೆ ಪ್ರತಿಯಾಗಿ ಅನನುಕೂಲವಾಗಿದೆ. ಏಕೆಂದರೆ ರೈತನು ಉತ್ಪತ್ತಿ ಮಾಡತಕ್ಕ ವಸ್ತುಗಳನ್ನು ಕೊಳ್ಳತಕ್ಕ ವರ್ತಕರು ಅಲ್ಲಿ ಹೆಚ್ಚಿಗೆ ಸಂಬಂಧವನ್ನು ಇಟ್ಟುಕೊಂಡು ಆ ವರ್ತಕರಿಗೆ ಸಾಲಕೊಡುವುದರಿಂದ ಸುಗ್ಗಿಯಲ್ಲಿ ಅಗ್ಗವಾಗಿ ಕೊಂಡು ಬೆಲೆ ಏರಿದ ಮೇಲೆ ಮಾರಿ ಲಾಭ ಪಡೆಯುತ್ತಿದ್ದಾರೆ. ಈ ಬ್ಯಾಂಕು ವರ್ತಕರಿಗೆ ಸಹಾಯವಾಗಿದೆಯೇ ಹೊರತು ರೈತರಿಗೆ ಸಹಾಯವಾಗಿಲ್ಲ. ರೈತನ ಬೆಳೆಯ ಪ್ರತಿಫಲ ಅವನಿಗೆ ಸರಿಯಾಗಿ ದೊರೆಯದೆ ಮಧ್ಯವರ್ತಿ ಜನವಾಗಿರತಕ್ಕ ವರ್ತಕರಿಗೆ ದೊರೆಯುತ್ತಿದೆ. District banking system ನಿಂದ ಈಗ ರೈತನಿಗೆ ಅನುಕೂಲವಾಗುತ್ತಿಲ್ಲ. ಆದುದರಿಂದ ಸರ್ಕಾರದವರು ಆ ಬ್ಯಾಂಕುಗಳಲ್ಲಿ ಸಾಮಾನ್ಯವಾಗಿ ದಿನಸಿಯನ್ನು ಕೊಳ್ಳತಕ್ಕವರಿಗೆ ಸಾಲ ಕೊಡದಂತೆ ಮಾಡಿ ರೈತರಿಗೆ ಸಕಾಲದಲ್ಲಿ ಸಾಲ ದೊರೆಯುವಂತೆ ಮಾಡಬೇಕು. ವ್ಯವಸಾಯ ಮಾಡತಕ್ಕ ಕಾಲದಲ್ಲಿ ರೈತನಿಗೆ ಸಾಲ ದೊರೆಯತಕ್ಕಂಥ ಒಂದು ಪದ್ಧತಿಯನ್ನು ಏರ್ಪಾಡುಮಾಡಿ ಅವನಿಗೆ ಸಾಲ ದೊರೆಯುವಂತೆ ಮಾಡಬೇಕು. ವ್ಯವಸಾಯಗಾರರಿಗೆ ಒಂದೊಂದು ಸಲ ಅಕ್ಟೋಬರ್ ನವೆಂಬರ್ ತಿಂಗಳುಗಳಲ್ಲಿ ತಿನ್ನುವುದಕ್ಕೆ ಬಹಳ ದುಃಸ್ಥಿತಿಯುಂಟಾಗುತ್ತದೆ. ಆಗ short loan ಕೊಡುವ ಹಾಗೆ ಮಾಡಬೇಕು. ಆ ಸಾಲವನ್ನು ಬೆಳೆಯ ಕಟಾವು ಆದ ಅನಂತರ ತೀರಿಸಿಕೊಳ್ಳಬೇಕು. ಆ ದುಃಸ್ಥಿತಿ ಕಾಲದಲ್ಲಿ ಮಧ್ಯವರ್ತಿ ಜನಗಳು ಪ್ರವೇಶಮಾಡಿ ಸಾಲವನ್ನು ಕೊಟ್ಟು ಸುಗ್ಗಿಯಲ್ಲಿ ಬೆಳೆದ ದಿನಸಿಯನ್ನು ಅಗ್ಗವಾಗಿ ತೆಗೆದುಕೊಂಡು ಲಾಭವನ್ನು ಗಳಿಸುವಂತೆ ಮಾಡಬಾರದು. ಇದನ್ನು ಮಾತ್ರ ಖಂಡಿತವಾಗಿ ತಪ್ಪಿಸಬೇಕೆಂದು ಹೇಳುತ್ತೇನೆ.

ಬಿತ ನೆಯ ಬೀಜಗಳು ಎಂದು ವ್ಯವಸಾಯ ಇಲಾಖೆಯವರು ಮೊದಲಿಗೆ ಬಹಳ ಹುರುಪಿನಿಂದ ಕೊಡುತ್ತಿದ್ದರು. ಈಚೆಗೆ ಅದು ಬಹಳ ಕಡಮೆಯಾಗಿದೆ. ಬೀಜಗಳು ಏನಾಗಿವೆ ಎಂದರೆ, ಅದರಲ್ಲಿ ಬೆರಕೆಯಾಗಿದ್ದು ಸರಿಯಾದ ಬಿತ್ತನೆಗಳು ರೈತರಿಗೆ ದೊರೆಯುತ್ತಿಲ್ಲ. ಒಳ್ಳೆಯ ಬಿತ್ತನೆಗಳನ್ನು ತಯಾರುಮಾಡಿ ವ್ಯವಸಾಯಕ್ಕೆ ಅನುಕೂಲವಾದ ಕಾಲದಲ್ಲಿ ರೈತನಿಗೆ ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಗೊಬ್ಬರದ ವಿಷಯ ತೆಗೆದುಕೊಂಡರೆ, ಹಳ್ಳಿಗಾಡುಗಳಲ್ಲಿ ದನಕರುಗಳ ತೊಪ್ಪೆಗಳನ್ನು ಅಡಿಗೆಗೆ ಉಪಯೋಗಿಸುತ್ತಿದ್ದಾರೆ. ಮರಗಿಡಗಳು ಹೆಚ್ಚಾಗಿಲ್ಲದೆ, ಸೌದೆಗೆ ಅಭಾವವುಂಟಾಗುತ್ತಿರುವುದರಿಂದ, ತೊಪ್ಪೆಗಳನ್ನು ಸೌದೆಗೆ ಬದಲಾಗಿ ಬಹಳವಾಗಿ ಉಪಯೋಗಿಸುತ್ತಿದ್ದಾರೆ. ಇದರಿಂದ ನಮ್ಮ ದೇಶದಲ್ಲಿ ಬೆಳೆ ಅಧಿಕವಾಗಿದ್ದುದು ಈಗ ಗೊಬ್ಬರವಿಲ್ಲದೆ ಕಡಮೆಯಾಗುತ್ತಿದೆ. ಆದುದರಿಂದ artificial ಗೊಬ್ಬರವನ್ನು ಹೆಚ್ಚಾಗಿ, ಸುಲಭ ಬೆಲೆಗೆ ಜನಗಳಿಗೆ ಒದಗಿಸಿಕೊಡಬೇಕು. ಮೂರನೆಯದಾಗಿ ವ್ಯವಸಾಯ ಇಲಾಖೆಯ ಸಿಬ್ಬಂದಿಯ ಮೂಲಕ, ರೈತರಲ್ಲಿ ಹಿಂದಿನಿಂದಲೂ ರೂಢಮೂಲವಾಗಿ ಬಂದಿರತಕ್ಕ ಪದ್ಧತಿಗೆ ಬದಲಾಗಿ ಈಗಿನ ಹೊಸ ರೀತಿಗೆ ಹೊಂದಿಕೊಳ್ಳಲು ಜನರಲ್ಲಿ ಪ್ರಚಾರ ಕಾರ್ಯವನ್ನು ನಡೆಸಬೇಕು. ವ್ಯವಸಾಯ ಇಲಾಖೆಯಲ್ಲಿರುವ ಇನ್ಸ್‌ಪೆಕ್ಟರುಗಳು, ಫೀಲ್ಡ್‌ಮನ್‌ಗಳು ಮುಂತಾದವರ ಮೂಲಕ ಜನಗಳಲ್ಲಿ ಹೆಚ್ಚಿಗೆ ಪ್ರಚಾರಮಾಡಿ, ಈಗಿನ ವ್ಯವಸಾಯ ಪದ್ಧತಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಏರ್ಪಾಡುಗಳನ್ನು ಮಾಡಿ ಜನರಿಗೆ ಅನುಕೂಲಗಳನ್ನು ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಒಂದೇ ಒಂದು ವಿಷಯ. ಗ್ರಾಮಾಭಿವೃದ್ಧಿ ಇಲಾಖೆಯ ವಿಷಯವಾಗಿ ಬಹಳ ಹೇಳತಕ್ಕದ್ದಿದೆ

ಗ್ರಾಮಾಭಿವೃದ್ಧಿ ಇಲಾಖೆ ಪ್ರವೇಶ ಮಾಡದೆ ಇರತಕ್ಕ ಬಾಬೇ ಇಲ್ಲ. ಇವರು ಪ್ರವೇಶ ಮಾಡಿದರೂ ಮೂರು ಕಾಸಿನ ಕೆಲಸವೂ ಆಗುವುದಿಲ್ಲ. ಒಂದು ತಾಲ್ಲೂಕನ್ನು ತೆಗೆದುಕೊಂಡರೆ ಅಲ್ಲಿಗೆ ಹತ್ತುಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮೂರು ಸಾವಿರ ರೂಪಾಯಿ ಇರುತ್ತವೆಂದು ಇಟ್ಟುಕೊಳ್ಳೋಣ. ಆ ಮೂರು ಸಾವಿರ ರೂಪಾಯಿಗಳಲ್ಲಿ ಒಂದೊಂದು ಹೋಬಳಿಗೆ ಎರಡೆರಡು ಮನೆಗಳನ್ನು ಕಟ್ಟಿಸಿದರೆ, ಹರಿಜನರಸ್ಥಿತಿ ಉದ್ಧಾರವಾಗುವುದಿಲ್ಲ. ಈ ದಿಕ್ಕಿನಲ್ಲಿ ಮಾತ್ರ ಸ್ವಲ್ಪ ಧೈರ್ಯವಾಗಿ ಮುಂದೆ ಹೋಗಬೇಕು. ಸಾಮಾನ್ಯವಾಗಿ ಹತ್ತು ವರ್ಷಗಳೂ ಹರಿಜನರಿಗೆ ವಾಸಮಾಡಲು ಯೋಗ್ಯವಾದ ಒಳ್ಳೆಯ ಮನೆಗಳನ್ನು ಕಟ್ಟಿಸಿಕೊಡಬೇಕು. ಒಂದೊಂದು ಕಡೆ ಒಂದೋ ಎರಡೋ ಮನೆಗಳನ್ನು ಕಟ್ಟಿಸಿದರೆ ಪ್ರಯೋಜನವಾಗುವುದಿಲ್ಲ. ಇದರಲ್ಲಿ approach roads ಮಾಡಿಸುವುದಿದೆ, ಬಾವಿಗಳನ್ನು ತೆಗೆಸುವುದಿದೆ. ಇದರಲ್ಲಿ overlapping of works ಆಗುತ್ತಿದೆ. ಇದನ್ನು ತಪ್ಪಿಸಬೇಕು. State Fund Road, District Board Road, Rural Development Road, N.E.S. Scheme roads ಎಂದು ನಾಲ್ಕೈದು ಏಜೆನ್ಸಿಗಳಿಂದ ಈ ಕೆಲಸಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಈಗ ಎಲ್ಲಿಯಾದರೂ ಒಂದು ಕೆಲಸವಾಗಬೇಕು ಎಂದರೆ, ಯಾವ ಅಥಾರಿಟೀಸ್‌ನ್ನು ಕೇಳಬೇಕು ಎಂಬುದು ತಿಳಿಯುವುದಿಲ್ಲ. ಗ್ರಾಮಾಭಿವೃದ್ಧಿ ಇಲಾಖೆಯವರನ್ನು ಕೇಳಿದರೆ, N.E.S. ಅಧಿಕಾರಿಗಳನ್ನು ಕೇಳಿ ಎನ್ನುತ್ತಾರೆ; ಅವರನ್ನು ಕೇಳಿದರೆ ಮತ್ತೊಬ್ಬರನ್ನು ಕೇಳಿ ಎನ್ನುತ್ತಾರೆ. ಈ ರೀತಿಯಾಗಿ ಒಬ್ಬರಿಂದೊಬ್ಬರಿಗೆ ಜವಾಬ್ದಾರಿಯನ್ನು shift ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಈ ಕೂಡಲೇ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿ, ಇಂಥ ಇಲಾಖೆ ಇಂಥ ಕೆಲಸಮಾಡಬೇಕು ಎಂದು ಒಂದೇ ಕೆಲಸವನ್ನು ನಾಲ್ಕೈದು ಏಜನ್ಸಿಗಳ ಮೂಲಕ ಮಾಡಿಸುವುದಕ್ಕೆ ಬದಲಾಗಿ ಯಾವುದಾದರೂ ಒಂದು ನಿರ್ದಿಷ್ಟವಾದ ಇಲಾಖೆಯಿಂದ ಈ ಕೆಲಸ ಮಾಡಿಸುವುದು ಒಳ್ಳೆಯದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೆ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರುವ ಬೇಡಿಕೆಯ ಮೇಲೆ ಮಾತನಾಡಲು ಹೆಚ್ಚು ಕಾಲಾವಕಾಶವಿಲ್ಲದ ಮೂಲಕ ದೀರ್ಘವಾಗಿ ಭಾಷಣ ಮಾಡದೆ, ನನ್ನ ಸೂಚನೆಗಳನ್ನು ಅಷ್ಟು ತಿಳಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ಹೆಚ್ಚು ಆಹಾರ ಉತ್ಪತ್ತಿ ಮಾಡಬೇಕು ಎಂಬುದೂ ಹೆಚ್ಚು ಜನರಿಗೆ ಉದ್ಯೋಗ ಒದಗಿಸಿ ಕೊಡಬೇಕೆಂಬುದೂ ನಮ್ಮ ಗುರಿಯಾಗಿದೆ. ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಕಡಮೆ ಉತ್ಪತ್ತಿಯಾಗುತ್ತಿದೆ ಕಡಮೆ ಜನರಿಗೆ ಉದ್ಯೋಗವಿದೆ. ನಮ್ಮಲ್ಲಿ ಶೇಕಡ 88ರಷ್ಟು ಜನ ವ್ಯವಸಾಯ ಮಾಡುತ್ತಾರೆ. ಈಗ ದೇಶದಲ್ಲಿ ಆಹಾರ ಕಡಮೆಯಾಗಿದೆ. ಸರ್ಕಾರದ ಯಂತ್ರವು ಸಹಕಾರ ಮನೋಭಾವನೆಯಿಂದ ನಡೆಯುತ್ತಿಲ್ಲ. ಬೇಕಾದಷ್ಟು ಹಣ ಖರ್ಚು ಆಗುತ್ತಾ ಇದ್ದರೂ ಅದಕ್ಕೆ ತಕ್ಕ ಪ್ರತಿಫಲ ದೊರಕುತ್ತಿಲ್ಲ. ಇದಕ್ಕೆಲ್ಲಾ ಕಾರಣವಾಗಿರುವ ಮೂಲಭೂತ ದೋಷವನ್ನು ಮೊದಲು ಕಂಡುಹಿಡಿಯಬೇಕು. ಪ್ರಕೃತಿ ಕೊಟ್ಟಿರತಕ್ಕಂಥ ಸೌಲಭ್ಯಗಳನ್ನು ಸರಿಯಾಗಿ ಉಪಯೋಗಿಸಿಕೊಂಡಿಲ್ಲ. ದೇಶದಲ್ಲಿ ಆಹಾರದ ಬಗ್ಗೆ self-sufficient ಆಗಿರಬೇಕು. ಆದರೆ ಕೇವಲ ರಾಜಕೀಯ ಗೊಂದಲದಲ್ಲಿ ಜನರು ಇದ್ದಾರೆ. ಸಮಾಜದಲ್ಲಿ ಏನೋ ಒಂದು ಅತೃಪ್ತಿಯುಂಟಾಗಿದೆ. ಇಲಾಖೆ ಇಲಾಖೆಗಳಲ್ಲಿ ಪರಸ್ಪರ ಸಹಕಾರವಿಲ್ಲದೆ ಕೆಲಸ ಸುಗಮವಾಗಿ ನಡೆಯುತ್ತಿಲ್ಲ. ವ್ಯವಸಾಯ ಉದ್ಯಮದಲ್ಲಿ ವೈಜ್ಞಾನಿಕ ಸಂಶೋಧನೆಯ ಪರಿಣಾಮದ ಫಲ ಪಡೆದು ಉತ್ಪತ್ತಿ ಹೆಚ್ಚಿಸಲು ತೀವ್ರ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ನಮ್ಮ ಗುರಿಯಾಗಿರುವ ಹೆಚ್ಚು ಆಹಾರ ಉತ್ಪತ್ತಿ ಹೆಚ್ಚು ಜನರಿಗೆ ಉದ್ಯೋಗ ದೊರಕುವಂತೆ ಪ್ರಯತ್ನ ಮಾಡಬೇಕಾಗಿದೆ. ಸಣ್ಣ ಸಣ್ಣ ಕೆರೆ, ಅಣೆಕಟ್ಟುಗಳನ್ನು ಮಾಡಿ ನೀರನ್ನು ಒದಗಿಸಿ ಹೆಚ್ಚು ಆಹಾರ ಉತ್ಪತ್ತಿಯಾಗುವುದಕ್ಕೆ ಸಹಾಯ ಮಾಡಬೇಕು. ವ್ಯವಸಾಯಗಾರರಿಗೆ ವರ್ಷದಲ್ಲಿ ಮೂರು ನಾಲ್ಕು ತಿಂಗಳ ಕೆಲಸವಿರುತ್ತದೆ ಉಳಿದ ವೇಳೆಯಲ್ಲಿ ಅವರಿಗೆ ಒಂದು ಕೈಗಾರಿಕೆಯ ಉದ್ಯೋಗವನ್ನು ಕಲ್ಪಿಸಿಕೊಡಬೇಕು ಅವರು ಸುಮ್ಮನೆ ವ್ಯರ್ಥವಾಗಿ ಕಾಲ ಕಳೆಯುತ್ತಾರೆ. ವರ್ಷೇ ವರ್ಷೇ ಬಜೆಟ್ಟು ಸಭೆಯಮುಂದೆ ಬಂದು ಓಟು ತೆಗೆದುಕೊಂಡು ಪಾಸ್ ಮಾಡಿದರೆ ನಿಜವಾಗಿಯೂ ಜನತೆಯೂ ಪರಿಸ್ಥಿತಿ ಉತ್ತಮವಾಗುವುದಿಲ್ಲ. ವೈಜ್ಞಾನಿಕ ಸಂಶೋಧನೆಯ ಲಾಭ ತೆಗೆದುಕೊಂಡು ವ್ಯವಸಾಯಕ್ಕೆ ಸಹಾಯವಾಗುವಂತೆ ಮಾಡಬೇಕು. ರೈತನಿಗೆ ಮುಖ್ಯವಾದದ್ದು ಗೊಬ್ಬರ. ರಾಸಾಯನಿಕ ಗೊಬ್ಬರವನ್ನು ರೈತನಿಗೆ ಕಡಮೆ ಬೆಲೆಗೆ ಒದಗಿಸುವಂತೆ ಮಾಡಬೇಕು. ಆದುದರಿಂದ ಬಿತ್ತನೆಯ ಕಾಲದಲ್ಲಿ ರೈತನಿಗೆ ಉತ್ತಮ ಬೀಜ, ರಾಸಾಯನಿಕ ಗೊಬ್ಬರವನ್ನು ಒದಗಿಸುವಂತೆ ಏರ್ಪಾಡು ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ರೈತನಿಗೆ ಬೇಕಾಗುವ ವ್ಯವಸಾಯದ ಸಲಕರಣೆಗಳನ್ನು ಒದಗಿಸಬೇಕು. ಈಗ ವನಮಹೋತ್ಸವ ಮಾಮೂಲಾಗಿ ನಡೆಯುತ್ತಿದೆ. ಅದರಿಂದ ಹೆಚ್ಚಾಗಿ ಏನೂ ಪ್ರಯೋಜನವಾಗಿಲ್ಲ. ವನಸಂಪತ್ತಿನ ಕಡೆಗೆ ನಿಗಾ ಕೊಟ್ಟಿಲ್ಲ. ಮಾವಿನ ಮರ ಹಣ್ಣುಗಳ ಗಿಡಗಳನ್ನು ಕಡಿದು ಹಾಕುತ್ತಾರೆ; ಮತ್ತು ಒಲೆಗೆ ಉರಿಯುವದಕ್ಕೆ ಕಟ್ಟಿಗೆಯನ್ನು ಉಪಯೋಗಿಸುತ್ತಾರೆ. ನಮ್ಮ ಆಹಾರದಲ್ಲಿ ಹಣ್ಣುಗಳನ್ನು ಉಪಯೋಗಿಸುವುದು ಮಹತ್ತ್ವದ್ದಾಗಿದೆ. ವನಮಹೋತ್ಸವದಲ್ಲಿ ಹಣ್ಣಿನಗಿಡಗಳನ್ನು ಹಾಕಬೇಕು ಮತ್ತು ವನಸಂಪತ್ತಿನ ಕಡೆಗೆ ಹೆಚ್ಚು ನಿಗಾ ಕೊಡಬೇಕು. ಸಗಣಿಯಿಂದ ಉತ್ತಮ ಗೊಬ್ಬರ ತಯಾರಾಗುತ್ತಿದೆ. ಆದರೆ ಅದನ್ನು ಉರವಲಕ್ಕಾಗಿ ಉಪಯೋಗಿಸಲಾಗುತ್ತದೆ. ಸರಕಾರದವರು ಜವಾಬ್ದಾರೀ ವಹಿಸಿ ರೈತನಿಗೆ ಬೇಕಾಗುವ ಸೌಲಭ್ಯಗಳನ್ನು ಒದಗಿಸಿಕೊಟ್ಟು ಆಹಾರ ಅಭಾವವನ್ನು ಹೋಗಲಾಡಿಸಬೇಕು. ರೈತರಲ್ಲಿ co-operative farming system ಏರ್ಪಾಡು ಆಗುವಂತೆ ಮಾಡಿದರೆ ವ್ಯವಸಾಯವು ಸರಿಯಾಗಿ ಆಗುತ್ತದೆ.

ವ್ಯವಸಾಯಕ್ಕೆ ಸಂಬಂಧಪಟ್ಟ ಗೋಸಂಪತ್ತು ಮುಖ್ಯವಾದುದು. ಗೋಸಂಪತ್ತಿನ ಅಭಿವೃದ್ಧಿಗೆ ಹೆಚ್ಚು ನಿಗಾ ಕೊಡಬೇಕು. ಅಲ್ಲಲ್ಲಿ ತಾಲ್ಲೂಕುಗಳಲ್ಲಿ ಗೋಸಂಪತ್ತಿನ ಸ್ಪರ್ಧೆ ನಡೆಯುವಂತೆ ಏರ್ಪಾಡು ಮಾಡಬೇಕು. ಜಾತ್ರೆಗಳಲ್ಲಿ ಸ್ಪರ್ಧೆ ನಡೆಸಿ ಒಳ್ಳೆಯ ದನಗಳಿಗೆ ಬಹುಮಾನ ಕೊಡಬೇಕು. ಅಂದರೆ ಉತ್ತೇಜನ ದೊರೆಯುವುದು. ದನಗಳ ಆರೋಗ್ಯವನ್ನು ಕಾಪಾಡುವದಕ್ಕೆ ವೈದ್ಯಕೀಯ ಸಹಾಯ ಒದಗಿಸಲು veterinary mobile van ಏರ್ಪಾಡು ಮಾಡಬೇಕು. ರೈತನ ಮಕ್ಕಳಿಗೆ ವ್ಯವಸಾಯ ಕಾಲೇಜಿನಲ್ಲಿ ಸೀಟು ದೊರಕುವಂತೆ ಮಾಡಬೇಕು. ಇನ್ನು

(ಶ್ರೀ ವೈ. ವೀರಪ್ಪ)

ಮುಂದೆ ವ್ಯವಸಾಯ ಕಾಲೇಜಿನಲ್ಲಿ ರೈತನ ಮಕ್ಕಳಿಗೇ ಅದಷ್ಟು ಮಟ್ಟಿಗೆ ಸೀಟುಕೊಡಬೇಕು. ಇನ್ನೂ ಅನೇಕ ವಿಚಾರಗಳಿವೆ. ಆದರೆ ಕಾಲಾವಕಾಶವು ಈಗ ಇಲ್ಲ, ಇಷ್ಟಕ್ಕೆ ಮುಗಿಸುತ್ತೇನೆ.

ಶ್ರೀ ಡಿ. ಮೂಕಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈಗ ನಮ್ಮ ಮುಂದಿಟ್ಟಿರುವ ಈ ಮೂರು ಡಿಮ್ಯಾಂಡ್‌ಗಳನ್ನು ಪುಷ್ಟೀಕರಿಸುತ್ತಾ ವ್ಯವಸಾಯದ ವಿಚಾರದಲ್ಲಿ ಒಂದೆರಡು ಸಲಹೆಗಳನ್ನು ತಮ್ಮ ಮುಂದೆ ಇಡಬೇಕೆಂದು ನಾನು ನಿಂತಿದ್ದೇನೆ. ವ್ಯವಸಾಯವೆಂಬುದು ಇಡಿಯ ದೇಶದಲ್ಲಿ ಈಗಿನ ಅತಿ ಮುಖ್ಯ ಪ್ರಶ್ನೆಯಾಗಿದೆ. ವ್ಯವಸಾಯವನ್ನು ಉತ್ತಮಪಡಿಸಬೇಕೆಂದು ಹೇಳಿ ಸರ್ಕಾರದವರು ತೆಗೆದಿರತಕ್ಕ ಈ ಇಲಾಖೆಯಿಂದ ವ್ಯವಸಾಯ ಒಂದು ಕ್ರಮದಲ್ಲಿ ನಡೆಯಬೇಕೆಂದಿರುವಲ್ಲಿ, ಅದೀಗ ಯಾವ ರೀತಿ ನಡೆಯುತ್ತಿದೆಯೆಂಬುದರ ಬಗ್ಗೆ ಕೆಲವು ಅಂಕಿ ಅಂಶಗಳನ್ನು ತಮ್ಮ ಮುಂದಿಡ ಬಯಸುತ್ತೇನೆ.

ವ್ಯವಸಾಯದ ಇಲಾಖೆಯವರು ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದಾರೆ. ಈ ಸ್ಪರ್ಧೆಯ ಮೊಬಲಗು ನಿಜವಾಗಿಯೂ ವ್ಯವಸಾಯ ಮಾಡತಕ್ಕ ನಿಜವಾದ ರೈತನಿಗೆ ದೊರಕಿದೆಯೇ? ಎಂದು ಕೇಳುತ್ತೇನೆ. ಸ್ಪರ್ಧೆಯ ಮೊಬಲಗನ್ನು ಪಡೆಯತಕ್ಕ ಮನುಷ್ಯ ವಾಸ್ತವವಾಗಿ ಒಬ್ಬ ದೊಡ್ಡ ಜಮೀನ್ದಾರ, ಒಬ್ಬ ಬಂಡವಾಳಶಾಹಿ, ಹೆಚ್ಚಿಗೆ ಉತ್ಪನ್ನವಿರತಕ್ಕಂಥವನು, ಹೆಚ್ಚಿಗೆ ಖರ್ಚು ಮಾಡಿ, ಸ್ಪರ್ಧೆಯಲ್ಲಿ ಹೆಚ್ಚಿಗೆ ಅನುಕೂಲವನ್ನು ಪಡೆಯುತ್ತಿದ್ದಾನೆ, ಅಷ್ಟೇ. ಆದ್ದರಿಂದ ಇಂಥ ಸ್ಪರ್ಧೆಗಳ ಫಲ ನಿಜವಾದ ಸಾಗುವಳಿ ರೈತರಿಗೆ ಸಿಕ್ಕಬೇಕಾದರೆ, ಕೇವಲ ರೈತರಾಗಿ ಗೇಣಿ ಜಮೀನನ್ನು ಸಾಗುವಳಿಮಾಡತಕ್ಕ ರೈತರು ದೇಶದಲ್ಲಿ ಎಷ್ಟು ಜನರಿದ್ದಾರೆಂಬುವನ್ನು ಮೊದಲು ತಿಳಿದುಕೊಳ್ಳಬೇಕಾಗಿದೆ. ಅವರು ಹೆಚ್ಚು ಖರ್ಚುಮಾಡಿ ವ್ಯವಸಾಯ ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಏನು ಅನಾನುಕೂಲಗಳಿವೆಯೆಂಬುದನ್ನೂ ಸರಕಾರದವರು ಪರಿಶೀಲಿಸಬೇಕು ಏಕೆಂದರೆ ದೇಶದಲ್ಲಿ ಬೆನ್ನುಮೂಳೆಯಂತಿರುವವನು, ದೇಶಕ್ಕೆ ಆಧಾರಭೂತನಾಗಿರುವವನು, ದೇಶದ ಜನರಿಗೆ ಬೇಕಾದ ಆಹಾರವನ್ನು ಸೃಷ್ಟಿ ಮಾಡತಕ್ಕವನು ರೈತ. ಅವನ ಸ್ಥಿತಿ ಇವೊತ್ತು ಎಷ್ಟು ಚಿಂತಾಜನಕವಾಗಿದೆ! ಅವನಿಗೆ ಉತ್ತೇಜನ ಕೊಡುವಂತೆ ಮಾಡಿದ ಹೊರತು ದೇಶ ಮುಂದುವರಿಯಲಾರದು. ಇಂದು ದೇಶದಲ್ಲಿರತಕ್ಕ ಎಲ್ಲಾ ಉದ್ಯಮಗಳಂತಲ್ಲದೆ, ರೈತ ಮುಖ್ಯವಾಗಿ ಅವಲಂಬಿಸಿಕೊಂಡಿರುವುದು ಪ್ರಕೃತಿಯನ್ನು. ಪ್ರಕೃತಿಯ ಅನೇಕ ಪ್ರಕೋಪಗಳನ್ನು ಸಹಿಸಿಕೊಂಡು ಆತ ಆಹಾರವನ್ನು ಸೃಷ್ಟಿ ಮಾಡಬೇಕಾದರೆ ಅವನೆಷ್ಟು ಕಷ್ಟಪಡಬೇಕು, ಅವನಿಗಿರತಕ್ಕ ಎಡರು ತೊಡರುಗಳೇನು, ಅವುಗಳನ್ನು ಬಗೆಹರಿಸುವುದಕ್ಕೆ ಮುಖ್ಯವಾಗಿ ಏನೇನು ಮಾಡಬೇಕೆಂಬುದನ್ನು ವ್ಯವಸಾಯದ ಇಲಾಖೆಯವರು ಪರಿಶೋಧನೆ ಮಾಡಬೇಕು. ಈಗ ವ್ಯವಸಾಯದ ಇಲಾಖೆಯವರು ನಡೆಸುತ್ತಿರತಕ್ಕ ಪರಿಶೋಧನೆ ಏನೂ ಸಾಲದು. ರೈತನಿಗಿರತಕ್ಕ ನ್ಯೂನತೆಗಳು ಕಷ್ಟಗಳನ್ನು ಬರಿಯ ಗೊಬ್ಬರ ಸರಬರಾಯಿ ಮಾಡಿದ್ದರಿಂದಾಗಲಿ, ಒಳ್ಳೆಯ ಬೀಜವನ್ನು ಒದಗಿಸಿದ್ದರಿಂದಲಾಗಲಿ, ವ್ಯವಸಾಯವನ್ನು ಇಂಥ ರೀತಿಯಲ್ಲಿ ನಡೆಸಬೇಕೆಂದು ಹೇಳಿ ಕೊಡುವುದರಿಂದಾಗಲಿ ನಿವಾರಣೆ ಮಾಡಿದಂತಾಗಲಿಲ್ಲ. ಇದರ ಜೊತೆಗೆ ಇನ್ನೂ ಅನೇಕ ತಾಪತ್ರಯಗಳಿವೆ. ಮುಖ್ಯವಾಗಿ ಹೇಳುವುದಾದರೆ, ಮಧ್ಯಸ್ಥಗಾರರಿಂದ ಅವನಿಗೆ ಉಂಟಾಗಿರತಕ್ಕ ತೊಂದರೆ. ಅವರ ಕಿರುಕುಳಗಳಿಂದ ರೈತ ಉದ್ಧಾರನಾಗುವುದಿಲ್ಲ.

ಈಗ ದೇಶದಲ್ಲಿ ರೈತನೆಂದರೆ ನಾನಾ ಬಗೆಯವರಿದ್ದಾರೆ. ಮೂಲ ರೈತನಾಗಿ ತಾನೇ ವ್ಯವಸಾಯ ನಡೆಸುತ್ತಾ ಕಂದಾಯ ಕೊಟ್ಟುಕೊಂಡಿರುವವನು ಒಂದು ರೀತಿಯ ರೈತ. ತಾನು ಬೇಸಾಯಮಾಡದೆ ಕೇವಲ ಕಂದಾಯ ಕೊಟ್ಟುಕೊಂಡು ಮತ್ತು ಕೆಲಸಗಾರರನ್ನಿಟ್ಟುಕೊಂಡು ಸಾಗುವಳಿ ನಡೆಸುವವನು ಇನ್ನೊಂದು ಬಗೆಯವನು. ಮೂರನೆಯವನೆಂದರೆ ತನಗೇ ಜಮೀನಿಲ್ಲದೆ ಸರ್ಕಾರಕ್ಕೆ ಕಂದಾಯವನ್ನು ಸಹ ಕೊಡಬೇಕಾಗಿಲ್ಲದೆ ಇತರರ ಜಮೀನನ್ನು ಸಾಗುವಳಿಮಾಡಿಕೊಂಡಿರತಕ್ಕವನು. ಮುಖ್ಯವಾಗಿ ಇಂಥವರುಗಳ ಸ್ಥಿತಿಯನ್ನು ಸುಧಾರಿಸಿದ ಹೊರತು ದೇಶ ಉದ್ಧಾರವಾಗುವುದಿಲ್ಲ. ಅವರುಗಳನ್ನೀಗ ರೈತನೆಂದು ಪರಿಗಣಿಸಿಯೇ ಇಲ್ಲ. ಆದ್ದರಿಂದ ನಾನು ಹೇಳುವುದಿಷ್ಟು. ಮೊದಲು ಈ ಬಗೆಯ ರೈತರ ಸಮಸ್ಯೆಯನ್ನು ಪರಿಹರಿಸಬೇಕು. ಆ ಮೇಲೆ ವ್ಯವಸಾಯದ ಇಲಾಖೆಯವರು ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ವ್ಯವಸಾಯದ ಫಾರಮ್ಮನ್ನು ತೆರೆಯಬೇಕು. ಇದರ ಮುಖೇನ ಹಳ್ಳಿಯ ರೈತರಿಗೆ ಉತ್ತಮ ವ್ಯವಸಾಯ ಕ್ರಮವನ್ನು ತಿಳಿಯಪಡಿಸಬೇಕು; ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ರೈತ ಸಂಘವನ್ನು ಏರ್ಪಡಿಸಬೇಕು.

Mr. SPEAKER.—Sri Chennigaramiah will now reply.

(Some Members rose.)

Mr. SPEAKER.—I have already called upon the Hon'ble Minister to reply.

Sri B. R. SUNTHANKAR.—As a protest, we are going to stage a walk out.

(Sri Sunthankar followed by some Marathi Members withdrew from the House.)

ಶ್ರೀ ಆರ್. ಚೆನ್ನಿಗರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇದುವರೆಗೂ ಮಾನ್ಯ ಸದಸ್ಯರುಗಳು ನನಗೆ ಸಂಬಂಧಪಟ್ಟ ಇಲಾಖೆಯ ಮೇಲೆ ಭಾಷಣಗಳನ್ನು ಮಾಡುತ್ತಾ ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಭಾಷಣಮಾಡುತ್ತಾ ಕೆಲವು ಅಂಶಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಮುಖ್ಯವಾಗಿ ಎಲ್ಲರೂ ಒಂದಂಶವನ್ನು ಒತ್ತಾಯಮಾಡಿ ಹೇಳುತ್ತಾ ಬಂದಿದ್ದಾರೆ. ಅದೇನೆಂದರೆ, ರೂರಲ್ ಡೆವಲಪ್‌ಮೆಂಟಿಗೆ ಈ ವರ್ಷದ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣ ಬಹಳ ಕಡಮೆ; ಇದು ಸಾಕಾಗುವುದಿಲ್ಲ ಎನ್ನುವುದು ಅವರ ಅಭಿಪ್ರಾಯ. ಹಾಗೆಯೇ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಕೊಟ್ಟಿರತಕ್ಕದೂ ಕಡಮೆ, ಅದನ್ನು ಜಾಸ್ತಿಮಾಡಬೇಕೆಂದೂ ಹೇಳಿದ್ದಾರೆ. ಈ ವಿಷಯದಲ್ಲಿ ಅವರಿಗೂ ಸರ್ಕಾರಕ್ಕೂ ಏನೂ ಭಿನ್ನಾಭಿಪ್ರಾಯವೇ ಇಲ್ಲ. ಅವರು ಹೇಳಿದ ಪ್ರತಿಯೊಂದು ಅಂಶವನ್ನು ನಾನು ಒಪ್ಪುತ್ತೇನೆ.

ಆದರೆ, ಇದೇ ರೀತಿ ಪ್ರತಿಯೊಂದು ಡಿಮ್ಯಾಂಡ್ ಬಂದಾಗಲೂ ಸದಸ್ಯರು ಮಾಡಿದ ಭಾಷಣಗಳನ್ನು

ನೋಡಿದರೆ, ಆಯಾ ಡಿಮ್ಯಾಂಡಿಗೆ ಸಂಬಂಧಪಟ್ಟಂತೆ ಕೊಟ್ಟಿರತಕ್ಕ ಹಣ ಬಹಳ ಕಡಮೆಯೆಂದೇ ವಾದಿಸಿದ್ದಾರೆ. ಅವರು ಹೇಳಿರತಕ್ಕುದು ವಾಸ್ತವವೂ ಆಗಿದೆ. ಹೀಗೆ ಪ್ರತಿಯೊಂದು ಡಿಮ್ಯಾಂಡಿಗೂ ಕಡಮೆಯೇ ಒದಗಿಸಿ ಇವೊತ್ತಿನ ದಿವಸ ಡಿಫಿಸಿಟ್ ಬಡ್ಜೆಟ್ಟನ್ನಿಟ್ಟು ಕೊಂಡಿರುವಾಗ, ಯಾವ ಡಿಮ್ಯಾಂಡಿನ ಮೇಲೆ ಹಾಕಿರುವುದನ್ನು ತೆಗೆದು ಷೆಡ್ಯೂಲ್ಡ್ ಕ್ಯಾಸ್ಟ್ಸನವರಿಗೆ ಕೊಡುವುದಕ್ಕಾಗಿಯಾಗಲಿ, ರೂರಲ್ ಡೆವಲಪ್‌ಮೆಂಟ್ ಬಾಬಿಗೆ ಕೊಡುವುದಕ್ಕಾಗಲಿ ಸಾಧ್ಯವಾಗುತ್ತದೆಂದು ಯಾವ ಸದಸ್ಯರೂ suggest ಮಾಡಲಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹೇಳಿದ್ದೇವೆ. ಪೋಲೀಸ್ ಖಾತೆಯ ಮೇಲೆ ಹೆಚ್ಚಿಗೆ ಹಣ ಹಾಕಿದ್ದೀರಿ; ಅದನ್ನು ಕಡಮೆಮಾಡಿ ಬೇರೆ ಕಡೆಗೆ ಹಾಕಬಹುದೆಂದು ಹೇಳಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಬಾಕಿಗಳ ವಸೂಲಿ ಆಗಿಲ್ಲವೆಂದು ತಿಳಿಸಿದ್ದೇವೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅಂದೂ, ಪ್ರತಿಯೊಂದು ಡಿಮ್ಯಾಂಡಿನ ಮೇಲೆಯೂ ಒತ್ತಾಯ ಮಾಡುತ್ತಾ ಹೆಚ್ಚಿಗೆ ಕೊಡಬೇಕೆಂದು ಹೇಳಿದ್ದಾರೆ. ಬಡ್ಜೆಟ್ಟನ್ನು ತಾವೆಲ್ಲಾ ಮುಂದಿಟ್ಟುಕೊಂಡಿದ್ದೀರಿ. ಇರತಕ್ಕದ್ದರಲ್ಲಿ ಪ್ರತಿಯೊಂದು ಬಾಬಿಗೂ ಎಷ್ಟೆಷ್ಟು ಕೊಡಬಹುದೆಂಬುದನ್ನು ನೋಡಿಕೊಂಡು ಹಂಚಿಕೆ ಮಾಡಿದೆ. ಆದ್ದರಿಂದ ಇವೊತ್ತಿನ ದಿವಸ ಇರತಕ್ಕ ಬಡ್ಜೆಟ್ಟಿನ ಸ್ಥಿತಿಯಲ್ಲಿ ಇನ್ನೂ ಹೆಚ್ಚಿಗೆ ಒದಗಿಸುವುದಕ್ಕೆ ಸಾಧ್ಯವೆ, ಇಲ್ಲವೇ ಎಂಬುದನ್ನು ನೀವೇ ಯೋಚನೆ ಮಾಡಬಹುದು. ಇರುವಷ್ಟನ್ನೂ ಒದಗಿಸಿದ್ದೇವೆ. ಆದ್ದರಿಂದ ಏನಿದ್ದರೂ ಆಡಳಿತದಲ್ಲಿ ನ್ಯೂನತೆಗಳಿದ್ದರೆ ಅವುಗಳನ್ನು ಸರಿಪಡಿಸುವ ಜವಾಬಾರಿ ಹೊತ್ತುಕೊಳ್ಳುತ್ತೇವೆ. ತಮ್ಮ ಗಮನಕ್ಕೆ ಬಂದ್ದ ನ್ಯೂನತೆಗಳನ್ನು ನಮ್ಮ ಗಮನಕ್ಕೆ ತರುವುದೂ ತಮ್ಮ ಕರ್ತವ್ಯ. ಅವುಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮಾನ್ ವೆಂಕಟೇಗೌಡರು ಮಾತನಾಡುತ್ತಾ ರೂರಲ್ ಡೆವಲಪ್‌ಮೆಂಟ್ ಬಾಬಿಗೆ ಕೊಡುವ ಹಣ ಬಹಳ ಕಡಮೆ ಇದೆ, ಈಗಿರತಕ್ಕ ಆಡಳಿತಕ್ರಮ ಸರಿಪಡಿಸಬೇಕು, ಅಕ್ವಿಸಿಷನ್ ರಿಕಾರ್ಡ್ಸ್ ವಿಷಯದಲ್ಲಿ ಬಹಳ ತಡವಾಗುತ್ತಿದೆಯೆಂದೂ ಅದರಿಂದ ಜನಗಳಿಗೆ ಅನೇಕ ತೊಂದರೆಗಳು ಸಂಭವಿಸುತ್ತಿವೆಯೆಂದೂ ಹೇಳಿದ್ದಾರೆ. ಇದರಲ್ಲಿ ಕೆಲವು ಲೋಕಲ್ ಡಿಸ್‌ಪ್ಯೂಟ್ಸ್ ಬಂದು ಅಕ್ವಿಸಿಷನ್ ಕೇಸುಗಳಲ್ಲಿ ಬಹಳ ಅನ್ಯಾಯವಾಗಿದೆ ಎಂದು ತಿಳಿಸಿದ್ದಾರೆ. ಹಿಂದೆ ಈ ಬಾಬಿಗೆ ಹೆಚ್ಚಿಗೆ ಹಣವನ್ನೊದಗಿಸಲು ಸರ್ವಪ್ರಯತ್ನಗಳನ್ನು ಮಾಡಿದರೂ ಸಾಧ್ಯವಾಗಲಿಲ್ಲ. ಈಗ ಅದನ್ನು ಸಮರ್ಪಕವಾಗಿ ಏರ್ಪಾಡು ಮಾಡಬೇಕಾಗಿದೆ.

ಇನ್ನು ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಬಹಳ ಕಡಮೆ ಹಣವನ್ನೊದಗಿಸಿದ್ದಾರೆಂದು ಕೆಲವರು ಹೇಳಿದರು. ಈಗ ಇರತಕ್ಕ ಮೊಬಲಗನ್ನು ಸರಿಯಾಗಿ ವಿನಿಯೋಗ ಮಾಡಿದರೆ ಸ್ವಲ್ಪ ಮಟ್ಟಿಗೆ ಸಮರ್ಪಕವಾಗಿ ಕೆಲಸ ನಡೆಯುತ್ತದೆ. ಹಣವನ್ನು ಹೆಚ್ಚಿಗೆ ಮಾಡುವುದಕ್ಕೆ ಈಗ ನಾನಾ ವಿಧವಾದ ತೊಂದರೆಗಳಿವೆ. ಈ ಅಸ್ಪೃಶ್ಯತಾ ನಿವಾರಣೆಗಾಗಿ ಕೇಂದ್ರ ಸರ್ಕಾರದವರು ಶೇಕಡ 50 ರಷ್ಟು ಮೊಬಲಗನ್ನು ನಮ್ಮ ಪ್ರಾಂತ ಸರ್ಕಾರಕ್ಕೆ ಸಹಾಯಮಾಡುವವರಾಗಿದ್ದಾರೆ. ತಾವು ಹೇಳಿದ ಸಲಹೆಗಳನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದೇವೆ. ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆಸುತ್ತಿದ್ದೇವೆ.

ಇನ್ನು ಅಕ್ವಿಸಿಷನ್ ಕೇಸಸ್ ವಿಷಯ : ನನಗೆ ಇದರಲ್ಲಿ ಕೆಲಸಕಾರ್ಯಗಳು ವಿಳಂಬವಾಗುತ್ತಿರುವ ವಿಚಾರವೇನೋ ಚೆನ್ನಾಗಿ ಗೊತ್ತಿದೆ. ಆದರೆ ಸರ್ಕಾರದಲ್ಲಿ ತಡವಾಗುತ್ತದೆ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಕೆಲವು ಕೇಸುಗಳಲ್ಲಿ ಫೈನಲ್ಲಾಗಿ ನೋಟಿಫಿಕೇಷನ್ ಆಗಿದ್ದರೂ ಸಹ ಜನಗಳು ಸುಮ್ಮನಿರದೆ, ಪುನಃ ಅಪೀಲುಹಾಕಿ, ಸ್ಟೇ ಆರ್ಡರ್ ಮಾಡಿಸಿ, ಪುನಃ ಕೇಸನ್ನು ವಿತ್‌ಡ್ರಾ ಮಾಡಬೇಕೆಂದು ಪಂಚಾಯಿತಿ ರಿಸಲೂಷನ್‌ಮಾಡಿ ಕಳಿಸುತ್ತಾರೆ. ಆಗ ಅಪೀಲು ಕೇಸು ಬರುತ್ತದೆ. ಸ್ಟೇ ಆರ್ಡರ್ ಕೊಡುತ್ತಾರೆ; ವಿತ್‌ಡ್ರಾ ಮಾಡಬೇಕೆಂದು ಪ್ರತಿಯೊಂದು ಕೇಸಿನಲ್ಲೂ ಇಂತಹ ತಕರಾರುಗಳು ಬರುತ್ತಲೇ ಇರುತ್ತವೆ. ಪ್ರತಿಯೊಂದು ಊರಿನಲ್ಲೂ ಅಕ್ವಿಸಿಷನ್ ಕೇಸುಗಳು ಈ ಸ್ಥಿತಿಯಲ್ಲಿದ್ದರೆ ಹೇಗೆ ಅವುಗಳನ್ನು ಇತ್ಯರ್ಥ ಮಾಡುವುದು ? ನಿಜವಾಗಿ ತಕರಾರು ಇದ್ದರೆ, ಅದನ್ನೆಲ್ಲಾ ಫೈನಲ್ಲಾಗಿ ತೀರ್ಮಾನ ಮಾಡಬೇಕಾಗಿದ್ದರೆ ಸ್ವಲ್ಪ ವಿಳಂಬವಾಗುತ್ತದೆ. ಈಗಿರುವ ಅಕ್ವಿಸಿಷನ್ ಸಿಸ್ಟಂ ಸಮರ್ಪಕವಾಗಿಯೇ ಇಲ್ಲವೆಂದು ಹೇಳಿದರು ಅದಕ್ಕಾಗಿಯೇ ಸರ್ಕಾರದವರು ಕೆಲವು ಹಳ್ಳಿಗಳಲ್ಲಿ ಭೂಮಿಯನ್ನು ಅಕ್ವೈರು ಮಾಡಿಕೊಂಡು ಅವನ್ನು ರಿಸರ್ವ್ ಮಾಡಬೇಕೆಂದೇ ಇಟ್ಟಿದ್ದಾರೆ. ಇನ್ನು ಸ್ವಲ್ಪ ದಿವಸಗಳಲ್ಲಿಯೇ ಈಗ ರಿಸರ್ವ್ ಮಾಡಿರುವ ಭೂಮಿಯನ್ನು ಹಂಚಿಕೆ ಮಾಡುವ ಪ್ರಯತ್ನವನು ಮಾಡುವ ಭರವಸೆ ನಮಗಿದೆ. ಸಾಧ್ಯವಾದರೆ ರೈತರಿಗೆ ಅಡ್ವಾನ್ಸು ಕೊಟ್ಟು ಪಂಚಾಯಿತಿ ರೆಸಲ್ಯೂಷನ್ ಪ್ರಕಾರ ರಿಸರ್ವ್‌ನಲ್ಲಿರುವ ಭೂಮಿಗಳನ್ನು ಬಡಬಗ್ಗರಿಗೆ ಕಡಮೆ ಕಿಮ್ಮತ್ತಿನ ಮೇಲೆ ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದಿದ್ದೇವೆ.

ಶ್ರೀ ಕೆ. ಕೆಂಚಪ್ಪ.—ಈ ಯೋಜನೆಯನ್ನು ಸರ್ಕಾರದ ಗಮನದಲ್ಲಿಟ್ಟುಕೊಂಡು ಹತ್ತು ವರ್ಷಗಳಾದುವು.

ಶ್ರೀ ಆರ್. ಚೆನ್ನಿಗರಾಮಯ್ಯ.—ವರ್ಷಗಳೇನೂ ಆಗಿಲ್ಲ. ಕೆಲವು ತಿಂಗಳುಗಳು ಆದುವು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಕ್ವಿಸಿಷನ್ ರಿಕಾರ್ಡ್‌ಗಳು ಬಹಳ ನಿಧಾನವಾಗಿ ತೀರ್ಮಾನವಾಗುತ್ತಿವೆ. ಈಗ ನಾಲ್ಕನೆಯ ಮಿನಿಸ್ಟ್ರು ಬಂತು. ಎಷ್ಟೋ ರಿಕಾರ್ಡುಗಳು ಫೈನಲ್ಲಾಗಿ ಸೆಕ್ರೆಟೇರಿಯಟ್ ಲೆವೆಲ್ಲಿನಲ್ಲಿ ಇಟ್ಟುಕೊಂಡಿದ್ದೀರಿ. ಚೆನ್ನಪಟ್ಟಣ ಮತ್ತು ಬೈರಾಪಟ್ಟಣದ ತಾಲ್ಲೂಕಿನ ಅರ್ಜಿಗಳು ಇನ್ನೂ ಎಷ್ಟೋ ಹಾಗೆಯೇ ತೀರ್ಮಾನವಾಗದೆ ಇಟ್ಟಿದ್ದೀರಿ.

ಅಧ್ಯಕ್ಷರು.—ತಾವು ಬಜಾಯಿಸಿ ಬಿಟ್ಟರಿ. ಹಾಗೆ ಮಾಡಿದರೆ ಬಹಳ ಕಷ್ಟವಾಗುತ್ತದೆ ಮಂತ್ರಿಗಳು ಈಲ್ಡ್ ಆಗುವ ಹಾಗಿದ್ದರೆ ತಾವು ಮಾತನಾಡಬಹುದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾನು ತಪ್ಪು ಹೇಳಲಿಲ್ಲ. ಆದರೂ 'ಬಜಾಯಿಸಿದೆ' ಎಂದು ಹೇಳಿದರಲ್ಲಾ.

ಅಧ್ಯಕ್ಷರು.—ನೀವು ಹೇಳಿದ್ದು ನಾನು ತಪ್ಪು ಎಂದು ಹೇಳಲಿಲ್ಲ, ಸರ್ವಸತ್ಯ.

ಶ್ರೀ ಆರ್. ಚೆನ್ನಿಗರಾಮಯ್ಯ.—ನಾನು ಈಲ್ಡ್ ಆಗಲಿಲ್ಲ. ತಾವು ನಿಂತಾಗ ನಾನು ಕುಳಿತುಕೊಂಡಿದ್ದೆ.

ಅಧ್ಯಕ್ಷರು.—ತಾವು ಹೇಳಿದ್ದು ಅಸತ್ಯವೆಂದು ನಾನು ಹೇಳಲಿಲ್ಲ. ಇಬ್ಬರು ಮೂವರು ಒಂದೇ ಸಾರಿ ನಿಂತುಕೊಂಡು ಮಾತನಾಡಿದರೆ ಎಷ್ಟು ಗಲಾಟೆಯಾಗುತ್ತದೆ ? ''ನೀವು ಈಲ್ಡ್ ಆಗುತ್ತಿದ್ದೀರಾ'' ಎಂದು ಕೇಳಿ ಈಲ್ಡ್ ಆದರೆ ಅನಂತರ ಮಾತನಾಡಬೇಕು. ನನ್ನನ್ನು ಕುರಿತು ಅನೇಕರು ನೀವು ಉತ್ತರ ಕರ್ಣಾಟಕ ಭಾಷೆಯೊಳಗೆ ಮಾತನಾಡುತ್ತೀರಿ, ಮೈಸೂರು ಕನ್ನಡ ಭಾಷೆ ಮಾತನಾಡಿದರೆ ಚೆನ್ನಾಗಿ ಗೊತ್ತಾಗುತ್ತದೆ. ಎಂದು ಹೇಳಿದರು. ನಾನಾ ಭಾಗ

(ಅಧ್ಯಕ್ಷರು)

ಗಳಲ್ಲೂ ಮಾತನಾಡುವುದು ಕನ್ನಡ. ನಾವು ಈಗ ಕರ್ಣಾಟಕದಲ್ಲಿದ್ದೇವೆ. ಸ್ವಾಭಾವಿಕವಾಗಿ ಕನ್ನಡ ಬಂದೇ ಬರುತ್ತದೆ. ಮೊದಲು ಮೊದಲು ಮೈಸೂರು ಕನ್ನಡ ಮಾತನಾಡಲಿಕ್ಕೆ ಸ್ವಲ್ಪ ಕಷ್ಟವಾಗಬಹುದು. ಆಮೇಲೆ ಚೆನ್ನಾಗಿ ಬಂದುಬಿಡುತ್ತದೆ. ಮೊನ್ನೆ ನಾನು ಕೆಲವು ಮಾತುಗಳನ್ನು ಆಡಿದಾಗ ಏನಪ್ಪಾ, ಇಂತಹ ಮಾತುಗಳನ್ನು ಆಡುತ್ತಾರೆ ಎಂದರು.

ಉತ್ತರ ಕರ್ಣಾಟಕದವರು ಮಾತನಾಡುವುದು ಯಾವುದುಸಾಮ್ಯ, ಯಾವುದು ಅಸಾಮ್ಯ ಎಂಬುದನ್ನು ಇನ್ನೂ ತಿಳಿದುಕೊಳ್ಳಬೇಕಾಗಿದೆ. Indecent ಆಗಿ ಮಾತನಾಡಿ ಯಾರ ವಿಚಾರದಲ್ಲಿಯೂ, ಅಫೆನ್ಸಿವ್ ಭಾಷೆಯನ್ನು ಉಪಯೋಗಿಸಬೇಕು ಎಂದು ಇಲ್ಲ. ಯಾರಿಗೂ ತೊಂದರೆಯಾಗದಂತೆ ಕಾರ್ಯಕಲಾಪಗಳು ನಡೆಸೋಣ.

ಶ್ರೀ ಆರ್. ಚೆನ್ನಿಗರಾಮಯ್ಯ.—ಬಜಾಯಿಸಿದರು ಎಂದರೆ ತಪ್ಪೇನು ಇಲ್ಲ. ಶ್ರೀ ಪುಟ್ಟರಾಮಯ್ಯ ನವರು ಸೆಕ್ರೆಟೆರಿಯೇಟ್ ಲೆವೆಲ್‌ನಲ್ಲಿ ಡೀಲೆ ಆಗುತ್ತದೆ. ಇನ್ನೆಲ್ಲಿಯೂ ಡೀಲೆ ಆಗುವುದಿಲ್ಲ. ಎಂದು ಹೇಳಿದರು. ಅವರು ಏನೋ ಎಂದು ಇಂಪ್ರೆಸ್ಸಿನಿಂದ ಹೇಳಿದ ಹಾಗೆ ಕಾಣುತ್ತದೆ.

Sri B. K. PUTTARAMAIYA.—I am a representitive of my constituency. I have got every right to speak about my constituency.

Sri R. CHENNIGARAMIAH.—There is no decency in it.

Sri B. K. PUTTARAMIAH.—Hon'ble Minister cannot pass such remarks.

Sri R. CHENNIGARAMIAH.—That is my opinion.

Sri B. K. PUTTARAMIAH.—I rise to a point of order. The Hon'ble Minister has said that I have no decency.

Mr. SPEAKER.—I will settle the whole thing in my chambers.

Sri B. K. PUTTARAMIAH.—The word used by the Hon'ble Minister is an insult to me.

ಅಧ್ಯಕ್ಷರು.—ತಾವೂ ಬೇಕಾದಷ್ಟು ಹೇಳಿದ್ದೀರಿ.

Sri B. K. PUTTARAMIYA.—He says that I have special interest ; there is nothing behind it.

ಅಧ್ಯಕ್ಷರು.—ಅವರಿಗೆ ತಾಲ್ಲೂಕು ಅಧಿಕಾರಿಗಳು ಗೊತ್ತಿರಬಹುದು. ಅದಕ್ಕೋಸ್ಕರ ಅವರು ಹೆಚ್ಚಿಗೆ ಇಂಟರೆಸ್ಟ್ ತೆಗೆದುಕೊಂಡಿರಬೇಕೆಂದು ಕಾಣುತ್ತದೆ.

Sri B. K. PUTTARAMAIYA.—I am insterested in Harijan Community. ಅದಕ್ಕೋಸ್ಕರವೇ ಹೇಳುತ್ತಾ ಇರುವುದು.

ಶ್ರೀ ಆರ್. ಚೆನ್ನಿಗರಾಮಯ್ಯ.—ಬಹುಶಃ ದೊಡ್ಡ ಮನುಷ್ಯರು ಕೈಹಾಕಿದ್ದರಿಂದ, ಜಾಗರೂಕತೆಯಿಂದ ರಿಕಾರ್ಡ್ ಬಿಲ್ಡಪ್ ಮಾಡುತ್ತಾ ಇರಬಹುದು. ಅದು ಸರಿಯಲ್ಲ, ಮತ್ತೆ ಪರಿಶೀಲನೆ ಮಾಡಬೇಕು ಎಂದು ಹೇಳಿದರೆ ಅವರು ಪರಿಶೀಲನೆ ಮಾಡಬೇಕಾಗುತ್ತದೆ. ಈ ಕಾರಣದಿಂದ ಸ್ವಲ್ಪ ಡಿಲೇ ಆಗಿದೆ. ಅನೇಕ ಸಂದರ್ಭಗಳಲ್ಲಿ ಲಾಯರುಗಳು ಅಪೀಲು ಕೇಸು ತರುತ್ತಾರೆ. ಅಕ್ವಿಸಿಷನ್‌ನಲ್ಲಿ ಅನ್ಯಾಯವಾಗದೆ ಪರಿಶೀಲನೆ ಮಾಡಬೇಕು ಸ್ಟೇ ಆರ್ಡರ್ ಕೊಡಬೇಕು ಎಂದು ಹೇಳುತ್ತಾರೆ. ಆಗ ಕಾನೂನು ಪ್ರಕಾರ ಮಾಡುವ ಕಾರ್ಯ ಮಾಡಬೇಕು, ಬೇಡ ಎಂದು ಹೇಳತಕ್ಕದ್ದು ಸರಿಯಲ್ಲ. ದಬಾವಣೆಮೇಲೆ ಆರ್ಡರ್ ಪಾಸುಮಾಡಿದ್ದಾರೆಂದು ಹೇಳುವುದು ಸೂಕ್ತವಲ್ಲ. ಡಿಲೇ ಆಗಿದೆ. ಏನುಮಾಡುವುದಕ್ಕೆ ಆಗುತ್ತದೆ? ಉದ್ದೇಶ ಪೂರ್ವಕವಾಗಿ ಸೆಕ್ರೆಟರಿಯೇಟ್ ನಲ್ಲಿ ತಡ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಶ್ರೀ ಶಂಕರೇಗೌಡ ಪಾಟೀಲ್‌ರವರು ಬಿಜಾಪುರ ಡಿಸ್ಟ್ರಿಕ್ಟಿನಲ್ಲಿ ಕುಡಿಯುವ ನೀರಿನ ಬಾವಿಯಿಲ್ಲದೆ ತೊಂದರೆಯಾಗಿದೆ ಎಂದು ಹೇಳಿದರು. ಅದಕ್ಕೆ ಸಾಕಾದಷ್ಟು ಹಣವನ್ನು ಒದಗಿಸಬೇಕು ಎಂದು ಗಮನಕೊಟ್ಟುಕೊಂಡಿದ್ದೇವೆ. ಅಲ್ಲಿ ಕುಡಿಯುವ ನೀರಿನ ಬಾವಿಯಿಲ್ಲದೆ ತೊಂದರೆಯಾಗಿರುವುದು ನಿಜ. ಆದ್ದರಿಂದ ಆದಷ್ಟು ಜಾಗ್ರತೆ ಕುಡಿಯುವ ನೀರಿನ ಬಾವಿಯ ಸೌಕರ್ಯವನ್ನು ಮಾಡುತ್ತೇವೆ. ನಾನು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಪುಟ್ಟಣ್ಣನವರು ಹೇಳಿದರು, ಹರಿಜನರಿಗೆ ಇಂಟರ್‌ಕ್ಯಾಸ್ಟ್ ಡೈನಿಂಗ್ ವ್ಯವಸ್ಥೆ ಮಾಡಿ ಅದರಿಂದ ಹಣ ದುರ್ವ್ಯಯವಾಗಿದೆ ಎಂದು ಅದು ವಾಸ್ತವವಿಚಾರ. ಅನೇಕ ಕಡೆಗಳಲ್ಲಿ ಇಂಟರ್ ಕ್ಯಾಸ್ಟ್ ಡೈನಿಂಗ್ ಸ್ಕೀಮಿಗಾಗಿ ಹಣವನ್ನು ಚೆಚ್ಚ ಮಾಡಿದ್ದಾರೆ; ನಾನೇ ನೋಡಿದ್ದೇನೆ. ಸದಾ ಕಾಲ ಇಂಟರ್‌ಕ್ಯಾಸ್ಟ್ ಡಿನ್ನರ್ ಮಾಡಿದರೆ ಯಾರು ಊಟ ಮಾಡುತ್ತಾರೆ? ಹೊಸದಾಗಿ ಇನ್ನೊಬ್ಬರನ್ನು ಫೋರ್ಸ್ ಮಾಡಿ ಊಟಮಾಡಿಸುವುದಕ್ಕೆ ಆಗುವುದಿಲ್ಲ. ಹೊಟ್ಟೆ ನೋವೋ ಅಥವಾ ಬೇರೆ ಯಾವುದೋ ಬಾಯಿಲೆ ಹೇಳಿ ಜಾರಿ ಬಿಡುತ್ತಾರೆ. ಅದಕ್ಕೋಸ್ಕರ ಇಂಟರ್ ಕ್ಯಾಸ್ಟ್ ಡೈನಿಂಗ್ ತಪ್ಪಿಸಲೇಬೇಕು ಎಂದು ಆಲೋಚನೆ ಮಾಡಿದ್ದೇವೆ. ಹಣ ಖರ್ಚಾಗಿ ಊಟವೇನೋ ಮಾಡುತಾರೆ, ಆದರೆ ಅದರಿಂದ ಏನೂ ಪ್ರಯೋಜನವಾಗುತ್ತಿಲ್ಲವೆಂದು ಮೊನ್ನೆತಾನೆ ಸೆಂಟ್ರಲ್ ಪಾಲಿಸಿ ಕಮಿಟಿಯ ಎಲ್ಲಾ ಸದಸ್ಯರೂ ಅಭಿಪ್ರಾಯಪಟ್ಟರು. ಊಟ ಮಾಡುವವರು ಕಾಂಗ್ರೆಸ್ಸಿನವರು ; ಅವರು ಸದಾ ಕಾಲದಲ್ಲೂ ಊಟಮಾಡಲು ಸಿದ್ಧವಾಗಿದ್ದಾರೆ. ಬಾಕಿಯವರು ಫೋರ್ಸ್ ಮಾಡಿದರೆ ಬರುವುದಿಲ್ಲ. ಅದಕ್ಕೋಸ್ಕರ ಏತಕ್ಕೆ ದುಡ್ಡು ಖರ್ಚುಮಾಡಬೇಕು ? ಆ ಹಣವನ್ನು ಬೇರೆ ಸತ್ಕಾರ್ಯಕ್ಕೆ ಉಪಯೋಗಿಸಬೇಕು. ಆದ್ದರಿಂದ ಆದಷ್ಟು ಮಟ್ಟಿಗೆ ಈ ರೀತಿ ದುರುಪಯೋಗವಾಗುವ ಹಣವನ್ನು ತಪ್ಪಿಸಬೇಕು.

ಶ್ರೀ ನಾರಾಯಣಗೌಡರು ಅಗ್ರಿಕಲ್ಚರಲ್ ಕಾಲೋನಿಗೆ ಉತ್ತೇಜನ ಸಿಕ್ಕುತ್ತಿಲ್ಲ, ಆದಷ್ಟು ಬೇಗ ಹಣ ಕೊಡುತ್ತಿಲ್ಲ ಎಂದು ಹೇಳಿದ್ದಾರೆ. ಹಾಗೆ ಇದುವರೆಗೆ ವಿಳಂಬವಾಗಿದೆಯೆಂಬ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಅವರು ಕಾಂಕ್ರೀಟ್ ಎಕ್ಸಾಂಪಲ್ ತೋರಿಸಿದರೆ ತಕ್ಷಣ ಆದಷ್ಟು ಬೇಗ ಸೂಕ್ತ ಕ್ರಮ ಕೈಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ರಾಮಕೃಷ್ಣನ್ ಅವರು ಕೆಲವು ವಿಷಯ ಹೇಳಿದರು ಅವರು ಹರಿಜನರ ಮನೆಕಟ್ಟುವ ವಿಚಾರದಲ್ಲಿ ಈಗಿರುವ ಯೋಜನೆಗಳಿಂದೇನೂ ಪ್ರಯೋಜನವಾಗುತ್ತಿಲ್ಲ, ಪ್ರಯೋಜನಕ್ಕೆ ಬದಲಾಗಿ ದುರುಪಯೋಗವಾಗುತ್ತಿದೆ ಎಂದು ಹೇಳಿದರು. ಅಪ್ರಯೋಜನವೆಂದು ಹೇಳಿದ್ದನ್ನು ಒಪ್ಪುವುದಕ್ಕಾಗುವುದಿಲ್ಲ. ದುರುಪಯೋಗ ಕೆಲವು ಸಂದರ್ಭಗಳಲ್ಲಿ ಆಗುತ್ತದೆ. ಅದು ನಾನಾ ಕಾರಣಗಳಿಂದ ಕೆಲವು ವ್ಯಕ್ತಿಗಳ ಪ್ರಭಾವದಿಂದ ಆಗಬಹುದು. ಅದು ಎಲ್ಲರಿಗೂ ಗೊತ್ತಿದೆ; ಅದು ಬಹಳ ಮಟ್ಟಿಗೆ ಒಪ್ಪುವ ಮಾತು. ಹಣ ಸಾಲದಿರಬಹುದು.

ಲಕ್ಷಾಂತರ ಪ್ರಜೆಯಿರುವ ದೊಡ್ಡ ದೇಶದಲ್ಲಿ ಸಣ್ಣ ಗುಡಿಸಲಿನಲ್ಲಿರುವ ಜನರಿಗೆಲ್ಲಾ ಕೊಡಲು 19 ಲಕ್ಷ ರೂಪಾಯಿಗಳು ಸಾಕಾಗುವುದಿಲ್ಲ; ಆದ್ದರಿಂದ ಸಾಕಷ್ಟು ಪ್ರಯೋಜನವಾಗುವುದಿಲ್ಲ, ಹೆಚ್ಚು ಹಣ ಕೊಡಬೇಕು ಎಂದು ಹೇಳಬಹುದು. ಅದನ್ನು ಒಪ್ಪೋಣ. ಆದರೆ ಪ್ರಯೋಜನವಿಲ್ಲ ಎಂದು ಹೇಳುವುದನ್ನು ಖಂಡಿತ ಒಪ್ಪುವುದಕ್ಕಾಗುವುದಿಲ್ಲ. ಬಹಳ ಸಹಾಯಕಾರಿಯಾದ ಯೋಜನೆಯಿದೆ, ಅದಕ್ಕೆ ಸರ್ವರೂ ಉತ್ತೇಜನ ಕೊಡಬೇಕು. ದುರುಪಯೋಗ ಎಲ್ಲಾದರೂ ಆಗಿದ್ದರೆ ಅದನ್ನು ಸದಸ್ಯರು ಗಮನಕ್ಕೆ ತಂದರೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗ ಕೆಲವು ಉದಾಹರಣೆಗಳನ್ನು ಹೇಳುವುದಾದರೆ ಒಂದೆರಡು ಕಡೆಗಳಲ್ಲಿ ದುರುಪಯೋಗವಾಗಿದೆ. ಕೆಲವು ಕಡೆ ಹಣ ಮನೆ ಕಟ್ಟಡಕ್ಕಾಗಿ ಕೊಟ್ಟಿದ್ದು ಸರಿಯಾಗಿ ವಿನಿಯೋಗವಾಗಿಲ್ಲ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಸಮಜಾಯಿಷಿ ಕೇಳಿ, ಬಂದೊಬಸ್ತು ಮಾಡಿ ಹಣ ವಸೂಲುಮಾಡಿದ್ದೇವೆ. ಆ ರೀತಿ ಮಾಡಿ ಹಣ ಸದುಪಯೋಗವಾಗುವಂತೆ ಏರ್ಪಡಿಸಲು ಪ್ರಯತ್ನಮಾಡುತ್ತೇವೆ.

ಇನ್ನೊಂದು ವಿಷಯ ಹೇಳಿದರು, ಪಾಲಿಸಿ ಕಮಿಟಿಯು ವಿಚಾರದಲ್ಲಿ ಬಹಳ ಒತ್ತಾಯವಾಗಿ ಹೇಳಿದರು. ಅದೇಕೆ ಹಾಗೆ ಹೇಳಿದರೋ ತಿಳಿಯದು. ಆ ಸಮಿತಿ ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ. ಇಲ್ಲಿರುವ ಸದಸ್ಯರನೇಕರು ಒಳ್ಳೆಯ ವಿದ್ಯಾವಂತರು, ಬಿ. ಎ., ಬಿ. ಎಲ್., ಎಂ. ಎ., ಬಿ. ಎಲ್. ಪಾಸುಮಾಡಿದವರಿದ್ದಾರೆ. ಶ್ರೀಯುತರುಗಳಾದ ಬಸವಲಿಂಗಪ್ಪ, ಮಲ್ಲಿಕಾರ್ಜುನಸ್ವಾಮಿ, ರಾಚಯ್ಯ, ಆರ್ಯಮಿತ್ರ ಶಾಮಸುಂದರ್, ಆರುಮುಗಂ ಇವರೆಲ್ಲಾ ಫಸ್ಟ್ ಕ್ಲಾಸ್ ಫೈಟರ್ಸ್ ಇಂಥವರೆಲ್ಲಾ ಇದ್ದಾರೆ.

Sri C. M. ARUMUGHAM—I am not there in the Policy Committee.

ಶ್ರೀ ಆರ್. ಚೆನ್ನಿಗರಾಮಯ್ಯ.—ಬಹುಶಃ ಕೆ. ಜಿ. ಎಫ್. ನಲ್ಲಿರುವ ಶ್ರೀ ಮುರುಗಪ್ಪನವರಿರಬಹುದು. ಬಹಳವಾಗಿ ಸೇವೆ ಮಾಡುತ್ತಿದ್ದಾರೆ. ಅದರಲ್ಲಿ ಲೋಪವಿದೆಯೆಂದು ಯಾರೂ ಹೇಳಿಲ್ಲ. ಕೆಲವು ವ್ಯಕ್ತಿಗಳು ಅಲ್ಲಿದ್ದ ಮಾತ್ರಕ್ಕೆ ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಶ್ರೀ ಹನುಮಂತಯ್ಯನವರು ಪಾಲಿಸಿ ಕಮಿಟಿ ಮಾಡಿ ಕೆಲವರು ಎಂ. ಎಲ್. ಎ. ಗಳನ್ನು ಯೋಗ್ಯರಾದವರನ್ನು ಸದಸ್ಯರನ್ನಾಗಿ ತೆಗೆದುಕೊಂಡಿದ್ದಾರೆ. ಹಾಗಿರುವಾಗ ನಮ್ಮನ್ನು ತೆಗೆದುಕೊಂಡಿಲ್ಲ, ನಮಗೆ ಅವಮಾನ ಮಾಡಿದರು ಎಂದು ಏನೇನೊ ಹೇಳಬಾರದು. ಎಲ್ಲರನ್ನೂ ಸಮಿತಿಗೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಕೆಲವರು ಅನುಭವಸ್ಥರನ್ನು ಹಾಕಿದ್ದೇವೆ. ಕೆಲಸ ಚೆನ್ನಾಗಿ ನಡೆಯುತ್ತಿದೆ, ಲೋಪವಿಲ್ಲ, ನ್ಯೂನತೆಯಿಲ್ಲ. ಹಾಗಿರುವಾಗ ಸರಿಯಾಗಿಲ್ಲ, ಸ್ವಾರ್ಥಕ್ಕಾಗಿ ಉಪಯೋಗಿಸಿದ್ದಾರೆ ಎಂದು ಹೇಳಿದರು; ಅದು ಸರಿಯಲ್ಲ.

Sri G. DUGGAPPA (Chitaldrug).—There was no criticism or anything personal of the Policy Committee. This I want to bring to the notice of the Hon'ble Minister.

ಶ್ರೀ ಆರ್. ಚೆನ್ನಿಗರಾಮಯ್ಯ.—ಸ್ವಾರ್ಥಕ್ಕಾಗಿ ಸಮಿತಿ ಮಾಡಿದ್ದಾರೆಂದು ಹೇಳಿದರೆ ಅದರ ಅರ್ಥವೇನು?

ಶ್ರೀ ವೈ. ರಾಮಕೃಷ್ಣ (ಬೆಂಗಳೂರು-ಉತ್ತರ).—ಕೇಂದ್ರ ಸರ್ಕಾರದವರು ಕಳುಹಿಸಿರುವ directionsಗಳಿಗೆ ವಿರೋಧವಾಗಿದ್ದರೂ ಕೂಡ ಇಂತಹ ಪಾಲಿಸಿ ಕಮಿಟಿಗಳನ್ನೂ ಏಕೆ ಮಾಡಬೇಕಾಗಿತ್ತು?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದು ನಿಜಕ್ಕೂ ಐವತ್ತು ಮೈಲಿ ದೂರ ಹಿಂದೆ ಎಂದು ಹೇಳಬೇಕಾಗಿದೆ. ಆ ರೀತಿ ಏನೂ direction ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಬ್ಯಾಕ್‌ವರ್ಡ್ ಕಮಿಷನ್ನಿನ ರಿಪೋರ್ಟನ್ನು ತಾವು ಓದಿದ್ದೀರಾ, ಸ್ವಾಮಿ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹತ್ತೊಂಬತ್ತು ಲಕ್ಷ ರೂಪಾಯಿಗಳನ್ನು ಈಗ ಮನೆಗಳನ್ನು ಕಟ್ಟುವುದಕ್ಕಾಗಿ ಕೊಟ್ಟಿಲ್ಲ. ಹಿಂದಿನ ಹಳೆಯ ಮೈಸೂರಿನ ಜನಸಂಖ್ಯೆಯ ಪ್ರಕಾರ ಕೊಟ್ಟಿತ್ತು. ಆಗ ಹಳೆಯ ಮೈಸೂರಿನ ಹರಿಜನರ ಸಂಖ್ಯೆ 27 ಲಕ್ಷವಿತ್ತು. ಅವರ ಸಂಖ್ಯೆ ಈಗ ಜಾಸ್ತಿಯಾಗಿರುವಾಗ ಇಷ್ಟು ಹಣ ಕಡಮೆ ಎನ್ನುವುದನ್ನು ನ್ಯಾಯವಾಗಿ ಒಪ್ಪಲೇಬೇಕು. ಈಗ ಇನ್ನೂ ಜಾಸ್ತಿಮಾಡುವುದಕೆ ಸಾಧ್ಯವಾಗಿಲ್ಲ. ಏಕೆಂದರೆ Planning Commission ನವರು pre-integration periodಗೆ ಸೇರಿದ್ದ Five-year Planನಲ್ಲಿ ಇದನ್ನು ಒಪ್ಪಿ ಕಳುಹಿಸಿದ್ದಾರೆ. ಈಗ ಬದಲಾಯಿಸಲು Planning Commission ನವರ permission ತೆಗೆದುಕೊಳ್ಳಬೇಕು. ಈಗ ನಾವು ಅವರಿಗೆ ಜನಸಂಖ್ಯೆ ಜಾಸ್ತಿಯಾಗಿದೆ; ಅದಕ್ಕೆ ತಕ್ಕಂತೆ ಈ ಹಣವನ್ನು ಇನ್ನೂ ಜಾಸ್ತಿ ಮಾಡಬೇಕಾದ ಆವಶ್ಯಕತೆಯಿದೆ ಎನ್ನತಕ್ಕ ವಿಷಯವನ್ನು ತಿಳಿಸಿದ್ದೇವೆ. ಅವರಿಂದ ಅಪ್ಪಣೆದೊರಕುವ ನಿರೀಕ್ಷೆಯಿದೆ, ಅನಂತರ ಅದರಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಈ ವಿಷಯಗಳನ್ನೆಲ್ಲ ಪ್ರಸ್ತಾಪ ಮಾಡುತ್ತ ಮಾತನಾಡಿದ ಕೆಲವು ಸದಸ್ಯರು ಇದೆಂತಹ ಪಾಲಿಸಿ ಕಮಿಟಿ, ಇದರಿಂದ ಏನೂ ಪ್ರಯೋಜನ ಸಿಕ್ಕುವುದಿಲ್ಲ ಎಂದು ಅದನ್ನೇ ದೊಡ್ಡದನ್ನಾಗಿ ಮಾಡಿ ಇಲ್ಲಿ ಇಷ್ಟೆಲ್ಲ ಹೇಳಿರುತ್ತಾರೆ.

ಇನ್ನು Depressed Class Commissioner ವಿಚಾರವಾಗಿ ಹೇಳುತ್ತ, ಹಿಂದೆ ಇವರಲ್ಲಿ ಬರತಕ್ಕ ಕೇಸುಗಳು ಸರಿಯಾಗಿ ಪರಿಹಾರವಾಗುತ್ತಿದ್ದುವು; ಈಗ ಇವರನ್ನು ತೆಗೆದಿರುವುದರಿಂದ ತೊಂದರೆಯಾಗಿದೆ ಎಂದು ಕೆಲವು ಸದಸ್ಯರು ಹೇಳಿದರು. ಈ ಹಿಂದೆ ಪ್ರತ್ಯೇಕವಾಗಿ Depressed Class Commissioner ಆಗಿ ಶ್ರೀ ಬಿ. ರಾಚಯ್ಯನವರಿದ್ದರು. ಅದಕ್ಕೆ ಮೊದಲು Registrar of Co-operative Societies ಆದ ಶ್ರೀ ಕೆ. ಹೆಚ್. ರಾಮಯ್ಯನವರು ಹರಿಜನರ ಅಭಿವೃದ್ಧಿಗಾಗಿ ಬಹಳವಾಗಿ ದುಡಿಯುತ್ತಿದ್ದರು. ಇತ್ತೀಚೆಗೆ ಈ ಹರಿಜನರ ಅಭಿವೃದ್ಧಿಯ ವಿಷಯಗಳನ್ನು Revenue Commissionerಗೆ ಕೊಟ್ಟಿದೆ. ಜಮೀನು grant ಮಾಡುವಾಗ Administrative Disputes ಗಳೇನಾದರೂ ಇದ್ದರೆ ಅವುಗಳನ್ನು ಪರಿಶೀಲಿಸಲು ಸಹಾಯವಾಗುತ್ತದೆ ಎಂದು ಈ ಶಾಖೆಯನ್ನು ಅವರಿಗೆ ವಹಿಸಿದೆ. ಈ ಲ್ಯಾಂಡುಗಳನು ಗ್ರಾಂಟುಮಾಡುವಾಗ ಸ್ಪೆಷಲ್ ಆಫೀಸರು ಪರಿಶೀಲಿಸಿ ಅದನ್ನು appellate authority ಎಂದರೆ Revenue Commissionerಗೆ ಶಿಫಾರಸ್ಸುಮಾಡಿ ಕಳುಹಿಸುತ್ತಿದ್ದಾರೆ. ಇದರಿಂದ ಹರಿಜನರಿಗೂ ಬಹಳ ಅನುಕೂಲ ವಾಗುತ್ತಿದೆ. ಹೀಗಿರುವಾಗ ನಮ್ಮ ಸ್ನೇಹಿತರಾದ ರಾಚಯ್ಯನವರು ಈ ಸ್ಪೆಷಲ್ ಆಫೀಸರನ್ನು ಕಿತ್ತು ಹಾಕಬೇಕು ಎಂದು ಹೇಳಿರುವುದು ನನಗೇನೂ ಅರ್ಥವಾಗುತ್ತಿಲ್ಲ. ಇನ್ನು ಈ Schedule Castes, ಮತ್ತು Tribes, ಇವರ ಅಭಿವೃದ್ಧಿ ವಿಷಯ ಮತ್ತು ಇತರ Social Welfare ಕಾರ್ಯಗಳನ್ನು ಸೇರಿಸಿ ಒಂದು Social Welfare Directorate ನೇಮಿಸಿರುವುದನ್ನು ಟೀಕಿಸಿದರು.

(ಶ್ರೀ ಆರ್. ಚೆನ್ನಿಗರಾಮಯ್ಯ)

ಈ ರೀತಿಯಾದ Directorate office ನಮ್ಮ ದೇಶದಲ್ಲಿಯೇ ಅಲ್ಲ, ಮದ್ರಾಸಿನಲ್ಲಿದೆ, ಹೈದರಾಬಾದಿನಲ್ಲಿದೆ, ಅದೇ ರೀತಿ ಇಲ್ಲಿಯೂ ಹರಿಜನರ ಅಭಿವೃದ್ಧಿಗಾಗಿ ತಕ್ಕ ಕ್ರಮಗಳನ್ನು ಕೈಗೊಳ್ಳುವ ವಿಷಯವನ್ನು ಈ ಇಲಾಖೆಗೆ ಸೇರಿಸಿದೆ. ಈ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರು Schedule Castes ಮತ್ತು Tribes ಇವರ ವಿಚಾರವನ್ನೇ ಅಲ್ಲದೆ ಇನ್ನೂ ಕೆಲವು ಶಾಖೆಗಳ ಆಡಳಿತವನ್ನೂ ನೋಡಿಕೊಳ್ಳುತ್ತಾರೆ Separate Department ಇಟ್ಟು ಅದಕ್ಕೆ ಒಂದು Separate Establishmentನ್ನು ಇಟ್ಟು ಖರ್ಚುಹಾಕಿ ಮಾಡಿದರೆ ಅದರಿಂದ ಹೆಚ್ಚಿನ ಸೌಕರ್ಯಗಳು ದೊರೆಯುವುದಿಲ್ಲ. ಹೇಗೆ ಎಂದರೆ, ಈಗ ಹರಿಜನರಿಗೆ ಜಮೀನು ಕೊಡಬೇಕಾದರೆ ಅಥವಾ ಸಾಲಗಳನ್ನು ಕೊಡಬೇಕಾದರೆ ಅವರಿಗೆ ಅಧಿಕಾರವಿರುವುದಿಲ್ಲ. ಏಕೆಂದರೆ Appellate Authority Revenue Commissioner ಆಗಿದ್ದಾರೆ.

ರೆವಿನ್ಯೂ ಇಲಾಖೆ ಮತ್ತು ರೆವೆನ್ಯೂ ಬೋರ್ಡ್ ಈ ಮಧ್ಯೇ ಈ ಪ್ರತ್ಯೇಕ ಇಲಾಖೆಗೆ ಅಧಿಕಾರಕೊಡಬಹುದು. ಸುಮ್ಮನೆ ಇದಕ್ಕಾಗಿ ಆಫೀಸರನ್ನು ನೇಮಕ ಮಾಡಿದರೂ ಕಾಗದ ಪತ್ರಗಳನ್ನು ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಹೊತ್ತು ಹಾಕುತ್ತಾರೆ. ಹರಿಜನರು ಇಷ್ಟು ವಿದ್ಯಾವಂತರಾಗಿ ಅಭಿವೃದ್ಧಿಗೆ ಬರಬೇಕಾದರೆ ಬರಿ ಹರಿಜನರೇ ಕಾರಣರು ಎಂದು ಹೇಳುವುದಕ್ಕಾಗುತ್ತದೆಯೇ ? ದಿವಂಗತ ಕೆ. ಎಚ್. ರಾಮಯ್ಯನವರು, ಗೋಪಾಲಸ್ವಾಮಿ ಐಯ್ಯರ್ ಅವರು ಹರಿಜನರ ಉದ್ಧಾರಕ್ಕಾಗಿ ದುಡಿದಷ್ಟು ನಿಮ್ಮ ವರ್ಗದವರು ಯಾರು ದುಡಿದರು ? ಈ ಹೊತ್ತು ಕೆ. ಎಚ್. ರಾಮಯ್ಯನವರ ಮಕ್ಕಳೇ ಸೋಷಿಯಲ್ ವೆಲ್‌ಫೇರ್ ಇಲಾಖೆಯ ಡೈರೆಕ್ಟರಾಗಿದ್ದಾರೆ...

Sri N. RACHIAH.—On a point of order, Sir The Hon'ble Minister says 'why should there be a Harijan Officer? Then, why should there be a Harijan Minister having the portfolio of Harijans ? During the regime of Sri Hanu-Manthaiya, be had the Harijan portfolio. Then, let the Hon'ble Minister give up his portfolio. . . . . .

Mr. SPEAKER.—It is an argument. This is not a point of order. It means that the Hon'ble Member is giving information to the House.

Sri G. DUGGAPPA.—On a point of information. ಆರ್. ಗೋಪಾಲಸ್ವಾಮಿ ಐಯ್ಯರ್ ಅವರ ಹೆಸರನ್ನು ಹೇಳಿದರು, ಅವರು ಯಾವ ಸರ್ಕಾರಿ ನೌಕರರೂ ಆಗಿರಲಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅವರೇನೂ ಹರಿಜನರಾಗಿರಲಿಲ್ಲ. ಅವರೆಲ್ಲರೂ ಹರಿಜನರಿಗಾಗಿ ದುಡಿದಿದ್ದಾರೆ, ಅದರ ಫಲವಾಗಿ ನಾವು ಕಣ್ಣು ಬಿಡುತ್ತಿದ್ದೇವೆ. ಬೇರೆಯವರ ಸಹಕಾರವಿಲ್ಲದೆ ನಾವು ಬೆಳೆದಿದ್ದೇವೆನ್ನುವುದು ನನ್ನ ಅಭಿಪ್ರಾಯದಲ್ಲಿ ತಪ್ಪು. ಅಲ್ಲದೆ ಎಲ್ಲಾ ಇಲಾಖೆಗಳಲ್ಲಿಯೂ ಹರಿಜನರೇ ಇರುವುದಕ್ಕಾಗುವುದಿಲ್ಲ. ಹರಿಜನರ ಉದ್ಧಾರವಾಗಬೇಕಾದರೆ ಎಲ್ಲಾ ಇಲಾಖೆಗಳ ಸಹಕಾರ ಸಹಾಯ ಬೇಕಾಗುತ್ತದೆ. ರೆವಿನ್ಯೂ, ವ್ಯವಸಾಯ ಇಲಾಖೆಗಳು, ಪೋಲೀಸ್ ಇಲಾಖೆ, ಪಬ್ಲಿಕ್‌ವರ್ಕ್ಸ್ ಇಲಾಖೆ ಎಲ್ಲ ಇಲಾಖೆಗಳ ಸಹಕಾರವೂ ಬೇಕು. ಆದಕಾರಣ ಎಲ್ಲ ಇಲಾಖೆಗಳಲ್ಲಿಯೂ ನಮ್ಮವರನ್ನೇ ತುಂಬಿ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲರ ಸಹಾನುಭೂತಿಯೂ ಬೇಕು, ಎಲ್ಲರೂ ಮನಸ್ಸು ಮಾಡಿದರೆ ಕೆಲಸವಾಗುತ್ತದೆ. ಸವರ್ಣ ಹಿಂದೂಗಳೂ ಅನ್ಯಾಯ ಮಾಡಿದ್ದಾರೆಂದರೆ, ಯಾರು ಅನ್ಯಾಯ ಮಾಡಿದ್ದಾರೋ ಅವರಿಂದಲೇ ನ್ಯಾಯ ದೊರಕಿಸಿಕೊಳ್ಳಬೇಕು. ತಾನು ಏನಾದರೊಂದು ವಿಷಯ ಅಥವಾ ಅಭಿಪ್ರಾಯವನ್ನು ಹೇಳಿದರೆ ಅದನ್ನೇ ಧೃಢಪಡಿಸಲು ಪ್ರಯತ್ನಿಸುವುದು ಮನುಷ್ಯನ ಸ್ವಭಾವ. ಹೋಗಲಿ, ಇದು ಅಭಿಪ್ರಾಯ.

ಮುಖ್ಯವಾಗಿ ಮಾನ್ಯ ಸದಸ್ಯರು ಹರಿಜನರ ಅಭಿವೃದ್ಧಿಯನ್ನು ರೂರಲ್‌ಡೆವಲಪ್‌ಮೆಂಟ್' 'ಹೆಡ್'ನಲ್ಲಿ ಹಾಕಿದುದು ಸರಿಯಲ್ಲ, ಬೇರೆ ಕಡೆ ಇದೇ ಬೇರೆ 'ಹೆಡ್' ಇದೆ ಎಂದು ಹೇಳಿದರು. Main Head-Rural Development ನಲ್ಲಿ ಬಡ್ಜೆಟ್ ನೋಡಿದರೆ Scheduled Castes ಎಂದಿದೆ. ರೂರಲ್ ಡೆವಲಪ್‌ಮೆಂಟ್ ಎನ್ನುವ ಹೆಸರಿನಲ್ಲಿ 'ರೂರಲ್' ಎನ್ನುವುದನ್ನು ತೆಗೆದುಹಾಕಿ ಬೇಕಾದರೆ ಬರಿಯ 'ಡೆವಲಪ್‌ಮೆಂಟ್' ಎಂದು ಇಟ್ಟುಕೊಳ್ಳಬಹುದು. ಹೆಸರಿಗೆ ನಾವು ಹೊಡೆದಾಡಬೇಕಾಗಿಲ್ಲ. ಹೆಸರಿನಿಂದೇನೂ ಇರುವ ಹಣ ಕಡಮೆಯಾಗುವುದಿಲ್ಲ. ಯಾವ 'ಹೆಡ್' ಆದರೂ ಆಗಲಿ; ಮನೆಕಟ್ಟಿಕೊಳ್ಳುವುದಕ್ಕೆ, ವಿದ್ಯಾಭ್ಯಾಸಕ್ಕೆ ವೇತನಗಳಿಗೆ ನಮಗೆ ಹೆಚ್ಚು ಹಣ ಬೇಕೆಂದು ಕೇಳಬಹುದು. ಇದು ಬಿಟ್ಟು 'ಹೆಡ್'ಗಾಗಿ ಹೆಚ್ಚು ವ್ಯಥೆಪಡಬೇಕಾಗಿಲ್ಲ.

ಕೋಲಾರದಲ್ಲಿ ಹರಿಜನರಿಗಾಗಿ ಒದಗಿಸಿದ್ದ ಹಣದಿಂದ ಕಟ್ಟಿರುವ ಹಾಸ್ಟೆಲ್‌ಗೆ ಬೇರೆಯವರನ್ನೂ ಸೇರಿಸುತ್ತಿದ್ದಾರೆ, ಹಾಗೆ ಮಾಡಬಾರದೆಂದು ಮಾನ್ಯ ಸ್ನೇಹಿತರು ಹೇಳಿದರು. 'ನಚಿಕೇತ ನಿಲಯ' ಎಂದು ಅದಕ್ಕೆ ಹೆಸರಿಟ್ಟಿದ್ದಾರೆ, ಬಹಳ ದೊಡ್ಡ ಕಟ್ಟಡ. ಅದರಲ್ಲಿ ಈಗಾಗಲೇ ಹರಿಜನರಲ್ಲದೆ ಸವರ್ಣ ಹಿಂದೂಗಳೂ 20 ವಿದ್ಯಾರ್ಥಿಗಳಿದ್ದಾರೆಂದು ಕೇಳಿದ್ದೇನೆ. ನಾವೆಲ್ಲರೂ ಜೊತೆಯಲ್ಲಿರಬೇಕು, ಪ್ರತ್ಯೇಕತಾ ಮನೋಭಾವ ಹೋಗಬೇಕು, ಎಲ್ಲರ ಜೊತೆಯಲ್ಲಿಯೂ ವಿದ್ಯಾಭ್ಯಾಸಮಾಡಬೇಕು, ಎಲ್ಲರ ಜೊತೆಗೂ ಬಾಳಿ ಬೆಳೆಯಬೇಕು ಎಂದು ಹೇಳುವಾಗ್ಗ ಬೇರೆ ಪಂಗಡದ ವಿದ್ಯಾರ್ಥಿಗಳನ್ನು ಸೇರಿಸಬಾರದು, ಹರಿಜನರಿಗೇ ಇರಬೇಕೆಂದು ಹೇಳುವುದು ಸರಿಯಲ್ಲ. ಬೇರೆಯವರ ಕೇರಿಗಳಲ್ಲಿ ನಿವೇಶನಗಳನ್ನು ಹರಿಜನರಿಗೆ ಕೊಡಿ ಎಂದು ಕೇಳಬಹುದು, ಪ್ರತ್ಯೇಕವಾಗಿರುವುದಕ್ಕೆ ಬದಲು ಸ್ವರ್ಣ ಹಾಸ್ಟೆಲ್‌ನಲ್ಲಿರುವುದಕ್ಕೆ ಅವಕಾಶ ಕೊಡಿ ಎಂದು ಕೇಳಬಹುದು. ಇದನ್ನು ಬಿಟ್ಟು ಬೇರೆ ಇರಬೇಕೆಂದು ಕೇಳುವುದು ಸೂಕ್ತವಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅಮಿಲಿಯೊರೇಷನ್ ಫಂಡ್‌ನಿಂದ ಖರ್ಚು ಮಾಡಿ ಕಟ್ಟಿದ್ದಾರೆಂದು ಹೇಳಿದರು. ಈ ಕಾರಣದಿಂದ ಹರಿಜನರಿಗೆ ಹೆಚ್ಚು ಕೋಟಾ ಕೊಡಿ ಎಂದು ಕೇಳಬಹುದೇ ಹೊರತು ಸವರ್ಣ ಹಿಂದುಗಳು ಸೇರಬಾರದೆಂದು ಹೇಳುವುದು ಸರಿಯಲ್ಲ.

Sri C. M. ARUMUGHAM.—On a poin of information. As the hostel was constructed from Scheduled Castes Amelioration Fund, will the Government recover the amount ?

Sri R. CHENNIGARAMIAH.—I am not prepared to dispute that point now.

Sri C. M. ARUMUGHAM.—Will the Hon'ble Minister please recover the amount of three lakhs from the Education Department ?

Sri R. CHENNIGARAMIAH.—I am doubtful about it. ಇದನ್ನು ಮೊದಲೇ ಮಾಡಬೇಕಾಗಿತ್ತು.

ಹರಿಜನರಿಗೆ ಬೇರೆ ನೀರಿನ ಬಾವಿಬೇಕಾಗಿಲ್ಲವೆಂದು ಕೆಲವರು ಹೇಳಿದರು. ಹರಿಜನ ಕೇರಿಗಳಲ್ಲಿ ಬಾವಿಗಳಿಲ್ಲ; ಅದನ್ನು ಮಾಡಿಸಬೇಕು ಎಂದು ಇನ್ನು ಕೆಲವರು ಹೇಳಿದರು. ಬೇರೆಯಾಗಿ ಹರಿಜನರಿಗೇ ಬಾವಿಗಳು ಬೇಕೆಂದು ಹೇಳುವವರು ನಾವೇನೂ ಅಲ್ಲ. ಈಗಿರತಕ್ಕ ಸವರ್ಣ ಹಿಂದೂಗಳ ಬಾವಿಗಳಿಗೆ ಹರಿಜನರಿಗೆ ಪ್ರವೇಶವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಈರೀತಿ ಕಾನೂನೇನೂ ಇಲ್ಲ. ಬೇರೆಯವರೂ ಹರಿಜನರ ಬಾವಿಗಳಿಗೆ ಹೋದರೆ ತೊಂದರೆಯಾಗುತ್ತದೆ. ಸವರ್ಣ ಹಿಂದೂಗಳ ಬಾವಿಗಳಿಗೆ ಕೆಲವು ಕಡೆಗಳಲ್ಲಿ ಹರಿಜನರನ್ನೂ ಬಿಟ್ಟಿದ್ದಾರೆ. ಇದು ನಿಧಾನವಾಗಿ ತಾನಾಗಿಯೇ ಸರಿಹೋಗುತ್ತದೆ. ಹಾಗಿಲ್ಲದೆ ಬೆದರಿಕೆ ಅಥವಾ ಒತ್ತಾಯದಿಂದ ಮಾಡಬೇಕೆಂದರೆ ತೊಂದರೆಯಾಗುತ್ತದೆ.

ಹೊಸದಾಗಿ ಜಮೀನುಗಳನ್ನು ಅಕ್ವೈರ್‌ಮಾಡಿ ಸೈಟುಗಳನ್ನು ಮಾಡುವಾಗ ಎಲ್ಲಾ ಜಾತಿಗಳವರಿಗೂ ಒಂದೇ ಕಡೆ ಸೈಟುಗಳನ್ನು ಕೊಡಬೇಕೆಂದು ನಮ್ಮ ಅಭಿಪ್ರಾಯ. ಟ್ರಸ್ಟ್‌ಬೋರ್ಡಿನವರಿಗೂ ಕೂಡ ಎಲ್ಲಾ ಜಾತಿಗಳ ಮಧ್ಯೇ ಸೈಟುಗಳನ್ನು ಹರಿಜನರಿಗೆ ಕೊಡಬೇಕೆಂದು ಹೇಳಿದ್ದೇನೆ. ಹರಿಜನರಿಗೆ ರಿಯಾಯಿತಿಯ ಮೇಲೆ ಕೊಡಬೇಕೆಂದು ಹೇಳಿದ್ದೇನೆ. ಹೀಗೆ ಪ್ರತ್ಯೇಕತೆಯನ್ನು ಆದಷ್ಟು ಕಡಮೆ ಮಾಡಬೇಕು. ಬೇರೆ ಬಾವಿಗಳನ್ನು ತೋಡುವುದನ್ನು ಆದಷ್ಟು ಕಡಮೆಮಾಡಬೇಕು. ಆದರೂ ಸಂಪೂರ್ಣವಾಗಿ ಪ್ರತ್ಯೇಕ ಬಾವಿಗಳನ್ನು ನಿಲ್ಲಿಸುವುದು ಸೂಕ್ತವಲ್ಲ, ಜಾಣತನವಲ್ಲ. ಈಗಲೇ ನಿಲ್ಲಿಸಿದರೆ ಇವರಿಗೆ ತೊಂದರೆಯಾಗುತ್ತದೆ. ಸವರ್ಣ ಹಿಂದೂಗಳ ಬಾವಿಗಳಲ್ಲೇ ಹರಿಜನರಿಗೆ ನೀರು ಕೊಡಿಸುತ್ತೇವೆಂದು ಯಾರಾದರೂ ಸವರ್ಣರೇ ಸತ್ಯಾಗ್ರಹಮಾಡಿದರೆ ಆಗಬಹುದೋ ಏನೋ. ಇದಕ್ಕೆ ಯಾರೂ ಸದ್ಯಕ್ಕೆ ತಯಾರಾಗಿಲ್ಲವೆಂದು ಕಾಣುತ್ತದೆ. ಆದುದರಿಂದ ಯೋಚನೆಮಾಡಿ ಕೆಲಸಮಾಡಬೇಕಾಗಿದೆ.

Sri H. M. CHANNABASAPPA (Krishnarajanagar).—Is it not a fact that funds were allotted out of the Depressed Class Amelioration Fund to Kolar Harijan Hostel ? At the time it was built, was it not the idea that after construction was over and when new area came in, it would be in the interest of Harijans themselves to convert it as a General Hostel and orders were passed to that effect then ?

Sri R. CHENNIGARAMIAH.—It is true.

Sri J. R. SARWESH (Serum).—Is it not the acceptance of the Government that it cannot remove untouchability ?

Sri R. CHENNIGARAMIAH.—We are in a practical world.

Sri C. M. ARUMUGHAM.—My suggestion is when the Government have constructed the hostel from the Depressed Class Amelioration Fund, why not recover the amount from the Education Department ?

Sri R. CHENNIGARAMIAH.—Though the object is all right, it is only day after the fair. ಈಗ ಶ್ರೀ ಶ್ಯಾಮಸುಂದರ್ ಅವರೇನೋ ತಮ್ಮ ಅಮೋಘವಾದ ಮತ್ತು ಜೋರಾದ ಭಾಷಣಮಾಡಿ ಬಹಳ ವಿಷಯಗಳನ್ನು ಹೇಳಿದ್ದಾರೆ. ಆದರೆ ಅವರೇನೋ ಬಹಳ ಉದ್ರೇಕದಲ್ಲಿ ಮಾತನಾಡುತ್ತಿದ್ದರು. ಹಾಗೆ ಅವರು ಉದ್ರೇಕದಿಂದ ಮಾತನಾಡುವಾಗ ಯಾವುದು ಸರಿ, ಯಾವುದು ತಪ್ಪು ಎಂಬುದು ಅವರಿಗೆ ಸರಿಯಾಗಿ ಗೊತ್ತಾಗುವುದಿಲ್ಲ. ಆದರೆ ಅವರು ಸತ್ಯಕ್ಕೆ ತೀರಾ ದೂರವಾದಂಥ ಒಂದು ಅಂಶವನ್ನು ಹೇಳಿದ್ದಾರೆ. ಅದೇನೆಂದರೆ ಮಹಾತ್ಮಾ ಗಾಂಧಿಯವರು ಯರವಾಡ ಜೈಲಿನಲ್ಲಿ ಉಪವಾಸ ಮಾಡುತ್ತಿದ್ದಾಗ ಪೂನಾ ಪ್ಯಾಕ್ಟನ್ನು ಪೊಲಿಟಿಕಲ್ ಪ್ಯಾಕ್ಟ್ ಎಂದು ಒಪ್ಪಿಕೊಂಡರು ಎಂದು ಹೇಳಿದರು. ಇದು ಸರಿಯಾದಂಥ ಹೇಳಿಕೆಯಲ್ಲ. ನಾನು ಅದನ್ನು ಒಪ್ಪುವುದಕ್ಕಾಗುವುದಿಲ್ಲ. ನಾನು ಈ ವಿಚಾರವಾಗಿ ಡಾ॥ ಅಂಬೇಡ್ಕರ್ ಮಹಾತ್ಮಾ ಗಾಂಧಿ ಇತ್ಯಾದಿಯವರಲ್ಲೆಲ್ಲಾ ಕುರಿತು ಚರ್ಚೆ ನಡೆಸಿದ್ದೇನೆ.

ನನ್ನ ಸ್ನೇಹಿತರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. 1938ನೆಯ ಇಸವಿಯಲ್ಲಿ ಮೈಸೂರು ದೇಶದಲ್ಲಿ Constitution Reforms Committee ಬಂದಿತ್ತು. ಆ ದಿನ ಒಂದು ಪ್ರಶ್ನೆ ಬಂದಿತ್ತು. ಅದರ ಪ್ರಕಾರ ನನಗೆ ಮಹಾತ್ಮಾ ಗಾಂಧಿಯವರು ಟೆಲಿಗ್ರಾಂ ಕೊಟ್ಟಿದ್ದರು. ಕಲ್ಕತ್ತಾದಿಂದ ಟೆಲಿಗ್ರಾಂನ್ನು ಕೊಟ್ಟು ನನ್ನನ್ನು ಕರೆಸಿಕೊಂಡರು. ಪೂನಾಕ್ಕೆ ಬರಬೇಕೆಂದು ಹೇಳಿದ್ದರು. ಅದರಂತೆ ನಾನು ಪೂನಾಕ್ಕೆ ಹೋಗಿದ್ದಾಗ ಮಹಾತ್ಮಾಗಾಂಧಿಯವರೊಡನೆ ಚರ್ಚೆಯಾಯಿತು. ಇದರಲ್ಲಿ difficulties ಹೀಗೆ ಬಂದಿವೆ ಎಂದು ನಾನು ಹೇಳಿದ್ದರ ಮೇಲೆ ಒಪ್ಪಿಕೊಂಡರು. ಅವರಿಗೆ ನಾವು ಬೇರೆ ಮುಖ್ಯವಾದ ಸ್ಕೀಮುಗಳನ್ನು ಮಾಡುತ್ತಿದ್ದೇವೆ ಎಂದು ಹೇಳಿದಾಗ ಸಂತೋಷದಿಂದ ಒಪ್ಪಿಕೊಂಡರು. ಅದೇ Poona pact. We had a separate scheme. This scheme is better than the Poona pact. Poona pact—political pact ಏನಲ್ಲ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಈ Rural Development workನಲ್ಲಿ ಹರಿಜನರಿಗೆ ಸಾಕಷ್ಟು ಸೌಕರ್ಯಗಳನ್ನು ಕೊಟ್ಟಿಲ್ಲ. ಕಾನೂನಿನ ಪ್ರಕಾರ ಕೊಟ್ಟಿರತಕ್ಕ ಸೌಕರ್ಯಗಳೂ ಸಿಕ್ಕದೆ ಬಹಳ ಮಟ್ಟಿಗೆ ತೊಂದರೆಗಳಾಗಿವೆ ಎಂಬ ವಿಷಯವನ್ನು ನಾನು ನೋಟು ಮಾಡಿಕೊಂಡಿದ್ದೇನೆ. ಆ ರೀತಿ ತೊಂದರೆಗಳೇನಾದರೂ ಆಗಿದ್ದರೆ ಅದನ್ನು ಸರಿಪಡಿಸಲು ಸರ್ವಪ್ರಯತ್ನವನ್ನೂ ಮಾಡುತ್ತೇವೆಂದು ಇಲ್ಲಿ ಹೇಳುತ್ತಿದ್ದೇನೆ. ಮತ್ತು ಅದೇ ರೀತಿಯಾಗಿ water supply ವಿಷಯದಲ್ಲಿಯೂ ಬಹಳ ತೊಂದರೆಯಾಗಿದೆ ಎಂದು ಹೇಳಿದರು. ಅದನ್ನೂ ಕೂಡ ಆಲೋಚನೆಮಾಡು

(SRI R. CHENNIGARAMAIAH)

ತ್ತೇವೆ; ಮತ್ತು ತಾವು ಇಲ್ಲಿ ಕೊಟ್ಟಿರುವ suggestionsನ್ನೂ ಗಮನದಲ್ಲಿಟ್ಟುಕೊಂಡಿದ್ದೇನೆ. ಅದಕ್ಕೆ ತಕ್ಕ ಕ್ರಮಗಳನ್ನು ಮಾಡಲು ಪ್ರಯತ್ನಿಸುತ್ತೇನೆ. ಇಷ್ಟನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ).— ನಮ್ಮ ಡಿಸ್ಟ್ರಿಕ್ಟಿನಲ್ಲಿ ಹೆಣ್ಣು ಮಕ್ಕಳು ಮಲ್ಲಿಗೆಯ ಹೂವನ್ನು ಕೊಡಕೀಳಲು ಅವಕಾಶವಿರುವುದಿಲ್ಲ. ಕಾನೂನಿನಲ್ಲಿದ್ದರೂ ಈ ರೀತಿ ತೊಂದರೆಯಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅಂತಹ ಸಂಗತಿ ಕೆಲವು ಹಳ್ಳಿಗಳಲ್ಲಿ ಆಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಅದರ ಪರಿಹಾರಕ್ಕೆ ಕಾನೂನಿನಲ್ಲಿಯೇ ಅವಕಾಶವಿದೆ. ಅದಕ್ಕೆ ತಕ್ಕ ಏರ್ಪಾಡು ಮಾಡುತ್ತೇನೆ.

ಶ್ರೀ ಹೆಚ್. ಎಸ್. ರುದ್ರಪ್ಪ (ವ್ಯವಸಾಯ ಇಲಖೆಯ ಮಂತ್ರಿಗಳು).—ಅಧ್ಯಕ್ಷರೇ, ಈಗ ಎರಡು ದಿವಸಗಳಿಂದ ನನಗೆ ಸಂಬಂಧಪಟ್ಟಂತಹ ವಿಷಯಗಳ ಮೇಲೆ ಚರ್ಚೆ ನಡೆದಿದೆ. ಬಹುಶಃ ಅನೇಕ ಮಾನ್ಯ ಸದಸ್ಯರು ವ್ಯವಸಾಯದ ಮೇಲೆ ಮತ್ತು ಪಶುವೈದ್ಯದ ವಿಷಯವಾಗಿ, ಅಮೇಲೆ ಮೀನಿನ ವ್ಯವಸಾಯದಮೇಲೆ ಮತ್ತು ಇತರ ವಿಷಯಗಳ ಮೇಲೆ ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ.

Sri N. RACHIAH.—Now Demands are being discussed. Is the Hon'ble Minister narrating his own story or confining to the Demands?

Mr. SPEAKER.—Whether the Hon'ble Minister is telling his own story or speaking on the Demands, I will look to it.

Sri B. SHAM SUNDER (Bhalki).—But for the pact where would we have been?

Mr. SPEAKER.—Shall I take it that this is not going to end anywhere? I find a number of interruptions when Ministers are replying. Some of them are no doubt interesting indeed. But if the interruptions are many Hon'ble Ministers cannot proceed at all. I have to see that they finish their replies.

Sri R. CHENNIGARAMIAH.—Some members think that by making provoking speeches they will lift the community to heaven. I believe that it will not bring in anything at all.

ಶ್ರೀ ಎಚ್. ಎಸ್. ರುದ್ರಪ್ಪ.—ಈ ಎರಡು ದಿವಸಗಳಲ್ಲಿ ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆಗಳಿಗೆ ಮತ್ತು ಅವರು ಮಾಡಿರತಕ್ಕ ಆಕ್ಷೇಪಣೆಗಳಿಗೆ ಸೂಕ್ತವಾದ ಜವಾಬನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆಯೋ ಇಲ್ಲವೋ ಎಂದು ನನಗನ್ನಿಸುತ್ತದೆ. ಕಾರಣವೇನೆಂದರೆ ಜವಾಬು ಕೊಡಲಿಕ್ಕೆ ಬೇಕಾದಷ್ಟು ಅಂಕಿ ಸಂಖ್ಯೆಗಳು ನನ್ನಲ್ಲಿದ್ದರೂ ಕಾಲಾವಕಾಶವಿಲ್ಲ. ಆದುದರಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಅನೇಕ ಮಾನ್ಯ ಸದಸ್ಯರು ಕೊಟ್ಟಿರತಕ್ಕ ವಿಷಯಗಳ ಮೇಲೆಲ್ಲ ನಾನು ಜವಾಬು ಕೊಡಲಿಕ್ಕೆ ಹೋಗುವುದಿಲ್ಲ. ಆದುದರಿಂದ ತಾವು ಸಲಹೆಗಳ ಮೂಲಕ ಏನು ತಿಳಿಸಿದ್ದೀರಿ; ಮತ್ತು ಟೀಕೆಗಳ ಮೂಲಕ ಏನು ವಿಷಯಗಳನ್ನು ತಿಳಿಸಿದ್ದೀರಿ. ಅವುಗಳಿಗೆ ನನ್ನ ಹೃತ್ಪೂರ್ವಕವಾದ ಸ್ವಾಗತವಿದೆ. ಮಾನ್ಯ ಸದಸ್ಯರು ಅನೇಕ ವಿಷಯಗಳಲ್ಲಿ ಕಟುವಾಗಿ ಟೀಕಿಸಿದ್ದಾರೆ. ಅವರು ಎಷ್ಟು ಆಸಕ್ತಿಯಿಂದ ಆ ಟೀಕೆಗಳನ್ನು ಮಾಡಿದರೋ ಅಷ್ಟೇ ಆಸಕ್ತಿಯಿಂದ ನಾನು ಅವುಗಳನ್ನು ಸ್ವೀಕರಿಸಿದ್ದೇನೆ.

ಇದರಲ್ಲಿ ಒಂದು ವಿಷಯ ಕಂಡು ಬಂತು. ಏನೆಂದರೆ, ಮೈಸೂರು ದೇಶದಲ್ಲಿಯೇ ಅಲ್ಲ, ಇಂಡಿಯಾ ದೇಶದಲ್ಲಿಯೂ ವ್ಯವಸಾಯ ಬಹಳ ಪ್ರಾಮುಖ್ಯವಾದುದು, ಬಹುಜನ ಅದನ್ನು ಆಶ್ರಯಿಸಿದ್ದಾರೆ, ಅದಕ್ಕೆ ಪ್ರಾಮುಖ್ಯ ಕೊಡತಕ್ಕದ್ದು ಸೂಕ್ತವಾದುದು ಎನ್ನುವ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸರ್ಕಾರದವರು ಮೊದಲು ವ್ಯವಸಾಯಕ್ಕೆ, ಪಶುಪಾಲನೆಗೆ ಮತ್ತು ಅದಕ್ಕೆ ಸಂಬಂಧಪಟ್ಟಂಥ ಉದ್ಯಮಗಳಿಗೆ ಅಷ್ಟು ಗಮನ ಕೊಟ್ಟಿಲ್ಲ. ಆದುದರಿಂದ ಇವೊತ್ತು ದೇಶದಲ್ಲಿ ಆಹಾರಾಭಾವ, ಪಶುಪಾಲನೆಯನ್ನು ಸರಿಯಾಗಿ ಮಾಡದೆ ಇದ್ದುದರಿಂದ ಅದಕ್ಕೆ ಸಂಬಂಧಿಸಿದಂಥ ಹಾಲು, ಮೊಸರು ವಗೈರೆಗಳ ಅಭಾವ ಕಂಡು ಬರುತ್ತಿದೆ. 1947ನೆಯ ಇಸವಿಯಿಂದ ಹಿಂದೆ ಈ ಬಾಬುಗಳಿಗಾಗಿ ಆಗಿದ್ದ ಸರ್ಕಾರ ಎಷ್ಟೆಷ್ಟು ಹಣವನ್ನು ಖರ್ಚುಮಾಡುತ್ತಿತ್ತು ಮತ್ತು ಈಗಿನ ಸರ್ಕಾರ, ಈಗಿರತಕ್ಕ ಆರ್ಥಿಕ ಮುಗ್ಗಟ್ಟಿನಲ್ಲಿ, ಆರ್ಥಿಕ ವ್ಯವಸ್ಥೆಯಲ್ಲಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆನ್ನುವುದನ್ನು ತಾವುಗಳೇ ತಿಳಿಯಬೇಕೆಂದು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ವ್ಯವಸಾಯಕ್ಕೆ ಮತ್ತು ಪಶುಪಾಲನೆಗೆ ಒದಗಿಸಿರತಕ್ಕ ಹಣ ಬಹಳ ಕಡಮೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಹೇಳುವಂಥ ವಿಷಯವನ್ನು ನಾನು ಒಪ್ಪಿಕೊಂಡಿದ್ದೇನೆ. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಈಗಿರತಕ್ಕ ಹಣದ ವ್ಯವಸ್ಥೆಯಲ್ಲಿ ಸಾಧ್ಯವಾದಷ್ಟುಮಟ್ಟಿಗೆ ಹಣವನ್ನೊದಗಿಸಿದ್ದೇವೆಂದು ಅರಿಕೆಮಾಡಿಕೊಳ್ಳುತ್ತೇನೆ. ಹಣದ ವ್ಯವಸ್ಥೆ ಉತ್ತಮವಾದ ಮೇಲೆ, ನಮ್ಮ ಆದಾಯ ಜಾಸ್ತಿಯಾದ ಮೇಲೆ ಇದಕ್ಕೆಲ್ಲ ಹೆಚ್ಚಿಗೆ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಇನ್ನು ವ್ಯವಸಾಯದ ಕ್ರಮದಲ್ಲಿರತಕ್ಕ ಕೆಲವು ನ್ಯೂನತೆಗಳನ್ನು ಹೇಳಿದ್ದಾರೆ. ಒಳ್ಳೆಯ ಬೀಜವನ್ನು ಒದಗಿಸಬೇಕು ಎಂದು ಸೂಚನೆಯನ್ನು ಕೊಟ್ಟಿದ್ದಾರೆ. ಮೈಸೂರು ದೇಶದಲ್ಲಿರತಕ್ಕ ಎಲ್ಲ ಜಮೀನ್ದಾರರಿಗೆ ಮತ್ತು ವ್ಯವಸಾಯಗಾರರಿಗೆ ಬೀಜವನ್ನೊದಗಿಸುವುದು ಬಹಳ ಕಷ್ಟವಾಗಿದೆ. ನಮ್ಮ ದೇಶದಲ್ಲಿ ಈಗ ಒಟ್ಟು ಏಳು ಫಾರಂಗಳಿವೆ. ಇದರಲ್ಲಿ ಬಿತ್ತನೆಯ ಬೀಜವನ್ನು ಬೆಳೆಯುತ್ತೇವೆ. ಇದು ಸಾಲದು. ಇದಕ್ಕಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 14 ಫಾರಂಗಳನ್ನು ಪ್ರಾರಂಭ ಮಾಡಬೇಕೆಂದಿದ್ದೇವೆ. ಇವೆಲ್ಲ ಆದಮೇಲೆ ನಮ್ಮಲ್ಲಿ 21 ಫಾರಂಗಳಿರುತ್ತವೆ. ಆದರೆ ಇಷ್ಟು ಫಾರಂಗಳಾದಮೇಲೆಯೂ ಎಲ್ಲರಿಗೂ ಬೀಜವನ್ನೊದಗಿಸುವುದಕ್ಕೆ ಸಾಧ್ಯವಾಗುತ್ತದೆಯೋ ಇಲ್ಲವೋ ಎಂಬ ಸಂಶಯ ನಮಗಿದೆ. ಇವುಗಳಿಗೆ ಖರ್ಚುಮಾತ್ರ ಬಹಳವಾಗಿದೆ, ಆಸೆಯೂ ಜಾಸ್ತಿಯಾಗಿದೆ. ಪ್ರತಿಯೊಬ್ಬ ವ್ಯವಸಾಯಗಾರನಿಗೂ ಒಳ್ಳೆಯ ಬೀಜವನ್ನು ಒದಗಿಸಿದರೆ ಆತನ ಉತ್ಪತ್ತಿಯು ಇದರಿಂದ ಹತ್ತರಷ್ಟು ಜಾಸ್ತಿಯಾಗುತ್ತದೆಂದು ತಿಳಿದವರೂ, ಬುದ್ಧಿವಂತರೂ ಹೇಳಿದ್ದಾರೆ. ಎಲ್ಲರಿಗೂ ಒಳ್ಳೆಯ ಬೀಜವನ್ನೊದಗಿಸುವುದು ಸಾಧುವಾದುದು, ಆದರೆ ಹಾಗೆಮಾಡಲು ಹಣ ಬಹಳ ಬೇಕಾಗುತ್ತದೆ.

ಈಗಿರತಕ್ಕ ವ್ಯವಸ್ಥೆಯಲ್ಲಿ ನಾವು ಬೆಳೆದಂಥ ಒಳ್ಳೆಯ ಬೀಜವನ್ನು ಒಳ್ಳೆಯ ವ್ಯವಸಾಯಗಾರರಿಗೆ ಕೊಟ್ಟು, ಅದನ್ನು ಬೆಳೆಸಿ, ಆ ಬೆಳೆಯನ್ನು ಪುನಃ ಕೊಂಡು ಕೊಂಡು, ಹೀಗೆ multiply ಮಾಡುತ್ತಿದ್ದೇವೆ. ನೂರಕ್ಕೆ ನೂರು ಜನರಿಗೂ ಬೀಜವನ್ನು ಒದಗಿಸ ಬೇಕಾದರೂ, ಬಹುಶಃ ಹತ್ತಾರು ವರ್ಷ ಬೇಕಾಗುತ್ತದೆಂದು ನನಗನ್ನಿಸುತ್ತದೆ.

ಶ್ರೀ ಕೆ. ಕೆಂಚಪ್ಪ.—ಈಗ ಹಣ ಸಾಲದು ಎಂದು ಹೇಳುತ್ತಾರೆ. ಹಿಂದಿನ ಮೂರುನಾಲ್ಕು ವರ್ಷಗಳ ವಹಿವಾಟನ್ನು ನೋಡಿದರೆ ಕೊಟ್ಟ ಹಣವೆಲ್ಲ ಲ್ಯಾಪ್ಸ್ ಆಗಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಆ ವಿಷಯವನ್ನು ನಾನು ಪರಿಶೀಲನೆ ಮಾಡಬೇಕಾಗಿದೆ. ಕೆಲವು ಕಡೆ ಫಾರಂಗಳನ್ನು ಮಾಡಬೇಕೆಂದರೆ ಅದಕ್ಕೆ ಅನೇಕ ತೊಂದರೆಗಳಿವೆ. ಅದಕ್ಕೆ ಸರಿಯಾದ ಜಮೀನು ಬೇಕು, ನೀರಾವರಿಯಾದ ಸ್ಥಳ ಬೇಕು, ಈ ಅನುಕೂಲಗಳಿರುವ ಕಡೆ ಸರ್ಕಾರಿ ಜಮೀನಿಲ್ಲ. ಆ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾಗುತ್ತದೆ. ಹಾಗೆ ಅಕ್ವೈರ್ ಮಾಡಿಕೊಳ್ಳಬೇಕಾದರೆ ಈಗಾಗಲೇ ಶ್ರೀ ಆರ್. ಚೆನ್ನಿಗರಾಮಯ್ಯನವರು ಹೇಳಿರುವಂತೆ ಬಹಳ ತೊಂದರೆಗಳಿವೆ. ಈಗ ಎರಡನೆಯ ಯೋಜನೆಯಲ್ಲಿ, 14 ಫಾರಂಗಳನ್ನು ಮಾಡಬೇಕೆಂದಿದ್ದೇವೆ. ಇನ್ನೂ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಇಷ್ಟು ಮಾತ್ರ ಆಶ್ವಾಸನೆಯನ್ನು ಕೊಡುತ್ತೇನೆ.

ಅನೇಕ ಮಾನ್ಯ ಸದಸ್ಯರು ಗೊಬ್ಬರದ ವಿಷಯವನ್ನು ಎತ್ತಿ ಹೇಳಿದ್ದಾರೆ. ಕಂಪೋಸ್ಟ್ ಗೊಬ್ಬರವನ್ನು ತಯಾರಿಸಿ ಒದಗಿಸುವುದು ಬಹಳ ಮುಖ್ಯವಾದುದಾಗಿದೆ. ಮುನಿಸಿಪಾಲಿಟಿಗಳು ಸಹಕರಿಸಿ ಹೆಚ್ಚು ಗೊಬ್ಬರ ತಯಾರು ಮಾಡುವುದಕ್ಕೆ ಸಹಾಯ ಮಾಡಬೇಕಾಗಿದೆ. ಈ ಗೊಬ್ಬರ ತಯಾರು ಮಾಡುವುದಕ್ಕೆ ಪಟ್ಟಣಗಳಲ್ಲಿ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಎರಡು ರೂಪಾಯಿವರೆಗೆ ಸರಕಾರದವರು ಕೊಡುತ್ತಿದ್ದಾರೆ. ಈ ಕೆಲಸವನ್ನು ಮುನಿಸಿಪಾಲಿಟಿಯವರೇ ವಹಿಸಿಕೊಳ್ಳಬೇಕು. ಪ್ರತಿಯೊಂದು ಊರಿನಲ್ಲೂ ಕಂಪೋಸ್ಟ್ ಗೊಬ್ಬರ ತಯಾರು ಮಾಡಬೇಕು. ಹಳ್ಳಿಗಳಲ್ಲಿ ಕಂಪೋಸ್ಟ್ ಗೊಬ್ಬರ ಯಾರೂ ತಯಾರು ಮಾಡುವುದಿಲ್ಲ. ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಎನ್. ಇ. ಎಸ್. ಯೋಜನೆಗಳಲ್ಲಿ ಹೆಚ್ಚು ಆಸಕ್ತಿ ವಹಿಸಿ ಈ ಗೊಬ್ಬರ ತಯಾರಿಕೆಯ ಕೆಲಸವನ್ನು ಮಾಡಬೇಕಾಗಿದೆ. ಇದರ ತಯಾರಿಕೆಯ ಬಗ್ಗೆ ಎಲ್ಲರೂ ಆಸಕ್ತಿ ವಹಿಸಿ ಪ್ರಯತ್ನ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಕೃತಕ ಗೊಬ್ಬರವನ್ನು ಸರಕಾರವು ಒದಗಿಸಬೇಕೆಂದು ಅನೇಕರು ಸಲಹೆ ಮಾಡಿದ್ದಾರೆ. ಆದರೆ ಕೃತಕ ಗೊಬ್ಬರದ ಬೆಲೆ ಜಾಸ್ತಿಯಾಗಿದೆ ಎಂದು ಸಹ ಹೇಳಿದ್ದಾರೆ. ಈ ಗೊಬ್ಬರವನ್ನು ಮೈಸೂರು ಸರ್ಕಾರ ತಯಾರುಮಾಡಿ ಮಾರುತ್ತಿಲ್ಲ. ಇದನ್ನು ಇಂಡಿಯಾ ಸರ್ಕಾರದವರು ಮಾಡುತ್ತಿದ್ದಾರೆ. ಇದರ ಬೆಲೆ ಜಾಸ್ತಿಯಾಗುವುದಕ್ಕೆ ಕಾರಣವಿದೆ. ಬೆಲೆ ಜಾಸ್ತಿ ಇದ್ದರೂ ಇದರಿಂದ ಇಂಡಿಯಾ ಸರ್ಕಾರಕ್ಕೆ ಏನೂ ಲಾಭವಿಲ್ಲ. ಈ ಗೊಬ್ಬರವನ್ನು ತಯಾರಿಸುವುದಕ್ಕೆ ಎಷ್ಟು ಖರ್ಚು ಬರುತ್ತಿದೆಯೋ ಅಷ್ಟನ್ನು ಮಾತ್ರ ತೆಗೆದುಕೊಳ್ಳುತ್ತಿದ್ದಾರೆ. ಈ ಗೊಬ್ಬರವನ್ನು ತಯಾರಿಸುವುದಕ್ಕೆ ಜಾಸ್ತಿ ಖರ್ಚು ಬರುವುದರಿಂದ ಇದರ ಬೆಲೆಯೂ ಕೂಡ ಜಾಸ್ತಿ ಇರುವುದು. ಈ ಗೊಬ್ಬರವನ್ನು ಏನೂ ಲಾಭವಿಲ್ಲದೆ ಲಕ್ಷಾಂತರ ರೂಪಾಯಿಗಳ ಹಾನಿ ಮಾಡಿಕೊಂಡು ಸರ್ಕಾರದವರು ಮಾರಾಟ ಮಾಡುತ್ತಿದ್ದಾರೆ. ಹಿಂದಕ್ಕೆ 1952-53ರಲ್ಲಿ 7,045 ಟನ್ ಗೊಬ್ಬರವು ಮೈಸೂರು ರಾಜ್ಯದಲ್ಲಿ ಖರ್ಚು ಆಗಿದೆ. 1956-57ರಲ್ಲಿ 21,530 ಟನ್ ಗೊಬ್ಬರ ಖರ್ಚು ಆಗಿದೆ. ಅನೇಕ ಸದಸ್ಯರು ಸಲಹೆ ಮಾಡಿದಂತೆ ಬೆಲೆಯನ್ನು ಕೆಳಗೆ ಇಳಿಸುವುದಕ್ಕೆ ಕಷ್ಟವಾಗಿದೆ.

ಶ್ರೀ ಕೆ. ಕೆಂಚಪ್ಪ.—ಹಿಂಡಿ ಧಾರಣೆ ತೆಗೆದುಕೊಂಡರೆ 175 ರೂಪಾಯಿ ಇದ್ದುದು 260 ರೂಪಾಯಿ ಆಗಿದೆ ಇಷ್ಟು ವ್ಯತ್ಯಾಸವಾಗಲಿಕ್ಕೆ ಕಾರಣವೇನು ?

ಶ್ರೀ ಎಚ್. ಎಸ್. ರುದ್ರಪ್ಪ.—ವ್ಯತ್ಯಾಸವು ಆಗಿದೆ. ಪ್ರತಿಯೊಂದು ವಸ್ತುವಿನ ಧಾರಣೆಯೂ ಜಾಸ್ತಿಯಾಗಿದೆ. ಧಾರಣೆ ಕಡಮೆಯಾಗುತ್ತಾ ಇಲ್ಲ.

ನಾವು ಕೊಳ್ಳುವುದಾದರೂ ಮಾಲೀಕರಿಂದ ವರ್ತಕನು ಹೇಗೆ ಮಾರುತ್ತಾನೆ ? ಎಳ್ಳನ್ನು ಕೊಂಡಂತೆ ಎಣ್ಣೆ ಮಾರುತ್ತಾನೆ ಅಷ್ಟೆ. ಆದ್ದರಿಂದ ಈ ಧಾರಣೆ ಯಾರಿಗೆ ಬರುತ್ತದೆಂದರೆ ರೈತನಿಗೇ ಬರುತ್ತದೆ. ರೈತನಿಗಿಂತ ವ್ಯಾಪಾರಸ್ಥನಿಗೆ ಸ್ವಲ್ಪ ಹೆಚ್ಚಿಗೆ ಲಾಭ ಬರಬಹುದೆಂಬುದನ್ನೂ ನಾನು ಒಪ್ಪುತ್ತೇನೆ. ಹೀಗೆ ಕಾರಣಾಂತರದಿಂದ, ಕಚ್ಚಾ ಪದಾರ್ಥಗಳ ಬೆಲೆ ಜಾಸ್ತಿಯಾಗಿ ಧಾರಣೆ ವಾಸಿಗಳು ಏರಿವೆಯೆಂದು ನಾನು ಹೇಳುತ್ತೇನೆ.

ಶ್ರೀ ಕೆ. ಕೆಂಚಪ್ಪ.—ಹಿಂದೆ ನೀವು ಹೇಳುವಂಥ ಬೇಜವಾಬ್ದಾರಿ ಸರ್ಕಾರವಿದ್ದಾಗ ಟನ್ನಿಗೆ 85 ರೂಪಾಯಿ ಬೀಳುವುದನ್ನು 45 ರೂಪಾಯಿಗಳಿಗೆ ರೈತರಿಗೆ ಒದಗಿಸುತ್ತಿದ್ದರು. ಈಗಲಾದರೋ ನಿಮಗೆಷ್ಟು ಧಾರಣೆ ಬಿದ್ದಿರುತ್ತದೋ ಅಷ್ಟಕ್ಕೇ ರೈತನಿಗೂ ಕೊಡುತ್ತಿದ್ದೀರಿ.

ಶ್ರೀ ಎಚ್. ಎಸ್. ರುದ್ರಪ್ಪ.—ತಾವು ಹೇಳುವುದು ನಿಜವಾಗಿರಬಹುದು. ಆಗ್ಗೆ ಅವರು ಸಬ್ಸಿಡಿ ಕೊಟ್ಟು ಮಾಡುತ್ತಿದ್ದರು. ಆಗಿನಂತೆ ಈ ಹೊತ್ತು ಸಬ್ಸಿಡೈಸ್ ಮಾಡಿ ಮಾರುವುದು ಸೂಕ್ತವೇ ಎಂಬುದನ್ನೂ ನೀವು ಯೋಚನೆ ಮಾಡಬೇಕು. ಲಾಭ ಪಡೆಯತಕ್ಕವರು ಒಬ್ಬರು, ಸಬ್ಸಿಡಿ ಹಣವನ್ನು ಕೊಡುವವರು ಒಬ್ಬರು ಎಂದಾಗಬಾರದು. ಏಕೆಂದರೆ ಈ ಗೊಬ್ಬರವನ್ನು ಸಣ್ಣ ಸಣ್ಣ ರೈತರಾರೂ ಉಪಯೋಗಿಸುತ್ತಿಲ್ಲ. ನಮ್ಮಂಥವರು, ನಿಮ್ಮಂಥವರು ಮಾತ್ರ ಉಪಯೋಗಿಸುತ್ತಿದ್ದೇವೆ. ಹೀಗಿರುವಾಗ General Revenueವಿನಿಂದ ಸಬ್ಸಿಡೈಸ್ ಮಾಡಿ ಸಹಾಯ ಮಾಡುವುದು ಯುಕ್ತವೇ ಎಂಬುದನ್ನು ಯೋಚಿಸಿ. ಅಲ್ಲದೆ ಈಗಲೂ ನಮಗಿರತಕ್ಕ ಡಿಮ್ಯಾಂಡನ್ನು ಪೂರೈಸುವುದೇ ಕಷ್ಟವಾಗಿದೆ. ಹಾಗಿರುವಾಗ ಇನ್ನು ಸಬ್ಸಿಡೈಸ್ ಮಾಡುವುದರಿಂದ ಇನ್ನಷ್ಟು ಕಷ್ಟವಾಗುವುದಿಲ್ಲವೇ ಎಂದು ಕೇಳುತ್ತೇನೆ. ಧಾನ್ಯವನ್ನು ಸಬ್ಸಿಡೈಸ್ ಮಾಡಿ ಮಾರುವುದನ್ನು ಹೇಗೆ ನೀವು ಒಪ್ಪುವುದಿಲ್ಲವೊ ಆ ಮಾತು ಇದಕ್ಕೂ ಅನ್ವಯಿಸುತ್ತದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ತಾವು ಹೇಳಿದಿರಿ, ತಮ್ಮ ಪೋರ್ಟ್‌ಫೋಲಿಯೋವಿಗೆ ಸೇರಿರುವ ಹಣ ಎಷ್ಟೋ ಲ್ಯಾಪ್ಸ್ ಆಗುತ್ತದೆ ಎಂದು. ಅದು ನಿಜ. ಅದಕ್ಕಿಂತ ಹೆಚ್ಚಾಗಿ ರೈತನಿಂದ ಸುಳ್ಳು ಬೆಲೆ ಹೇಳಿ ಹಣ ತೆಗೆದುಕೊಂಡು ಕೆಲವು ನೌಕರರು ತಿಂದುಹಾಕುತ್ತಿದ್ದಾರೆ. ನಾನೇ ಇಂಥದನ್ನು ಡೈರೆಕ್ಟರವರ ನೋಟೀಸಿಗೇ ತಂದಿದ್ದೇನೆ. ಅವರನ್ನು ಬಲಿ ಹಾಕುತ್ತೇನೆಂದು ಅವರು ಹೇಳಿದ್ದಾರೆ.

Sri H. S. RUDRAPPA.—Thanks.

ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ನಮಗೀಗ ಕೃತಕ ಗೊಬ್ಬರವನ್ನು ತರಿಸಿಕೊಡುತ್ತಾರಲ್ಲಾ ಅದು ಇಂಡಿಯ ದೇಶದಲ್ಲಿ ತಯಾರಿಸಿದ್ದೋ ಅಥವಾ ಹೊರಗಡೆಯಿಂದ ತರಿಸಿದ್ದೋ ?

ಶ್ರೀ ಎಚ್. ಎಸ್. ರುದ್ರಪ್ಪ.—ನಾನೇ ಆ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೆ, ಮಾನ್ಯ ಸದಸ್ಯರೇ ಎತ್ತಿದ್ದಾರೆ, ಸಂತೋಷ. ನಮಗೀಗ ಗೊಬ್ಬರದ ಡಿಮ್ಯಾಂಡ್ ಬಹಳ ಇದೆ. ಇಂಡಿಯಾ ದೇಶದಲ್ಲಿ ತಯಾರಾಗುವಷ್ಟು ಗೊಬ್ಬರ ಸಾಕಾಗುವುದಿಲ್ಲ. ಆದ್ದರಿಂದ ಇಂಡಿಯಾ ಸರ್ಕಾರದವರು ಬಹಳವಾಗಿ ಹೊರಗಿನಿಂದ ಆಮದು ಮಾಡುತ್ತಿದ್ದಾರೆ. ನಮಗೆ ಸಪ್ಲೈ ಮಾಡುತ್ತಿರುವುದು, ಈ ಹೊರಗಿನಿಂದ ತರಿಸುತ್ತಿರತಕ್ಕ ಗೊಬ್ಬರ. ಮೈಸೂರು ದೇಶಕ್ಕೆ ಮದರಾಸಿಗೆ ಹಡಗಿನಲ್ಲಿ ಬರುವುದನ್ನು ಸಪ್ಲೈ ಮಾಡುವುದು ಹತ್ತಿರವಾಗಿರುತ್ತದೆಂಬ ಕಾರಣದಿಂದ ಹೀಗೆ ಮಾಡುತ್ತಿದ್ದಾರೆ. ಖರ್ಚು ಕಡಮೆಯಾಗುತ್ತದೆಂದು ಹೇಳಿ ಹೊರಗಿನಿಂದ ಬರುವ ಗೊಬ್ಬರವನ್ನು ನಮಗೆ ಕೊಡಲಾಗುತ್ತಿದೆ. ಹಾಗಿಲ್ಲದೆ, ಉತ್ತರ ದೇಶಕ್ಕೆ ಈ ಗೊಬ್ಬರವನ್ನು ತೆಗೆದುಕೊಂಡು ಹೋಗಿ, ಉತ್ತರದೇಶದಲ್ಲಿ ತಯಾರಾದ ಗೊಬ್ಬರವನ್ನು ನಮಗೆ ಕೊಡುವುದೆಂದರೆ ಖರ್ಚು ಬಹಳವಾಗುತ್ತದೆ. ಜೊತೆಗೆ ವ್ಯಾಗನ್‌ಗಳ ಕಷ್ಟವೂ ಇದೆ. ಜನರಲ್ಲಿ ಇನ್ನೊಂದು ತಪ್ಪು ಅಭಿಪ್ರಾಯವೂ ಇದೆ. ಸಿಂಧ್ರಿ ಫ್ಯಾಕ್ಟರಿ ಗೊಬ್ಬರ ಉತ್ತಮವಾದುದು ಹೊರಗಿನಿಂದ ಬರುವುದು ಸುಮಾರಿನ ದರ್ಜೆಯದು ಎಂಬ ಭಾವನೆಯಿದೆ. ಇದು ತಪ್ಪುಭಾವನೆ. ಹೊರಗಿನಿಂದ ಬರುವುದೇ ಇಲ್ಲಿನದಕ್ಕಿಂತ ಉತ್ತಮವಾದುದು ಎಂದು ತಜ್ಞರು ಕಂಡು ಹಿಡಿದಿದ್ದಾರೆ. ಆದ್ದರಿಂದ ಮದರಾಸಿನಿಂದ ನಮಗೆ ಸಪ್ಲೈ ಆಗುತ್ತಿರುವುದರಲ್ಲಿ ಅನ್ಯಾಯವೇನೂ ಇಲ್ಲ. ಸಮುದ್ರತೀರಕ್ಕೆ ನಾವು ಹತ್ತಿರವಿರುವುದರಿಂದ ಇಲ್ಲಿಗೇ ಹೊರಗಿನಿಂದ ಬರುವುದನ್ನು ಕೊಡುವುದು ಉತ್ತಮವೆಂದು ಮಾಡಿದ್ದಾರೆ. ಅಷ್ಟೇ, ಇಲ್ಲದಿದ್ದರೆ, transport ಕಷ್ಟವೂ ಇರುತ್ತಿತ್ತಲ್ಲದೆ ಸ್ವಲ್ಪ ಲುಕ್ಸಾನೂ ಕೂಡ ಆಗುತ್ತಿತ್ತು.

ಶ್ರೀ ಕೆ. ಎಲ್. ನರಸಿಂಹಯ್ಯ.—ನಮಗಿದರಿಂದ ಖರೀದಿ ಜಾಸ್ತಿಯಾಗುತ್ತದೆಯಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಹಸುರೆಲೆ ಗೊಬ್ಬರದ ವಿಷಯವಾಗಿ ಅನೇಕ ಸದಸ್ಯರು ಬಹಳವಾಗಿ ಮಾತನಾಡಿದ್ದಾರೆ. ಈ ಹಸುರೆಲೆ ಗೊಬ್ಬರ ಎನ್ನುವುದು ಆರ್ಟಿಫಿಷಿಯಲ್ ಮ್ಯಾನ್ಯೂರ್‌ಗಿಂತಲೂ ಬಹಳ ಉತ್ತಮವಾದ ಗೊಬ್ಬರವೆಂದು ನಾನು ಹೇಳುತ್ತೇನೆ. ಇಂತಹ ಗೊಬ್ಬರವನ್ನು ಬಯಲು ಸೀಮೆಗೆ ಗಾಡಿಗಳಲ್ಲಿ ತರಿಸುತ್ತಿದ್ದೇವೆ. ಆದರೆ ಲಾರಿಗಳಲ್ಲಿ ಇದನ್ನು ಬಯಲು ಸೀಮೆಗೆ ತರಿಸುವುದಕ್ಕಾಗುವುದಿಲ್ಲ.

ಶ್ರೀ ಕುಂದೂರ್ ರುದ್ರಪ್ಪ (ಚೆನ್ನಗಿರಿ).—ತಮಗೆ ಯಾವ ರೀತಿ ಸೂಕ್ತವೋ ಆ ರೀತಿ ಏರ್ಪಾಡು ಮಾಡಿ. ಆದರೆ ಬಿತ್ತನೆಯ ಬೀಜವನ್ನು ಸಹ ಸಕಾಲಕ್ಕೆ ಒದಗಿಸಬೇಕು.

ಶ್ರೀ ಎಚ್. ಎಸ್. ರುದ್ರಪ್ಪ.—ಅದು ಸ್ವಲ್ಪ ನಿಧಾನವಾಗಿರಬಹುದು.

ಶ್ರೀ ಕುಂದೂರ್ ರುದ್ರಪ್ಪ.—ಹೆಸರುಘಟ್ಟ ಫಾರಮ್ಮನ್ನು ಕೇಂದ್ರ ಸರ್ಕಾರದ ವಶಕ್ಕೆ ವಹಿಸಿಕೊಡುತ್ತೇವೆಂದು ಹೇಳುತ್ತೀರಿ, ಆದರೆ . . . . .

ಶ್ರೀ ಎಚ್. ಎಸ್. ರುದ್ರಪ್ಪ.—ಆ ವಿಷಯವನ್ನು ಈಗ ಪ್ರಸ್ತಾಪಿಸುವುದು ಬೇಡ. ಬೇರೆ ಕಾಲದಲ್ಲಿ ಆ ವಿಚಾರವನ್ನು ಚರ್ಚೆ ಮಾಡೋಣ.

ಹಸುರೆಲೆ ಗೊಬ್ಬರದ ಪ್ರಚಾರ ಮಾಡುವುದು ಬಹಳ ಉತ್ತಮ. ಅದಕ್ಕೆ ಸರಿಯಾದ ಮತ್ತು ಉತ್ತಮವಾದ ಬೀಜಗಳನ್ನು ಒದಗಿಸುವುದು ನಮ್ಮ ಕರ್ತವ್ಯ. ಈ ಬಗ್ಗೆ ಎಲ್ಲೆಲ್ಲಿ ಲೋಪ ದೋಷಗಳಿವೆಯೋ ಅಲ್ಲೆಲ್ಲಾ ಸರಿಯಾದ ಕ್ರಮ ತೆಗೆದುಕೊಂಡು ಹಸುರೆಲೆ ಗೊಬ್ಬರಕ್ಕಾಗಿ ತಕ್ಕ ಬಿತ್ತನೆಯ ಬೀಜಗಳ ಸರಬರಾಯಿ ಮಾಡಲು ಸಂಬಂಧಪಟ್ಟ ಇಲಾಖೆಯವರು ಈಗಾಗಲೇ ಪ್ರಯತ್ನ ಪಡುತ್ತಿದ್ದಾರೆಂದು ಹೇಳಬಯಸುತ್ತೇನೆ. ಕೆಲವರು ಗೊಬ್ಬರವನ್ನು ಸಾಗಿಸುವುದಕ್ಕೆ ಲಾರಿಗಳ ಏರ್ಪಾಡು ಮಾಡಬೇಕು ಎಂದು ಹೇಳಿದರು. ಬಹುಶಃ ಈ ಎಲ್ಲಾ ಕೆಲಸವನ್ನೂ ಇಲಾಖೆಯವರೇ ವಹಿಸಿಕೊಂಡರೆ ಇದು ನ್ಯಾಷನಲೈಸೇಷನ್ ಮಾಡಿದಂತಾಗುತ್ತದೆ. ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತವೆ. ಸಾರ್ವಜನಿಕ ಹಣ ದುರುಪಯೋಗವಾಗುತ್ತದೆ. ಆದ್ದರಿಂದ ಲಾರಿಗಳಲ್ಲಿ ಗೊಬ್ಬರವನ್ನು ಸಾಗಿಸುವ ವ್ಯವಸ್ಥೆ ಮಾಡುವುದು ಅಷ್ಟು ಸೂಕ್ತವಾದುದಲ್ಲ ಎಂದು ತಿಳಿಸಬಯಸುತ್ತೇನೆ. ಕೆಲವರು ಉಳುವುದಕ್ಕೆ ಟ್ರ್ಯಾಕ್ಟರುಗಳು ಅವಶ್ಯಕವಾಗಿರಬೇಕೆಂದು ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಸಂತೋಷ. ಒಂದಾನೊಂದು ಕಾಲದಲ್ಲಿ ಇದರಲು ಪಯೋಗ ಜಾಸ್ತಿಯಾಗಿತ್ತು. ಅದಕ್ಕಾಗಿ ಹಣವನ್ನು ಯಥೇಚ್ಛವಾಗಿ ಖರ್ಚುಮಾಡಿ ಟ್ರ್ಯಾಕ್ಟರುಗಳನ್ನೂ ಬುಲ್‌ಡೋಜರುಗಳನ್ನೂ ಸರ್ಕಾರದವರು ಹಿಂದೆ ತರಿಸಿರುವುದು ಹಳೆಯ ಮೈಸೂರಿಗೆ ಚೆನ್ನಾಗಿ ಗೊತ್ತಿದೆ. ಇವುಗಳ ಮೇಲೆ 30 ಲಕ್ಷ ರೂಪಾಯಿಗಳಷ್ಟು ಇನ್‌ವೆಸ್ಟ್ ಮಾಡಿದರೂ ಉಪಯೋಗವೇನೋ ಕಡಮೆ. ನಿಮಗೆ ಇದರಿಂದ ಅಸಮಾಧಾನ. ಸಾರ್ವಜನಿಕ ಹಣ ಈ ಬಾಬಿಗೆ ಈ ರೀತಿ ಖರ್ಚು ಮಾಡುತ್ತಿದ್ದರೂ ಇವೊತ್ತು ಅವುಗಳಿಂದ ಪ್ರಯೋಜನ ಎಷ್ಟು ಆಗಬೇಕೋ ಅಷ್ಟು ಆಗಲಿಲ್ಲ. ಮೆಷನರಿಗಳೇನೋ ಪರದೇಶಗಳಿಂದ ಬಂದುವು. ಆದರೆ ಆ ಉಪಕರಣಗಳನ್ನು ನಡೆಸುವುದರಲ್ಲಿ ಡ್ರೈವರ್ಸ್ ಮತ್ತು ಮೆಕಾನಿಕ್‌ಗಳಿಗೆ ಮಾಹಿತಿ ಕಡಮೆಯಾಗಿದ್ದುದರ ದೆಸೆಯಿಂದ ತುಂಬ ಲುಕ್ಸಾನು ಆಯಿತು. ಕೆಲವು ಆರಾರು ತಿಂಗಳು ಚೆನ್ನಾಗಿ ಕೆಲಸ ಮಾಡಿ ಆ ಮೇಲೆ ಕೆಟ್ಟುಹೋದುವು. ಈಗ ಹಳೆಯ ಮೈಸೂರು ಮತ್ತು ಹೊಸ ಮೈಸೂರಿನಲ್ಲಿ ಒಟ್ಟಿಗೆ 187 ಅಥವಾ 188 ಟ್ರ್ಯಾಕ್ಟರುಗಳಿವೆ. ಅವುಗಳಲ್ಲಿ 36 ಟ್ರ್ಯಾಕ್ಟರುಗಳು ಮಾತ್ರ ಕೆಲಸ ಮಾಡುತ್ತಿವೆ. ಇನ್ನುಳಿದ 151 ಅಥವಾ 152 ಟ್ರ್ಯಾಕ್ಟರುಗಳು ಸಿಕ್ ಆಗಿವೆ. ಗುಣವಾಗದಿರುವ ರೋಗ ಅವುಗಳಿಗೆ ಬಂದಿದೆ. ಆದ್ದರಿಂದ ನಾವು ಹೊಸದಾಗಿ ಪರದೇಶಗಳಿಂದ ಟ್ರ್ಯಾಕ್ಟರುಗಳನ್ನು ಮತ್ತು ಬುಲ್‌ಡೋಜರುಗಳನ್ನು ಇನ್ನು ಮುಂದೆ ತರಿಸುವುದು ಅಷ್ಟು ಸೂಕ್ತವಲ್ಲವೆಂದು ನಾನು ಹೇಳುತ್ತೇನೆ. ಈಗಿನ ಕಷ್ಟಕಾಲದಲ್ಲಿ ಅದಕ್ಕೆ ಬೇಕಾದ ಫಾರೆನ್ ಎಕ್ಸ್‌ಚೇಂಜು ಸಿಕ್ಕುವುದು ಬಹಳ ಕಷ್ಟವಾಗಿದೆ. ಅದಕ್ಕಾಗಿ ಕೇಂದ್ರ ಸರ್ಕಾರದವರನ್ನು ಕೇಳುವುದೂ ಸೂಕ್ತವಲ್ಲ. ಈಗ ನಮ್ಮಲ್ಲಿರುವ ಟ್ರ್ಯಾಕ್ಟರುಗಳನ್ನು ಉತ್ತಮ ರೀತಿಯಲ್ಲಿ ಸರಿಪಡಿಸಿ ಅವುಗಳಿಂದ ಉಪಯೋಗ ಪಡೆಯಬೇಕು. ಅದನ್ನು ಬಿಟ್ಟು ಹೊಸದಾಗಿ ಟ್ರ್ಯಾಕ್ಟರುಗಳನ್ನು ಮತ್ತು ಬುಲ್‌ಡೋಜರುಗಳನ್ನು ತರಿಸುವುದು ಸೂಕ್ತವಲ್ಲ. ಅದಕ್ಕೆ ತಾವೆಲ್ಲರೂ ಒಪ್ಪುತ್ತೀರೆಂದು ಭರವಸೆಯುಳ್ಳವನಾಗಿದ್ದೇನೆ. ಈಗಾಗಲೇ ಇರತಕ್ಕ ಟ್ರ್ಯಾಕ್ಟರುಗಳನ್ನು ಪರೀಕ್ಷಿಸಿ ಕೆಲವನ್ನು ಕಾರ್ಯರೂಪಕ್ಕೆ ತರಬೇಕೆಂದು ಏರ್ಪಾಡು ಮಾಡುತ್ತಿದ್ದೇವೆ. ಎಷ್ಟು ಸಾಧ್ಯವೋ ಅಷ್ಟನ್ನು ಇನ್ನೊಂದು ವರ್ಷದಲ್ಲಿಯೇ ಮಾಡುತ್ತೇವೆ. ಆದರೆ ಈಗ ಉಳಿದ ಸ್ಕ್ರ್ಯಾಪ್ ಆಗಿರುವ ಟ್ರ್ಯಾಕ್ಟರುಗಳಿಂದ ಅಷ್ಟಾಗಿ ಏನೂ ಪ್ರಯೋಜನವಿಲ್ಲ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ನಿಮ್ಮ ಮೆಕಾನಿಕಲ್ ಸೆಕ್ಷನನ್ನು P.W.D.ಗೆ ವಹಿಸಿದರೆ ಚೆನ್ನಾಗಿ ಕೆಲಸ ಮಾಡುತ್ತಾರೆಂದು ಒಪ್ಪುತ್ತೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ತಮ್ಮ ಸಲಹೆಯನ್ನು ಯೋಚನೆ ಮಾಡುತ್ತೇನೆ. ಇಲ್ಲಿ ಇಂಜಿನಿಯರಿಂಗ್ ಶಾಖೆಯನ್ನು ಏರ್ಪಡಿಸುವುದಕ್ಕೆ ವ್ಯವಸ್ಥೆಮಾಡಿದ್ದೇವೆ P.W.D.ಯಿಂದ ಇಂಜಿನಿಯರ್ ಬಂದರೆ 4-5 ವರ್ಷಗಳು ಇರುತ್ತಾರೆ. ಆಮೇಲೆ ಹೋಗುತ್ತಾರೆ. ಹೀಗಾಗುವುದರಿಂದ ಈಗಾಗಲೇ ಇಲ್ಲಿ ಒಂದು ಇಂಜಿನಿಯರಿಂಗ್ ಸೆಕ್ಷನ್ ಮಾಡಿದ್ದೇವೆ. ಬುಲ್‌ಡೋಜರ್ಸ್ ಟ್ರ್ಯಾಕ್ಟರುಗಳ ದರವನ್ನು ಕಡಮೆ ಮಾಡಬೇಕೆಂದು ಹೇಳಿದ್ದಾರೆ; ಯೋಚನೆ ಮಾಡೋಣ. ಮಾನ್ಯ ಸದಸ್ಯರು ನಮಗೆ ಇರುವ ಹಣದ ಮುಗ್ಗಟ್ಟಿನಲ್ಲಿ ಕಡಮೆ ಮಾಡುವುದು ಸೂಕ್ತವೇ ಎನ್ನುವುದನ್ನು ಯೋಚನೆ ಮಾಡಬೇಕು. ಟ್ರ್ಯಾಕ್ಟರುಗಳ ಮತ್ತು ಬುಲ್‌ಡೋಜರ್‌ಗಳ ಉಪಯೋಗ ಹೊಂದುತ್ತಿರುವುದು ನೂರಕ್ಕೆ ತೊಂಬತ್ತು ಜನ ಕೊಡುವುದಕ್ಕೆ ಶಕ್ತಿ ಇರುವವರು ಯಾರಿಗೆ ಕೊಡತಕ್ಕ ಶಕ್ತಿಯಿದೆಯೋ ಅವರು ಉಪಯೋಗಿಸುತ್ತಾರೆ. ಕೊಡುವುದಕ್ಕೆ ಶಕ್ತಿಯಿಲ್ಲದೆ ಇರುವವರು ಉಪಯೋಗಿಸುವುದಿಲ್ಲ. ಇದರಿಂದ ಲಾಭ ಮಾಡಬೇಕೆಂದು ಏನೂ ಇಲ್ಲ. ಅಲ್ಪಸ್ವಲ್ಪ ಲುಕ್ಸಾನಾಗಿದೆ. ಹಿಂದೆ ಬಹಳ ಲುಕ್ಸಾನಾಗಿದೆ. ಸಾರ್ವಜನಿಕರ ರೆವಿನ್ಯೂ ಖಾತೆಯಿಂದ ಇಷ್ಟು ದುಡ್ಡನ್ನು ಖರ್ಚು ಮಾಡಿದ್ದೇವೆ ಎಂದು ನೋವಾಗಿದೆ. service at cost ಮಾಡಬೇಕು ಎಂದು ಇದೆ. ಡಿಪ್ರಿಸಿಯೇಷನ್ ಎಷ್ಟು ; ಸಂಬಳ, ರಿಪೇರಿ, ಎಷ್ಟಾಗುತ್ತದೆ ಎಂಬುದನ್ನು ಕಂಡುಹಿಡಿದು ರೇಟನ್ನು ನಿಗದಿ ಮಾಡಿದ್ದೇವೆ ಆದ್ದರಿಂದ ಸರ್ಕಾರಕ್ಕೆ ಸ್ವಲ್ಪ ಲುಕ್ಸಾನು ಆಗುತ್ತದೆ ಯೆಂದು ಕಾಣುತ್ತದೆ. ಯಾವ ಕಡೆ ಹೋದರೂ ಟ್ರ್ಯಾಕ್ಟರುಗಳು ಬೇಕು, ಬುಲ್‌ಡೋಜರ್‌ಗಳು ಬೇಕು ಎಂದು ಜನರು ಹೇಳುತ್ತಾರೆ ; ಒಪ್ಪುತ್ತೇನೆ. ಅವನ್ನು ರಿಪೇರಿ ಮಾಡಿಬಿಟ್ಟು ಜಾಗ್ರತೆ ಕೊಡಬೇಕು ಎಂದು ಇದ್ದೇವೆ. ಇವುಗಳ ಉಪಯೋಗದಿಂದ, ಬಹಳ ಭಾಗದ ಅನುಪಯೋಗ ಜಮೀನನ್ನು ಅಭಿವೃದ್ಧಿಗೆ ತರುವುದಕ್ಕೆ ಸಾಧ್ಯ.

ಒಬ್ಬ ಸದಸ್ಯರು.—ಬಿಜಾಪುರದಲ್ಲಿ ಈಗ ಇರುವುದಕ್ಕಿಂತಲೂ ಐದು ರೂಪಾಯಿ ಕಡಮೆ ಮಾಡಬೇಕೆಂದು ಒಂದು ಠರಾವನ್ನು ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಇರುವ ವಿಷಯಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ತಮ್ಮ ಸಲಹೆಯ ಮೇರೆ ಸರ್ಕಾರ ನಡೆಯುವುದು. ಈಗಾಗಲೇ ಖೋತಾ ಬಡ್ಜೆಟ್ಟು ಇದೆ. ಇನ್ನೂ ಲುಕ್ಸಾನು ಮಾಡಿ ನಡೆಸಬೇಕೆಂದು ಹೇಳುತ್ತಿದ್ದೀರಿ. ಇನ್ನು ಕಬ್ಬಿಣದ ಸಾಮಾನು ಮತ್ತು ಮರದ ಸಾಮಾನು ಸರಿಯಾಗಿ ಒದಗುತ್ತಿಲ್ಲವೆಂದು ಹೇಳಿದರು. ಮೈದಾನ ಪ್ರದೇಶಗಳಲ್ಲಿ ತಮಗೆ ಬೇಕಾದ ಮರಗಳನ್ನು ನಾವೇ ಬೆಳೆಸುತ್ತಿದ್ದೇವೆ. ತಮಗೆ ಬೇಕಾದ ಮರಮುಟ್ಟುಗಳನ್ನು ತಯಾರಿಸುತ್ತಿದ್ದೇವೆ. ಫಾರೆಸ್ಟ್ ಇಲಾಖೆಯವರು ತಾಲ್ಲೋಕುಗಳಲ್ಲಿ ಒಂದೊಂದು ಡಿಪೋ ಓಪನ್ ಮಾಡಿ ವ್ಯವಸಾಯಕ್ಕೆ ಬೇಕಾದ ಮರಮುಟ್ಟುಗಳನ್ನು ಲಾಭವಿಲ್ಲದೆ ಲುಕ್ಸಾನಾಗದ ರೀತಿಯಲ್ಲಿ ಮಾರುವಂತೆ ಆಲೋಚನೆ ಮಾಡಿದ್ದೇವೆ. ತಮ್ಮ ಸಲಹೆಯನ್ನು ಸ್ವೀಕಾರ ಮಾಡಿದ್ದೇವೆ.

ಶ್ರೀ ಡಿ. ಎಚ್. ರುದ್ರಪ್ಪ (ಕಡೂರು).—ವ್ಯವಸಾಯಕ್ಕೆ ಬೇಕಾದ ಮರ ಮುಟ್ಟುಗಳನ್ನು ತರಲು ಮಾಫಿ ಲೈಸನ್ಸ್ ಕೊಡುವುದು ಒಳ್ಳೆಯದು.

ಶ್ರೀ ಎಚ್. ಎಸ್. ರುದ್ರಪ್ಪ.—ಫಾರೆಸ್ಟ್ ಇಲಾಖೆಯ ಆಡಳಿತದಲ್ಲಿ ಸರಿಯಾಗಿ ಬಂದೋಬಸ್ತು ಮಾಡದೆ ಇದ್ದರೆ ಅರಣ್ಯದಲ್ಲಿ ಮರ ಉಳಿಯುವುದಿಲ್ಲ. ವ್ಯವಸಾಯಕ್ಕೆ ಕಬ್ಬಿಣ ಉಪಯೋಗಿಸುವಂಥ ಸಂದರ್ಭ ಬರುತ್ತದೆ. ಮಾಫಿ ಲೈಸನ್ಸ್ ತೆಗೆದುಕೊಳ್ಳುವುದು ಎಷ್ಟರ ಮಟ್ಟಿಗೆ ಸೂಕ್ತ ಎನ್ನುವ ವಿಚಾರದಲ್ಲಿ ಒಂದು ಕಮಿಟಿಯನ್ನು ಮಾಡುವ ಇಚ್ಛೆ ಇದೆ. ಮಾಫಿ ಲೈಸನ್ಸ್ ಕೊಡುವುದಕ್ಕಿಂತ ಅಲ್ಲಲ್ಲಿ ಡಿಪೋ ಮಾಡುವುದು ಸೂಕ್ತ ಎಂದು ಕಂಡುಬಂದಿದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಗಾಡಿ ಸಾಮಾನುಗಳನ್ನು ಮಾರಲು ಸೊಸೈಟಿಗೆ ಕೊಡಿ.

ಶ್ರೀ ಕೆ. ಕೆಂಚಪ್ಪ.—ಈಗ ರೈತರು ಸತ್ಯವಂತರಾಗಿದ್ದಾರೆ. ಅವರಲ್ಲಿ ನಂಬಿಕೆ ಇದೆ. ಅವರು ಡಿಪೋಗಳಲ್ಲಿ ಸಾಮಾನು ಇಲ್ಲದೆ ಬ್ಲಾಕ್‌ಮಾರ್ಕೆಟ್ಟಿನಲ್ಲಿ ತರಲು ಹೋಗುತ್ತಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ತಾವು ಸಲಹೆ ಹೇಳಿ ; ಯೋಚನೆ ಮಾಡುತ್ತೇನೆ.

ಆಮೇಲೆ ಕಬ್ಬಿಣದ ವಿಚಾರ ಹೇಳಿದರು. ಹಿಂದಿನ ವರ್ಷ ಅಷ್ಟು ಕಷ್ಟವಿರಲಿಲ್ಲ. ನಾವು ತಯಾರು ಮಾಡುವ ಕಬ್ಬಿಣ ಬಹುಶಃ ಇಂಡಿಯಾ ದೇಶಕ್ಕೆ ಬೇಕಾಗುವುದರಲ್ಲಿ 1/6 ಭಾಗ ನಮ್ಮ ಭಾರತ ದೇಶದಲ್ಲಿ ತಯಾರಾಗಬಹುದು. ಆದ್ದರಿಂದ ಉಳಿದ ಭಾಗ ಹೊರದೇಶದಿಂದ ಬರಬೇಕಾಗುತ್ತದೆ; ಇಂಡಿಯಾ ಸರ್ಕಾರದವರು ಹೊರಗಿನಿಂದ ತರಿಸಿ ಸಾಲದುದನ್ನು ಒದಗಿಸುತ್ತಿದ್ದಾರೆ. ಈಗ ಎಕ್ಸ್‌ಛೇಂಜ್ ಡಿಫಿಕಲ್ಟೀಸ್ ಹೆಚ್ಚಿ ಸ್ವಲ್ಪ ಕಷ್ಟವಾಗಿದೆ. ಆ ದೃಷ್ಟಿಯಿಂದ ಎಷ್ಟು ಕಬ್ಬಿಣ ಒದಗಿಸುತ್ತಿದ್ದರೋ ಅಷ್ಟನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಬಿ. ರಾಚಯ್ಯ.—ಹಳೆಯ ಮೈಸೂರಿನಲ್ಲಿ ವ್ಯವಸಾಯದ ಇಲಾಖೆಯ ಗೋಡೌನಿನಲ್ಲಿದ್ದ ಉಪಕರಣಗಳು ತುಕ್ಕು ಹಿಡಿಯುತ್ತಿವೆ. ಆದ್ದರಿಂದ ಮಾರ್ಕೆಟ್ ಬೆಲೆಗಿಂತ ಕಡಮೆ ಬೆಲೆಗೆ ಮಾರಬೇಕಾದ ಪರಿಸ್ಥಿತಿಯಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಹೋದ ಸಲ ಕೊಡುತ್ತಿದ್ದ ಹಾಗೆ ಕಬ್ಬಿಣ ಒದಗಿಸುವುದಕ್ಕೆ ಕಷ್ಟವಾಗಿದೆ. ಕಬ್ಬಿಣಕ್ಕೆ ಸಂಬಂಧಪಟ್ಟವರೊಡನೆ ಚರ್ಚೆ ಮಾಡಿದ್ದೇನೆ. ಈಗ ಒಂದೇ ಸಲ ಆಮದು ಮಾಡುವುದು ಕಷ್ಟ, ಹಣದ ವ್ಯವಸ್ಥೆಯಿಂದ ಮೂರುತಿಂಗಳಿಗೊಂದು ಸಲ ಹಂಚುತ್ತೇವೆ ಎಂದು ಹೇಳುತ್ತಾರೆ. ಆದರೆ ಅದು ಸಾಕಾಗದೆಂಬುದು ಗೊತ್ತಿದೆ, ಈ ವರ್ಷ ತೊಂದರೆಯಾಗಿದೆ ; ಹೋದ ವರ್ಷ ಅಷ್ಟು ತೊಂದರೆಯಾಗಿರಲಿಲ್ಲ. ನಾವು ಎಲ್ಲಾ ಸೊಸೈಟಿಗಳಿಗೂ ಕೊಟ್ಟೆವು. ಕೆಲವು ಸೊಸೈಟಿಗಳವರು ತರಿಸಿಕೊಳ್ಳದೆ ಬಹಳವಾಗಿ ಉಳಿದು ಲ್ಯಾಪ್ಸ್ ಆಯಿತು. ನಾನು ಬಂದ ಕೂಡಲೆ ಇದು ಗೊತ್ತಾಯಿತು. ಮುಂದೆ ಕಷ್ಟ ಬರಬಹುದೆಂದು ಇಲಾಖೆಯ ಮೂಲಕ ಒಂದು ಸಾವಿರ ಚಿಲ್ಲರೆ ಟನ್ ಕೊಂಡು ದಾಸ್ತಾನಿಟ್ಟುಕೊಂಡು ಅದರ ಮೂಲಕ ವ್ಯವಹಾರ ಮಾಡಿದ್ದೇವೆ, 700 ಚಿಲ್ಲರೆ ಟನ್ ಮೂರು ತಿಂಗಳಿಗೆ ವ್ಯವಹಾರ ಮಾಡಿದ್ದೇವೆ. ಸಂಬಂಧಪಟ್ಟ ಮಂತ್ರಿಗಳೊಡನೆ ಮತ್ತು ಆಮದು ಮಾಡಿಕೊಳ್ಳುವವರೊಡನೆ ವಿಚಾರ ಮಾಡಲಾಗಿ, ಬಹಳ ಕಷ್ಟವಾಗಿದೆ, ಈ ವರ್ಷ ಸ್ವಲ್ಪ ತೊಂದರೆಯಿದೆ ಎಂದು ಹೇಳಿದರು. ಆಮದಿಗೆ ತೊಂದರೆಯಿರುವುದರಿಂದ ಸ್ವಲ್ಪ ತೊಂದರೆಯಾಗಿದೆ ; ಸಾಧ್ಯವಾದಷ್ಟು ಅದನ್ನು ನಿವಾರಿಸುತ್ತೇವೆ

ಆಮೇಲೆ ಪೈರಿಗೆ ರೋಗ ಬರುತ್ತದೆ. ಅನೇಕ ಸಾರಿ ಬಂತು. ಸರಿಯಾದ ಕ್ರಮ ಕೈಕೊಂಡು ತಪ್ಪಿಸಬೇಕು ಎಂದು ಹೇಳಿದರು. ಅದು ನನಗೂ ಗೊತ್ತಿದೆ. ಅನೇಕ ಕಡೆ ರೋಗ ಬರುತ್ತದೆ. ಅದನ್ನು ತಡೆಗಟ್ಟಲು ಬೇಕಾದ ಸಿಬ್ಬಂದಿ, ಔಷಧ ಒದಗಿಸುವುದಕ್ಕೆ ವ್ಯವಸಾಯದ ಬಾಬಿನಲ್ಲಿ ಅನೇಕವಾಗಿ ಹಣ ನಷ್ಟವಾಗಿದೆ. ಅದಕ್ಕೇನು ಏರ್ಪಾಡು ಮಾಡಬೇಕೆಂದು ಸಲಹೆ ನೀಡಿದ್ದಾರೆ. ಅದರಂತೆ ಮಾಡಲು ಪ್ರಯತ್ನಪಡುತ್ತೇವೆ.

(ಶ್ರೀ ಎಚ್. ಎಸ್. ರುದ್ರಪ್ಪ)

ಇನ್ನು ರೈತರಿಗೆ ಮುಖ್ಯವಾಗಿ ಬೇಕಾದ ಹಣ ಸಹಾಯ ಕೊಡಬೇಕು; ಅದಕ್ಕೆ ತಕ್ಕ ವ್ಯವಸ್ಥೆ ಮಾಡ ಬೇಕು ಎಂದು ಹೇಳಿದ್ದಾರೆ. ಇದು ಬಹು ಕಷ್ಟವಾದ ವಿಷಯವೆಂದು ಕಾಣುತ್ತದೆ. ತಾವೂ ನಾವೂ ಬಹಳ ದಿವಸಗಳಿಂದ ಇದನ್ನು ಯೋಚನೆ ಮಾಡುತ್ತಲೇ ಇದ್ದೇವೆ. ಅನೇಕ ರೀತಿಯಲ್ಲಿ ಹಣ ಒದಗಿಸಬೇಕೆಂಬ ಪ್ರಯತ್ನವಿದೆ, ಸಾರ್ಥಕವಾಗಿಲ್ಲ. ಹಣ ಒದಗಿಸು ವುದು ಬಹಳ ಕಷ್ಟ; ತೊಂದರೆ ಗೊತ್ತಿದೆ. ಈಗ ಅದಕ್ಕಾಗಿ ಇಂಡಿಯಾ ಸರ್ಕಾರದವರು ರಿಸರ್ವ್ ಬ್ಯಾಂಕ್ ಕಡೆಯಿಂದ ಅಲ್ಪಾವಧಿ ಸಾಲ ಕೊಡಿಸಲು ಪ್ರಯತ್ನ ಮಾಡಿದ್ದಾರೆ, ಬೇಕಾದಷ್ಟು ಸಿಕ್ಕುತ್ತದೆ. ನಮ್ಮ ಡಿಸ್ಟ್ರಿಕ್ಟಿಗೆ ಹೋದ ವರ್ಷ 17 ಲಕ್ಷ ರೂಪಾಯಿ ಗಳನ್ನು ಕೊಟ್ಟಿದೆ. ಖಾಸಗಿ ಜನರು ನಾಲ್ಕೈದು ಗ್ರಾಮಗಳಿಗೆ ಸೊಸೈಟಿ ಮಾಡಿಕೊಂಡರೆ ಒಳ್ಳೆಯದು. ನಿರ್ಬಂಧ ಯಾರಿಗೂ ಇಲ್ಲ. ಅರ್ಜಿ ಹಾಕಿದರೆ ಕೊಡು ತ್ತೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ; ಪರಿಸ್ಥಿತಿ ಹೀಗಿದೆ. ಅನೇಕ ಕಡೆ ಸೊಸೈಟಿಯಿಲ್ಲ, ಕೆಲವು ಕಡೆ ಕೇಳಿದ್ದಾರೆ. ಎಲ್ಲಾ ಜನರೂ ಆಸಕ್ತಿ ವಹಿಸಿ, ಇಲ್ಲಿ ನಾವೂ ಖಾಸಗಿ ಜನರೂ ಆಸಕ್ತಿ ವಹಿಸಿ ಕೆಲಸ ಮಾಡಿ ದರೆ ಒಳ್ಳೆಯದು. ಹಾಗೆ ಮಾಡಿದರೆ ಬಹಳ ಅನು ಕೂಲವಾಗುತ್ತದೆ.

ಆಮೇಲೆ, ಸರ್ಕಾರದವರು ತಕಾವಿ ಸಾಲ ಕೊಡು ತ್ತಿದ್ದರು; ಅದನ್ನು ಈಗ ಕಡಮೆ ಮಾಡಿದ್ದಾರೆಂದು ಶ್ರೀ ವೆಂಕಟೇಗೌಡರು ಹೇಳಿದರು. ಇದರಲ್ಲಿ ನಮಗೆ ನಂಬಿಕೆ ಕಡಮೆಯಾಗಿದೆ. ಆದುದರಿಂದ ತಕಾವಿ ಸಾಲ ಕೊಡುವುದನ್ನು ಕಡಮೆ ಮಾಡಿ, ಸೊಸೈಟಿಗಳ ಮೂಲಕ ಕೊಡುವ ಏರ್ಪಾಡು ಮಾಡಿದ್ದೇವೆ. ನಿಮ್ಮ ಕೇಳಿಕೆ ಎಷ್ಟಿದೆಯೋ ಅಷ್ಟನ್ನೂ ಕೊಡುವುದಕ್ಕೆ ತಯಾರಿದ್ದೇವೆ. ಆದುದರಿಂದ ಸೊಸೈಟಿಗಳನ್ನು ಮಾಡಿಕೊಂಡು ಕೆಲಸ ಮಾಡುವುದು ಉತ್ತಮವೆಂದು ಹೇಳುತ್ತೇನೆ. ಹೀಗೆ ಮಾಡಿದರೆ ನಿಮಗೆ ಏನು ಡಿಮ್ಯಾಂಡ್ ಇದೆಯೋ ಅದನ್ನು meet ಮಾಡುವುದಕ್ಕೆ ತಯಾರಿದ್ದೇವೆ.

ಶ್ರೀ ಎಸ್. ಆರ್. ರಾಮಯ್ಯ (ಹೊಸಕೋಟೆ).—ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾ ಗಿದೆ. ಸೊಸೈಟಿಗಳ ಮುಖೇನ ಅಲ್ಪಕಾಲಾವಧಿ ಸಾಲ ವನ್ನು ರೈತರಿಗೆ ಕೊಡುತ್ತಿರುವ ವಿಚಾರದಲ್ಲಿ ಈಗ ಸ್ವಲ್ಪ ತೊಂದರೆಯಾಗಿದೆ. ಯಾವುದೇ ಆಗಲಿ ಪ್ರಾರಂಭ ವಾದಾಗ ಚೆನ್ನಾಗಿರುತ್ತದೆ. ನಡೆಯುತ್ತ ನಡೆಯುತ್ತ ಕಷ್ಟವಾಗುತ್ತದೆ. ಈ ವರ್ಷ ರೈತರಿಗೆ ಸೊಸೈಟಿಗ ಳಿಂದ ಸಕಾಲದಲ್ಲಿ ಸಾಲ ದೊರೆತಿಲ್ಲ. ಸಣ್ಣ ಸಣ್ಣ ಹಳ್ಳಿಗಾಡಿನ ಸೊಸೈಟಿಗಳಿಂದ ಬಂದಂಥ ಸಾಲದ ಅರ್ಜಿ ಗಳೆಲ್ಲ ಮಂಜೂರಾಗದೆ ಇರುವುದರಿಂದ, ಬೇಸಾಯ ಕಾಲ ಬಂದರೂ ಇನ್ನೂ ಸಾಲ ದೊರೆತಿಲ್ಲ. ಅಪೆಕ್ಸ್ ಬ್ಯಾಂಕಿನವರು ಲಕ್ಷ್ಯ ಕೊಡುತ್ತಿಲ್ಲ. ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕು ಎಂದು ಕೇಳುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ತಡವಾಗುವುದಕ್ಕೆ ಕಾರಣವಿದೆ. ರಿಜಿಸ್ಟ್ರೇಷನ್ ಫೀ ವಗ್ಯೆರೆ ವಜಾ ಆಗ ಬೇಕಾಗಿತ್ತು. ಇದರಿಂದ ಸಾಲಗಳು ಮಂಜೂರಾಗಲು ನಿಧಾನವಾಯಿತೇ ಹೊರತು ಮತ್ತೆ ಯಾವ ಕಾರಣ ದಿಂದಲೂ ಅಲ್ಲ. ಸರ್ಕಾರದವರು ಈಗ ಇದನ್ನೆಲ್ಲ ವಜಾ ಮಾಡಿರುವುದರಿಂದ ಇನ್ನು ಮುಂದೆ ತಡವಾಗು ವುದಿಲ್ಲ.

ಮಧ್ಯವರ್ತಿ ಸಾಲಗಳನ್ನು ಸಹ ಕೊಡಬೇಕೆಂದಿ ದ್ದಾರೆ, ಸರ್ಕಾರದವರು. ಈ ವಿಷಯ ತಮಗೆಲ್ಲ ಗೊತ್ತು. ಇಲಾಖೆಯಲ್ಲಿ ದಕ್ಷತೆ ಕಡಮೆ ಇದೆ ಎಂದು ಒಂದು ವಿಷಯವನ್ನು ಹೇಳಿದರು. ಜನಗಳು ಎಷ್ಟು ಆಸಕ್ತಿ ವಹಿಸಬೇಕೋ ಅಷ್ಟು ವಹಿಸುತ್ತಿಲ್ಲವೆಂದು ತಾವುಗಳು ಹೇಳಿರತಕ್ಕದ್ದರಲ್ಲಿ ನಿಜಾಂಶವಿದೆ ಎಂದು ತಿಳಿದುಕೊಂಡಿದ್ದೇನೆ. ಅದನ್ನು ಸ್ವಲ್ಪ ಸರಿಪಡಿಸ ಬೇಕು. ಮೆಷಿನರಿ ಏನಿದೆ ಅದು ನಡೆಯುತ್ತಿದೆ. ಅದು ಇನ್ನೂ ಚೆನ್ನಾಗಿ ನಡೆಯುವಂತೆ ನಾವೂ ನೀವೂ ಕೆಲಸ ಮಾಡಬೇಕು. ಇದರಲ್ಲಿ ಅನೇಕ ಕುಂದು ಕೊರತೆಗಳಿವೆ ಎಂದು ನಮಗೆ ಗೊತ್ತು. ಅಧಿಕಾರಿ ಗಳು ಹಳ್ಳಿಗಳಿಗೆ ಹೋಗುತ್ತಿಲ್ಲ; ತಪ್ಪು ಡೈರಿ ಬರೆಯು ತ್ತಿದ್ದಾರೆಂದು ಅನೇಕರು ಹೇಳಿದ್ದಾರೆ. ಕೆಲವರು ಆ ರೀತಿ ಇರಬಹುದು; ಅಷ್ಟೇ ಹೊರತು ಬೇರೇನೂ ಇಲ್ಲ. ಬಹುಶಃ ಯಾರೂ ದ್ವೇಷದಿಂದ ಹೇಳಿದ್ದಾರೆಂದು ಭಾವನೆ ಮಾಡಿಕೊಳ್ಳುತ್ತಿಲ್ಲ. ಇದಕ್ಕೆ ಸೂಕ್ತವಾದ ಸಲಹೆಯನ್ನೂ ಕೊಟ್ಟಿದ್ದಾರೆ. ಇವರುಗಳು ಕೆಲಸ ವನ್ನು ಎಷ್ಟರಮಟ್ಟಿಗೆ ಮಾಡುತ್ತಾರೆ ಎಂದು ಮೇಲ್ಪಟ್ಟ ಅಧಿಕಾರಿಗಳು ಚೆಕ್‌ಮಾಡಿ ಸರ್ಕಾರಕ್ಕೆ ರಿಪೋರ್ಟ್ ಕಳುಹಿಸಬೇಕು ಎಂದು ಸೂಚನೆಯನ್ನು ಕೊಟ್ಟಿದ್ದೇವೆ. ಇನ್ಸ್‌ಪೆಕ್ಟರು, ಅಸಿಸ್ಟೆಂಟ್ ಡೈರೆ ಕ್ಟರ್ ಮತ್ತು ಡೈರೆಕ್ಟರ್ ಇವರುಗಳು ಸರಿಯಾಗಿ ಚೆಕ್ ಮಾಡಿ ಕಳುಹಿಸಬೇಕೆಂದು ಮಾಡಿದ್ದೇವೆ. ನಮ್ಮ ಆಫೀಸರುಗಳು ಕೆಲಸ ಮಾಡಿದುದು ಎಲ್ಲರಿಗೂ ತಿಳಿ ಯುವಂತೆ ಮಾಡುವುದಕ್ಕೋಸ್ಕರ. ಹಿಂದೆ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿ ಎಂದು ಇದ್ದ ರೀತಿಯಲ್ಲಿಯೇ ಈಗಲೂ ಒಂದು ಕಮಿಟಿಯನ್ನು ಮಾಡಿದರೆ ಎಲ್ಲ ಇಲಾಖೆಯವರೂ ತಮ್ಮ ಇಲಾಖೆಗಳಲ್ಲಿ ಏನೇನು ಕೆಲಸ ನಡೆಯುತ್ತಿದೆ ಎಂದು ತಿಂಗಳಿಗೊಂದು ಸಲ ಅಥವಾ ಎರಡು ತಿಂಗಳಿಗೊಂದು ಸಲ ಕಮಿಟಿಯಲ್ಲಿ ವರದಿ ಮಾಡಿದರೆ, ಅದರಲ್ಲಿ ಏನಾದರೂ ಲೋಪದೋಷ ಗಳಿದ್ದರೆ ಅದನ್ನು ಸರಿಪಡಿಸುವುದಕ್ಕೆ ಅವಕಾಶವಾಗು ತ್ತದೆ ಎಂದು ಕಾಣುತ್ತದೆ. ಅಂಥ ಕಮಿಟಿಗಳನ್ನು ಮಾಡುವುದು ಬಹಳ ಸೂಕ್ತವೆಂದು ನನಗನ್ನಿಸುತ್ತದೆ. ನನ್ನನ್ನು ನೀವು ಯಾರೂ ಕೇಳುವುದಿಲ್ಲವೆಂದರೆ, ನಾನು ಮಲಗಿಕೊಳ್ಳುತ್ತೇನೆ, ಕೆಲಸ ಮಾಡುವುದಿಲ್ಲ. ನಾವು ಸತ್ಯವಂತರು ಎಂದು ಹೇಳುತ್ತಿಲ್ಲ. . . .

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸುಮ್ಮನೆ ಕಮಿಟಿ ಗಳನ್ನು ಮಾಡಬೇಡಿ. ಅವರಿಗೆಲ್ಲ ದುಡ್ಡು ಕೊಡಬೇ ಕಾಗುತ್ತದೆ. ಆದುದರಿಂದ ಕಮಿಟಿಗಳು ಬೇಡ.

ಶ್ರೀ ಎಚ್. ಎಸ್. ರುದ್ರಪ್ಪ.—ಒಂದು ಸಲಹೆಯನ್ನು ತಮ್ಮ ಮುಂದಿಟ್ಟಿದ್ದೇನೆ. ದೇಶದಲ್ಲಿ ನೌಕರರು ಏನು ಕೆಲಸ ಮಾಡಿದರೋ ಏನು ಬಿಟ್ಟರೋ ಎಂದು ತಾವೆಲ್ಲ ಆಕ್ಷೇಪಣೆ ಮಾಡುತ್ತೀರಿ. ಇದಕ್ಕೆ ಒಂದು ಚೆಕ್ ಇರಬೇಕು. ಕೆಲಸ ಮಾಡಿದ್ದಾರೆಂದು ವರದಿ ಬಂದರೆ ಅದನ್ನು ತಾವು ಒಪ್ಪುವುದಿಲ್ಲ. ಇದಕ್ಕೆ ಮಧ್ಯವರ್ತಿ ಯಾದ ಒಂದು ರೀತಿಯ ಏರ್ಪಾಡು ಮಾಡಿ, ಸರಿಯಾಗಿ ಕೆಲಸ ಮಾಡುವ ಹಾಗೆ ಮಾಡಬೇಕೆಂದು ನಮ್ಮ ಇಚ್ಛೆ ಇದೆ. ಡಿಸ್ಟ್ರಿಕ್ಟ್‌ನಲ್ಲಿಯಾದರೂ ಒಂದು ಕಮಿಟಿ ಮಾಡ ಬೇಕು ಎಂದು ಇಚ್ಛೆ ಇದೆ. ಈಗ ಮುಖ್ಯವಾಗಿ ಹೆಚ್ಚು ಆಹಾರದ ಉತ್ಪತ್ತಿ ಆಗಿಲ್ಲವೆಂದು ಹೇಳಿದರು..

Sri U. M. MADAPPA (Chamarajanagar).—Regarding committees, is it not a fact that there are Agricultural unions in each taluk? Why don't you make use of these unions?

ಶ್ರೀ ಎಚ್. ಎಸ್. ರುದ್ರಪ್ಪ.—ಮುಂದೆ ಈ ವಿಷಯಕ್ಕೆ ಬಂದಾಗ ಹೇಳುತ್ತೇನೆ. ಈಗ ದೇಶದಲ್ಲಿ ಎಷ್ಟು ಆಹಾರ ಬೆಳೆಯಬೇಕೋ ಅಷ್ಟು ಬೆಳೆದಿಲ್ಲ ವೆಂದು ಹೇಳಿದರು. ಬೆಳೆದೇ ಇಲ್ಲವೆಂದು ಹೇಳಿದರೆ

ಸತ್ಯಕ್ಕೆ ದೂರವಾದ ಮಾತಾಗುತ್ತದೆ. ಎಷ್ಟು ಬೆಳೆಯಬೇಕೋ ಅಷ್ಟು ಬೆಳೆದಿಲ್ಲವೆಂದರೆ, ಒಪ್ಪುತ್ತೇನೆ. ಇದಕ್ಕೆ ಕೆಲವು ಅಡ್ಡಿ ಆತಂಕಗಳಿವೆ. . . .

ಶ್ರೀ ಟಿ. ಆರ್. ಪರಮೇಶ್ವರಯ್ಯ (ತರೀಕೆರೆ).—ಸಹಕಾರ ಸಂಘಗಳಲ್ಲಿ ಆಡಿಟ್ ಮಾಡಿದಾಗ ಹೆಚ್ಚು ಕಡಮೆಯಾಗಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಸ್. ರುದ್ರಪ್ಪ.—ಅದನ್ನು ವಿಚಾರಣೆ ಮಾಡುತ್ತೇನೆ. ಆಹಾರ ಬೆಳೆ ಹೆಚ್ಚಾಗಿಲ್ಲವೆಂದು ಚಿಕ್ಕನಾಯಕನಹಳ್ಳಿಯ ಶ್ರೀ ಶೆಟ್ಟರು ಹೇಳಿದರು, ಇದು ನಿಜ. ಪ್ರಾಂತ ಸರ್ಕಾರಗಳು 3,700 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಆದರೂ ಆಹಾರ ಬೆಳೆ ಹೆಚ್ಚುಮಾಡಿಲ್ಲವೆಂದು ಹೇಳಿದರು.

Sri C. K. RAJAIAH SETTY.—I said it is the out lay of the first year plan. It may be a little less. I never said that all this amount was used only for food production.

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗಲ್ಲ. ತಾವು ಹೇಳಿರತಕ್ಕದ್ದು ಸತ್ಯಕ್ಕೆ ಬಹಳ ದೂರವಾದಂಥ ಮಾತು. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ 3,700ಕೋಟಿ ರೂಪಾಯಿಗಳನ್ನೂ ಹೆಚ್ಚು ಆಹಾರೋತ್ಪನ್ನಕ್ಕಾಗಿ ಖರ್ಚುಮಾಡಲಾಯಿತೆಂದು ಹೇಳಿದ್ದೀರಿ. ಆದರೆ ಪ್ರಥಮ ಪಂಚವಾರ್ಷಿಕಯೋಜನೆಯ ಎಲ್ಲಾ ಬಾಬುಗಳ ವೆಚ್ಚವೂ ಒಟ್ಟು ಸೇರಿದರೆ 2,600 ಕೋಟಿ ರೂಗಳಾಗುತ್ತದೆ. ಹೀಗಿರುವಾಗ ತಾವು ಹೇಳಿರತಕ್ಕ ಮಾತು ಸತ್ಯಾಂಶಕ್ಕೆ ಎಷ್ಟುದೂರವಾಗಿರುತ್ತನೆಂಬುದನ್ನು ತಾವೇ ನೋಡಿ. ತಾವು ಬೇಕಾಗಿದ್ದರೆ ತಮ್ಮ ಭಾಷಣದ ಪ್ರತಿಯನ್ನು ತೆಗೆಸಿ ಓದಿನೋಡಿದರೆ ಆಗ ವಿಚಾರ ತಮಗೇ ಗೊತ್ತಾಗುತ್ತದೆ. ಅಷ್ಟೇ ಅಲ್ಲದೆ ತಾವು ತಮ್ಮ ಭಾಷಣದಲ್ಲಿ ಹಾಗೆ 3,700 ಕೋಟಿ ರೂಪಾಯಿಗಳನ್ನು ಈ ಒಂದು ಆಹಾರೋತ್ಪನ್ನದ ಬಾಬಿಗೆ ಖರ್ಚುಮಾಡಿದ್ದಾಗ್ಯೂ ದೇಶದಲ್ಲಿ ಆಹಾರದ ಉತ್ಪತ್ತಿಯೇನೂ ಜಾಸ್ತಿಯಾಗಿರುವುದಿಲ್ಲ ಎಂದು ಹೇಳಿರುತ್ತೀರಿ. ಈ ಮೊಬಲಗನ್ನೆಲ್ಲಾ ಖರ್ಚುಮಾಡಿರುವುದು ಕೇಂದ್ರ ಸರ್ಕಾರ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 600 ಕೋಟಿ ರೂಪಾಯಿಗಳು ಮಾತ್ರ ಆಹಾರೋತ್ಪತ್ತಿಗೆ ಖರ್ಚಾಗಿರುತ್ತದೆ. ಆದರೆ ನಿಮ್ಮ ಹೇಳಿಕೆ ಸತ್ಯಾಂಶಕ್ಕೆ ದೂರವಾದದ್ದು, ಆದರೆ ನೀವು ನಮ್ಮ ಅಂದಾಜು ಪ್ರಕಾರ ಎಷ್ಟುಧಾನ್ಯಗಳ ಉತ್ಪತ್ತಿ ಜಾಸ್ತಿಆಗಬೇಕಾಗಿತ್ತೋ ಅಷ್ಟಾಗಿಲ್ಲವೆಂದು ಹೇಳಿದ್ದಿದ್ದರೆ ಆಗ ನಾನು ಕೂಡ ನಿಮ್ಮ ಅಭಿಪ್ರಾಯವನ್ನು ಅನುಮೋದಿಸುತ್ತಿದ್ದೆನು. ಆದರೆ ತಾವು ಆ ರೀತಿ ಹೇಳಲಿಲ್ಲ. ನಮ್ಮಲ್ಲಿ ಇತ್ತೀಚೆಗೆ ಆಹಾರಧಾನ್ಯಗಳ ಉತ್ಪತ್ತಿ ಬಹಳವಾಗಿ ಹೆಚ್ಚಿದೆ. ಇದು ಕೇವಲ ಒಂದು ಪ್ರಾಂತಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಇದು ಅಖಿಲಭಾರತಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಕಂಟ್ರೋಲ್ ಬರುವುದಕ್ಕೆ ಮುಂಚೆ ನಮ್ಮ ದೇಶದಲ್ಲಿ ಎಷ್ಟು ಆಹಾರ ಧಾನ್ಯಗಳ ಬೆಳೆಯಾಗುತ್ತಿತ್ತು, ಏನೂ ಎಂಬ ಲೆಕ್ಕಗಳೇ ಸಿಕ್ಕುತ್ತಿರಲಿಲ್ಲ. ಅಂಥ ಪರಿಸ್ಥಿತಿ ಇದ್ದಾಗ ನಮ್ಮಲ್ಲಿ ಆಹಾರಧಾನ್ಯಗಳ ಬೆಳೆ ಹೆಚ್ಚಾಗಿದೆ ಎಂದಾದರೂ ಹೇಳಬಹುದು- ಅಥವಾ ಬೆಳೆಯೇ ಆಗಿಲ್ಲವೆಂದು ಬೇಕಾದರೂ ಹೇಳಬಹುದು. ಆದರೆ 1943ರಿಂದ ಇತ್ತೀಚೆಗೆ ಆಹಾರ ಪರಿಸ್ಥಿತಿ ಬಹಳ ಉತ್ತಮಗೊಳ್ಳುತ್ತಾ ಬಂದಿದೆ. ಅದಕ್ಕೆ ಹಿಂದೆ ಬಹಳ ಶೋಚನೀಯಸ್ಥಿತಿಯಿತ್ತು. ಯಾವಾಗ ನಮ್ಮ ದೇಶದಲ್ಲಿ ಈ ಆಹಾರ ಪದಾರ್ಥಗಳ ಕಂಟ್ರೋಲ್ ಜಾರಿಗೆ ಬಂತೋ ಆಗ ನಾವು ಹೊರಗಡೆಯಿಂದ ವರ್ಷಂಪ್ರತಿ ಎಷ್ಟು ಆಹಾರ ಸಾಮಗ್ರಿಗಳನ್ನು ತರಿಸಬೇಕು-ನಮ್ಮಲ್ಲಿ ಬೆಳೆಯಲಾಗುತ್ತಿರುವ ಧಾನ್ಯದ ಪ್ರಮಾಣವೇನು ಎಂಬುದರ ಅಂಕಿ ಅಂಶಗಳ ಕಡೆಗೆ ನಮ್ಮ ಗಮನ ಬಿತ್ತು. ಕಂಟ್ರೋಲಿದ್ದಾಗ ನಾವು ಹೊರಗಡೆಯಿಂದ ವರ್ಷಕ್ಕೆ ಸುಮಾರು ಎರಡು ಮೂರು ಕೋಟಿ ರೂಪಾಯಿಗಳಷ್ಟು ಬೆಲೆಯ ಆಹಾರ ಸಾಮಗ್ರಿಗಳನ್ನುಕೊಂಡು ತರಿಸುತ್ತಿದ್ದೆವು. ಆಗ ಪ್ರಪ್ರಥಮವಾಗಿ 1952ರಲ್ಲಿ ಗ್ರೋಮೋರ್ ಫುಡ್ ಯೋಜನೆಯನ್ನು ಪ್ರಾರಂಭಿಸಲಾಯಿತು. ಅಂದಿನಿಂದಲೂ ನಾವು ವಿಶೇಷವಾಗಿ ಆಹಾರಧಾನ್ಯಗಳ ಉತ್ಪನ್ನಮಾಡುತ್ತಿದ್ದೇವೆ. ಆದರೆ ನಾವು ಎಷ್ಟು ಗುರಿಮುಟ್ಟಬೇಕೆಂದು ಆಶಿಸಿದ್ದೆವೋ ಅಷ್ಟನ್ನು ಮುಟ್ಟಲು ಇನ್ನೂ ಸಾಧ್ಯವಾಗಿಲ್ಲ. ಕೇಂದ್ರ ಸರ್ಕಾರದವರು ಈ ಸರ್ಕಾರಕ್ಕೆ ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿ ಪೂರೈಸುವುದರೊಳಗಾಗಿ 600 ಕೋಟಿ ಖರ್ಚುಮಾಡಿ ಆಹಾರಧಾನ್ಯಗಳನ್ನು ಬೆಳೆಯಬೇಕೆಂಬ ಡೈರೆಕ್ಷನ್ ಕೊಟ್ಟಿದ್ದರು. ಆ ಒತ್ತಾಯದಿಂದ ಮೈಸೂರು ಸರ್ಕಾರದವರು ಇತ್ತೀಚೆಗೆ ಹೆಚ್ಚು ಆಹಾರಧಾನ್ಯಗಳನ್ನು ಬೆಳೆದಿದ್ದಾರೆ. ನಿರೀಕ್ಷಿಸಿದ್ದುದಕಿಂತಲೂ ಹೆಚ್ಚು ಆಹಾರಧಾನ್ಯಗಳನ್ನು ಬೆಳೆದಿದ್ದಾರೆ. ಆದರೆ ನಮ್ಮಲ್ಲಿರತಕ್ಕ ಅಂಕಿ ಅಂಶಗಳಲ್ಲಿ ಸ್ವಲ್ಪ ಹೆಚ್ಚು ಕಡಮೆಯಿದ್ದರು ಇರಬಹುದು. ಅಂದರೆ 10 ಪರ್ಸೆಂಟ್ ಮಾರ್ಜಿನ್ ಬಿಡಬಹುದು. ಇನ್ನುಳಿದ ಅಂಶಗಳೆಲ್ಲ ಖಚಿತವಾದುವುಗಳು. ಹಾಗಿರುವಾಗ ಆ ಅಂಕಿ ಅಂಶಗಳನ್ನು ಸುಳ್ಳೆಂದು ಹೇಳುವುದು ಸರಿಯಾದುದಲ್ಲ. ಇಲ್ಲಿ ಸದಸ್ಯರಾದ ನೀವುಗಳು ನಮ್ಮನ್ನು ಆರೋಪಣೆ ಮಾಡುವುದಕ್ಕಿಂತಲೂ ಅತಿಯಾಗಿ ಕೇಂದ್ರಸರ್ಕಾರದವರು ನಮ್ಮನ್ನು ಈ ವಿಚಾರದಲ್ಲಿ ಆಕ್ಷೇಪಣೆಮಾಡುತ್ತಿದ್ದಾರೆ; ಅದಕ್ಕಾಗಿ ನಾವು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದೇವೆ. ನಮಗೆ ಅವರು 97 ಸಾವಿರ ಟನ್ ಹೆಚ್ಚು ಆಹಾರ ಬೆಳೆಯಬೇಕೆಂದು ಹೇಳಿದ್ದಾಗ ನಾವು 2ಲಕ್ಷ 16ಸಾವಿರದ 300ಟನ್ ಹೆಚ್ಚಾಗಿ ಆಹಾರ ಸಾಮಗ್ರಿಗಳನ್ನು ಬೆಳೆದಿದ್ದೇವೆ. ಆದರೆ ಈ ಅಂಕಿ ಅಂಶಗಳಲ್ಲಿ ಎಲ್ಲೋ ಅಲ್ಪ ಸ್ವಲ್ಪ ಹೆಚ್ಚುಕಡಮೆಯಿದ್ದರೂ ಇದ್ದೀತು ; ಆದರೆ ನಾನು ಈ ವಿಚಾರಗಳನ್ನೆಲ್ಲಾ ನಿಮ್ಮ ಮುಂದೆ ಇಟ್ಟು ನಮ್ಮ ಇಲಾಖೆಗೊಂದು ಹೆಸರನ್ನು ಪಡೆದು ಅಬಗ್ಗೆ ನಾನು ಹೆಮ್ಮೆ ಪಡಬೇಕೆಂಬ ಉದ್ದೇಶದಿಂದ ಈ ವಿಚಾರಗಳನ್ನು ನಾನು ತಿಳಿಸುತ್ತಿಲ್ಲ. ನಾವು ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಈ ಕಾರ್ಯವನ್ನು ನಡೆಸುತ್ತಿದ್ದೇವೆ. ಈ ಹಿಂದೆ ಆಹಾರಸಾಮಗ್ರಿಗಳ ಅಭಾವವಿದ್ದಾಗ ಆಹಾರಧಾನ್ಯಗಳ ಬೆಲೆ ಹೆಚ್ಚಾಗಿತ್ತು. ಆದರೆ ನಾವು ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಆಹಾರ ಧಾನ್ಯಗಳನ್ನು ಬೆಳೆಯಲು ಪ್ರಾರಂಭಿಸಿದ್ದರಿಂದ ಬೆಲೆ ಇಳಿಮುಖವಾಯಿತು. ಆದಾಗ್ಯೂ ಕೇಂದ್ರ ಸರ್ಕಾರದವರು ನಾವು ಈ ಆಹಾರ ವಿಚಾರದಲ್ಲಿ ಸ್ವಪರಿಪೂರ್ಣತೆಯನ್ನು ಪಡೆಯಬೇಕಾಗಿದ್ದರೆ ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಇನ್ನೂ 5ಲಕ್ಷ ಟನ್‌ಗಳಷ್ಟು ಆಹಾರಧಾನ್ಯಗಳನ್ನು ಜಾಸ್ತಿ ಬೆಳೆಯಬೇಕೆಂದು ತಿಳಿಸಿದ್ದಾರೆ. ಅದ್ದರಿಂದ ನಾವೀಗ ಇನ್ನೂ ಈ ಬಾಬಿಗೆ ಹೆಚ್ಚುಗಮನ ಕೊಡಬೇಕಾಗಿದೆ. ಆದರೆ ಈ ಹಿಂದೆ ನಮ್ಮ ಸೆಟ್ಟರು ಹೇಳಿದ ಹಾಗೆ ಈ ಹಿಂದೆ ನಮ್ಮಲ್ಲಿ ಆಹಾರ ಉತ್ಪತ್ತಿ ನಿರೀಕ್ಷಿಸಿದುದಕ್ಕಿಂತ ಕಡಮೆ ಆಗಿದೆಯೆಂಬುದು ನಿಜವಲ್ಲ. 1951-52ರಿಂದ ಸುಮಾರು 216 ಕೋಟಿ ರೂಪಾಯಿಗಳ ಬೆಲೆಬಾಳುವ ಆಹಾರ ಸಾಮಗ್ರಿಗಳನ್ನು ಹೊರದೇಶಗಳಿಂದ ಆಮದುಮಾಡಲಾಯಿತು.

(ಶ್ರೀ ಎಚ್. ಎಸ್. ರುದ್ರಪ್ಪ)

ಆದರೆ ಬರುಬರುತ್ತಾ ಈ ಆಮದು ಮಾಡುವುದನ್ನು ಕಡಮೆ ಮಾಡಲಾಯಿತು. 1954-55ರಲ್ಲಿ ಕೇವಲ 7ಲಕ್ಷಟನ್ನುಗಳಷ್ಟು ಆಹಾರ ಸಾಮಗ್ರಿಗಳನ್ನು ಹೊರಗಡೆಯಿಂದ ತರಿಸಲಾಯಿತು. ಆದರೆ ಇತ್ತೀಚೆಗೆ ತಮಗೆಲ್ಲರಿಗೂ ಗೊತ್ತಿರುವಂತೆ ಆಹಾರ ಧಾನ್ಯಗಳ ಬೆಲೆಯೇಕೆ ಕಡಮೆಯಾಯಿತು? ಹೆಚ್ಚು ಆಹಾರಧಾನ್ಯಗಳ ಉತ್ಪನ್ನವಾದ್ದರಿಂದ ತಾನೇ? ಯಾವಾಗ ದೇಶದಲ್ಲಿ ರೈತಾಪಿ ಜನರು ತಾವು ಬೆಳೆದ ಧಾನ್ಯಗಳಿಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲವೆಂದು ಕೂಗುವುದಕ್ಕೆ ಪ್ರಾರಂಭಮಾಡಿದರೋ ಆಗ ಸರ್ಕಾರದವರು ಆಹಾರಧಾನ್ಯಗಳನ್ನು ಹೊರಗಡೆಗೆ ರವಾನೆಮಾಡಲು ಅವಕಾಶ ಕೊಟ್ಟರು. ಆಗಲೇ ಇಂಡಿಯಾಕ್ಕೂ-ಪಾಕೀಸ್ಥಾನಕ್ಕೂ ಒಂದು ಆಹಾರ ಸರಬರಾಯಿಯ ಒಪ್ಪಂದ ಆಯಿತು. ಆದರೆ ನಾವು ಇಲ್ಲಿ ಸಾರ್ವಜನಿಕರಿಗೆ ತೊಂದರೆಯನ್ನುಂಟುಮಾಡಬೇಕೆಂದಾಗಲೀ ಅಥವಾ ಧಾನ್ಯಗಳ ಬೆಲೆಯನ್ನೇರಿಸಬೇಕೆಂಬ ಉದ್ದೇಶದಿಂದಾಗಲೀ ಅಥವಾ ಆಹಾರ ಪದಾರ್ಥಗಳ ಧಾರಣೆ ಕಡಮೆಯಾದರೆ ರೈತರಿಗೆ ತೊಂದರೆಯಾಗುತ್ತದೆ ಎಂಬ ಕಾರಣದಿಂದಾಗಲಿ ನಾವು ಹೊರಗಡೆಗೆ ಆಹಾರಧಾನ್ಯಗಳನ್ನು ರವಾನೆಮಾಡಲಿಲ್ಲ. ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಆಹಾರೋತ್ಪನ್ನ ಇನ್ನೂ ಜಾಸ್ತಿಯಾಗುತ್ತದೆಂಬ ಭರವಸೆಯಿಂದ ನಾವು ಆರೀತಿ ಆಹಾರಧಾನ್ಯಗಳನ್ನು ಹೊರಗಡೆ ಹೋಗಲು ಬಿಡಬೇಕಾಗಿ ಬಂತು. ಆದ್ದರಿಂದ ಈ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಆಹಾರದ ಸಮಸ್ಯೆಯನ್ನು ಯಶಸ್ವಿಯಾಗಿ ಉತ್ತಮಗೊಳಿಸಲು ಸಾರ್ವಜನಿಕರ ಬೆಂಬಲ ನಮಗೆ ಬೇಕಾಗಿದೆ.

Sri H. M. CHANNABASAPPA.—I would like to have a clarification on this point. Even if best facilities like fertilizers, etc., and other conveniences are given to the agriculturists, they will not have incentive to produce more unless it is guaranteed that they will have a reasonable margin of profit. Is that not so ?

Sri H. S. RUDRAPPA.—Thank you. ನಾನೀಗ ತಮಗೆ ಅದೇ ವಿಚಾರವನ್ನು ತಿಳಿಸಬೇಕೆಂದಿದ್ದೆ. ಈ ಎರಡನೆಯ ಪಂಚವಾರ್ಷಿಕಯೋಜನೆಯಲ್ಲಿ ಹೆಚ್ಚು ಆಹಾರಬೆಳೆಯನ್ನು ಬೆಳೆಯಬೇಕೆಂಬ ಯೋಜನೆಯಲ್ಲಿ ಕೇಂದ್ರದವರು ಕೊಟ್ಟಿರತಕ್ಕ ಸೂಚನೆಗಳಲ್ಲಿ ಇದೂ ಸಹ ಅಡಕವಾಗಿದೆ. ಆದರೆ ಲುಕ್ಸಾನು ಮಾಡಿಕೊಂಡು ಯಾರೂ ಉದ್ಯಮ ಮಾಡುವುದಿಲ್ಲ. ವ್ಯಾಪಾರವೇ ಆಗಲೀ ಒಂದು ವ್ಯವಸಾಯವೇ ಆಗಲಿ ಯಾರೂ ಲುಕ್ಸಾನುಮಾಡಿಕೊಂಡು ಕೆಲಸಮಾಡಲಾರರು. ಹಾಗೇನಾದರೂ ಆಯಿತೆಂದರೆ ಅವನು ಯಾರಿಗೂ ಹೇಳದಂತೆ ಗಂಟು-ಮೂಟೆ ಕಟ್ಟಿಕೊಂಡು ಹೊರಡಬೇಕಾಗುತ್ತದೆ. ಈಗಿರತಕ್ಕ ಸಂದರ್ಭದಲ್ಲಿ ರೈತನು ಬೆಳೆಯುವ ಧಾನ್ಯಗಳಿಗೊಂದು ಸರಿಯಾದ ಬೆಲೆಯನ್ನು ಕೊಡುವಂತೆ ಮಾಡದಿದ್ದರೆ ನಾಳೆ ಯಾರೂ ಹೆಚ್ಚಿಗೆ ಆಹಾರವಸ್ತುಗಳನ್ನೇ ಬೆಳೆಯುವುದಿಲ್ಲ. ಈ ವಿಚಾರವನ್ನೂ ಕೂಡ ನಾವು ಕೇಂದ್ರ ಸರ್ಕಾರದವರ ಗಮನಕ್ಕೆ ತಂದಿದ್ದೇವೆ. ಆದರೆ ವಿನಾಕಾರಣ ನಾವು ಕೊಂಡುತಿನ್ನುವ ಜನರಿಗೆ ತೊಂದರೆ ಕೊಡಬೇಕೆಂಬ ಉದ್ದೇಶವಿಲ್ಲ. ಹೆಚ್ಚು ಬೆಲೆ ಸಿಕ್ಕದಿದ್ದರೆ ರೈತ ಹೆಚ್ಚಾಗಿ ಬೆಳೆಯುವುದಿಲ್ಲ. ಹೆಚ್ಚಾಗಿ ಬೆಳೆ ಆದರೆ ಹೆಚ್ಚು ಬೆಲೆ ಇರುವುದಿಲ್ಲ. ಈ ಒಂದು ತೊಡಕಿನ ಸಮಸ್ಯೆ ಇದರಲ್ಲಿದೆ. ಬೆಲೆ ಕಡಮೆಯಾಗಿದ್ದರೆ ನಾವೇಕೆ ರೈತನ ಬಾಗಿಲಗೆಹೋಗಿ" ನಿಮಗೆ ಉಚಿತವಾಗಿ ಗೊಬ್ಬರ—ಬೀಜ ಸರಬರಾಯಿ ಮಾಡುತ್ತೇವೆ. ನೀವು ಹೆಚ್ಚಾಗಿ ಆಹಾರಧಾನ್ಯಬೆಳೆಯಿರಿ" ಎಂದು ಪ್ರಚಾರಮಾಡಬೇಕಾಗಿತ್ತು? ಹೆಚ್ಚು ಬೆಲೆಯಿದ್ದರೆ ಅವನೇ ಹೆಚ್ಚು ಆಸೆಯಿಂದ ಜಾಸ್ತಿ ಬೆಳೆಯನ್ನು ಬೆಳೆದೇ ಬೆಳೆಯುತ್ತಾನೆ. ಆತನಿಗೂ ಹೆಂಡತಿ-ಮಕ್ಕಳು ಮನೆ ಇತ್ಯಾದಿಗಳೆಲ್ಲ ಇದ್ದು-ತಾನೂ ಸಹ ಇತರರಂತೆ ಸುಖವಾಗಿ ಬಾಳಬೇಕೆಂಬ ಆಸೆ ಅವನಿಗೂ ಇರುತ್ತದೆ. ಯಾವತ್ತು ಆಹಾರಧಾನ್ಯಗಳ ಬೆಲೆ ಇಳಿಯುತ್ತದೋ ಆಗಲೇ ಅವನು ನಾವು ಎಷ್ಟು ಪ್ರಚಾರ ಮಾಡಿದರೂ ಕಿವಿಗೊಡುವುದಿಲ್ಲ—ಬೆಳೆಯುವುದನ್ನೇ ಬಿಟ್ಟುಬಿಡುತ್ತಾನೆ.

Sri H. M. CHANNABASAPPA.—What did the Planning Commission say when they prescribed the increased target of production during the Second Five-Year Plan? When the Hon'ble Minister raised this issue, did the Planning Commission assure in this behalf to give a guaranteed price which comprised of reasonable profit for the ryot?

ಶ್ರೀ ಎಚ್. ಎಸ್. ರುದ್ರಪ್ಪ.—ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಓದುತ್ತಿರಬಹುದು. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರತಕ್ಕದ್ದರಲ್ಲಿ ನಮಗೆ ಎಷ್ಟು ಆಸಕ್ತಿ ಇದೆಯೋ ದೆಹಲಿಯ ಸರ್ಕಾರದವರಿಗೂ ಅಷ್ಟೇ ಆಸಕ್ತಿ ಇದೆ. ಕೇಂದ್ರದ ಆಹಾರ ಮಂತ್ರಿಗಳು ಇಲ್ಲಿಗೆ ಬಂದಾಗ, ಒಂದು statementಕೊಟ್ಟರು. ರೈತನಿಗೆ ಒಳ್ಳೆಯ ಧಾರಣೆ ಕೊಡುತ್ತೇವೆ; ಅದನ್ನು ಕೊಡುವುದಕ್ಕೆ ಸರ್ವಪ್ರಯತ್ನವನ್ನೂ ಮಾಡುತ್ತೇವೆ; ಅದರಲ್ಲಿ ಸಂದೇಹಪಟ್ಟುಕೊಳ್ಳಬೇಡಿ. ರೈತರಿಗೆ ನಿರಾಶೆ ಆಗದಂತೆ ಮಾಡುತ್ತೇವೆಂದು ಹೇಳಿದರು. ನಾನು ಪ್ಲಾನಿಂಗ್ ಕಮಿಷನರ್ ಮೆಂಬರುಗಳ ಜೊತೆಯಲ್ಲಿಯೂ ಚರ್ಚೆ ಮಾಡಿದ್ದೇನೆ. ಅವರು ಏನು ಹೇಳುತ್ತಾರೆಂದರೆ, ಧಾರಣೆಯನ್ನು ನಿಗದಿಮಾಡುವುದಕ್ಕೆ ಈಕಾಲ ಸಕಾಲವಲ್ಲ, ಈಗ ಧಾರಣೆ ಜಾಸ್ತಿಯಾಗಿದೆ, ಕೊಳ್ಳುವವರಿಗೂ ಕಷ್ಟವಾಗಿದೆ. ಇವೊತ್ತು ಧಾರಣೆಯನ್ನು ಒಂದು ವೇಳೆ ನಿಗದಿಮಾಡಿದರೆ ಕೊಳ್ಳುವವರಿಗೆ ತೊಂದರೆಯಾಗಬಹುದು. ಆ ದೃಷ್ಟಿಯನ್ನಿಟ್ಟುಕೊಂಡು ಒಳ್ಳೆಯ ಧಾರಣೆಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಈ ವಿಷಯವನ್ನು ಕೇಂದ್ರದ ಆಹಾರ ಮಂತ್ರಿಗಳು ಹೇಳಿದ್ದಾರೆ. ಪ್ರೈಮ್‌ಮಿನಿಸ್ಟರ್ ಅವರೂ ಅನೇಕ ಸಲ ಹೇಳಿದ್ದಾರೆ. ಇವನ್ನೆಲ್ಲ ದೃಷ್ಟಿಯಲ್ಲಿಟ್ಟುಕೊಂಡು ವ್ಯವಸಾಯವನ್ನೂ ಅಭಿವೃದ್ಧಿಮಾಡುತ್ತಿದ್ದೇವೆ. ಹಿಂದಿನ ಮೈಸೂರು ಭಾಗದಲ್ಲಿ ಎಷ್ಟು ಬೆಳೆಯನ್ನು ನಿರೀಕ್ಷೆಮಾಡಿದ್ದೆವೋ ಅದಕ್ಕಿಂತ ಹೆಚ್ಚಾಗಿ ಬೆಳೆಯಾಗಿದೆ. ಆದುದರಿಂದ ಈ ಭಾಗದವರು ಅದರ ವಿಷಯದಲ್ಲಿ ಮಾತನಾಡಬೇಕಾದುದು ಅನಾವಶ್ಯಕವೆಂದು ಕಾಣುತ್ತದೆ. ಆದರೆ ನಮಗೆ ಸೇರಿರತಕ್ಕ ಬೊಂಬಾಯಿ ಭಾಗದಲ್ಲಿ, ಹೈದರಾಬಾದುದು ಭಾಗದಲ್ಲಿ ಮತ್ತು ಮದರಾಸುಭಾಗದಲ್ಲಿ ನಿರೀಕ್ಷೆಮಾಡಿದಷ್ಟು ಬೆಳೆದಿಲ್ಲ. ಇದಕ್ಕೆ ಅನೇಕ ಕಾರಣಗಳಿರಬಹುದು. ಇದರಲ್ಲಿ ಏನಾಗಿದೆ ಎಂದರೆ ಸ್ವಲ್ಪ ಲೋಪವಿದೆ ಎಂದು ಹೇಳದೆ ಇದ್ದರೂಸಹ, ಒಂದು ಕಷ್ಟವಿದೆ. ದೊಡ್ಡ ದೊಡ್ಡ ಪ್ರಾಜೆಕ್ಟ್ ಕಟ್ಟಿದ್ದಾರೆ

ತುಂಗಭದ್ರಾ ಪ್ರಾಜೆಕ್ಟನ್ನು ಕಟ್ಟಲು 40ಕೋಟಿ ರೂಪಾಯಿ ಖರ್ಚುಮಾಡಿದ್ದಾರೆ. ಬಹಳ ಜಮೀನಿಗೆ ನೀರಾವರಿಯಾಗುತ್ತದೆ. ಸಾಗುವಳಿ ಮಾಡುವವರು ಕಡಮೆ ಇದ್ದಾರೆ. ದೊಡ್ಡ ದೊಡ್ಡ ಪ್ರಾಜೆಕ್ಟ್ ಮಾಡುವುದರಿಂದ ಅದನ್ನು ಕಟ್ಟಲು ಹತ್ತಾರು ವರ್ಷಗಳು ಬೇಕು. ಜಮೀನನ್ನೂ ಸಾಗುವಳಿಮಾಡಲು ಹತ್ತಾರು ವರ್ಷಗಳು ಬೇಕು. ಹೀಗೆ ಜಮೀನಿನಿಂದ ಫಲ ತೆಗೆಯುವುದಕ್ಕೆ ಸುಮಾರು 20ವರ್ಷಗಳು ಬೇಕು. ಭಾರಿಯೋಜನೆಗಳನ್ನು ಹಾಕಿದರೆ, ಬಹುಶಃ ಅದರ ಫಲವನ್ನು ಪಡೆಯಬೇಕಾದರೆ ಹತ್ತಾರು ವರ್ಷಗಳು ಬೇಕಾಗುತ್ತವೆ. ಈಗ ತಕ್ಷಣ ನಮಗೆ ಫಲ ಬರಬೇಕಾದರೆ, ಅನೇಕ ಮಾನ್ಯಸದಸ್ಯರು ಸಲಹೆಕೊಟ್ಟ ಹಾಗೆ, ಕೆರೆ, ಕುಂಟೆ, ಪಿಕ್ ಅಪ್ ಚಾನಲ್ಸ್, ಬಂದರ್‌ಗಳು ಇವುಗಳನ್ನು ಹಾಕಿಕೊಡಿ ಎಂದು ಕೇಳುತ್ತಾರೆ. ಇವು ಬಹಳ ಕಡಮೆ ಖರ್ಚಿನಲ್ಲಿ ಆಗುತ್ತವೆ. ನಮ್ಮ ದೇಶದಲ್ಲಿ ಅನೇಕ ಕಡೆ ಬಹಳ ಹೆಚ್ಚುಮಳೆ ಬರುತ್ತದೆ, perennial sources of water ಇವೆ. ಈ ಕಾರ್ಯಗಳನ್ನು ಕೈಗೊಳ್ಳಲು ನಮಗೆ ಒದಗಿಸಿರುವದು ಬಹಳಕಡಮೆ ಎಂದು ಪ್ಲಾನಿಂಗ್ ಕಮಿಷನವರೊಡನೆ ಚರ್ಚೆಮಾಡಿದ್ದೇನೆ. ಸಣ್ಣಪುಟ್ಟ ನೀರಾವರಿ ಕೆಲಸಗಳು Lift irrigation, ಇವು ಬಹು ಉಪಯುಕ್ತವಾದುವುಗಳು. Lift irrigation schemeನಲ್ಲಿ ಮೊದಲು ಸರ್ಕಾರದವರಿಗೆ ಸ್ವಲ್ಪ ಅನುಮಾನವಿತ್ತು, ಬಹಳ ದುಡ್ಡು ಖರ್ಚಾಗುತ್ತದೆಂದು. ಆದರೆ ನಾವು ಒಂದು ಸಾವಿರರೂಪಾಯಿ ಈ ಕಾರ್ಯಕ್ಕೆ ಖರ್ಚುಮಾಡಿದರೆ, ಅದರಿಂದ ಎಷ್ಟು ಉತ್ಪತ್ತಿ ಬರುತ್ತದೆ ಎಂದು ಅಂಕಅಂಶಗಳನ್ನು ಕೊಟ್ಟು ಅವರ ಅನುಮಾನವನು ಬಗೆಹರಿಸುವುದಕ್ಕೆ ಬಹಳ ಕಷ್ಟವಾಯಿತು. ಈಗ ಅವರೂ ಈಯೋಜನೆಯನ್ನು ಒಪ್ಪಿದ್ದಾರೆ. ಸಂಬಂಧಪಟ್ಟವರು ಸಣ್ಣ ಸಣ್ಣ ನೀರಾವರಿಯ ಕಾರ್ಯಗಳಿಗೆ ಮತ್ತು lift irrigationಗೆ ಜಾಸ್ತಿ ದುಡ್ಡು ಒದಗಿಸುವುದಕ್ಕೆ ಪ್ರಯತ್ನಮಾಡುತ್ತೇವೆ, ನೀವುಮಾಡತಕ್ಕ ಕೆಲಸವನ್ನು ಒಪ್ಪಿದ್ದೇವೆ, ಇದು ಉಪಯುಕ್ತವಾದ ಸಲಹೆ ಎಂದು ಹೃತ್ಪೂರ್ವಕವಾಗಿ ಸ್ವಾಗತಿಸಿದ್ದಾರೆ.

ಇನ್ನೊಂದು ಬಹಳ ಮುಖ್ಯ ಸಂತೋಷದ ವಿಷಯವನ್ನು ತಮ್ಮ ಮುಂದಿಡುತ್ತೇನೆ. ನಮ್ಮ ಮೈಸೂರು ದೇಶದಲ್ಲಿ ಬಹಳ ಪ್ರಾಮುಖ್ಯವಾದ ಬೆಳೆಗಳನ್ನು ಬೆಳೆಯುತ್ತಿದ್ದೇವೆ. ಆ ವಿಷಯದಲ್ಲಿ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಕಾಫಿ, ಟೀ, ಈರುಳ್ಳಿ, ಅಡಿಕೆ, ತೆಂಗಿನಕಾಯಿ, ಇವು ಬಹು ಉತ್ತಮವಾದ money crops ಎಂದು ಹೇಳುತ್ತಾರೆ. ಇವನ್ನು ನಮ್ಮಲ್ಲಿ ಬೆಳೆಯುತ್ತಿದ್ದೇವೆ. ಹಾಗೆಯೇ cashewnut ಸಹ ಹೆಚ್ಚಾಗಿ ಬೆಳೆಯುತ್ತಿದ್ದೇವೆ, ಇದಕ್ಕೆ ಪ್ರಾಮುಖ್ಯತೆ ಇದೆ. ಇಂಡಿಯಾ ದೇಶದಲ್ಲಿನ ಬೆಳೆಯಲ್ಲಿ ಕಾಫಿ ಶೇಕಡ 60, ರಾಗಿ ಶೇಕಡ 30, ಅಡಿಕೆ ಶೇಕಡ, 34, ಮೆಣಸಿನಕಾಯಿ ಶೇಕಡ 18, ಸೇಂಗಾ ಶೇಕಡ 16,ಜೋಳ ಮತ್ತು ತೆಂಗಿನಕಾಯಿ ಶೇಕಡ 15, ಹತ್ತಿ ಶೇಕಡ 12-8 ತೊಗರಿ, ಅವರೆ, ವಗ್ಗೈರೆ ಶೇಕಡ11 millets 10 ಶೇಕಡ, ಹೀಗೆ ನಮ್ಮ ದೇಶದಲ್ಲಿ ಬೆಳೆಯುತ್ತಿದ್ದೇವೆ. ಪ್ರಪಂಚದಲ್ಲಿ ತೆಗೆದುಕೊಂಡರೆ ನಮ್ಮ ಕಾಫಿ, ರಾಗಿ, ಮತ್ತು ಏಲಕ್ಕಿಗೆ ಮೊದಲ ಸ್ಥಾನ, ಅಡಿಕೆ ಮತ್ತು ತೆಂಗಿನಕಾಯಿ ಇವುಗಳಿಗೆ ಎರಡನೆಯ ಸ್ಥಾನ, ಜೋಳ, ಹತ್ತಿ, ಹೊಗೆಸೊಪ್ಪು ಇವುಗಳಿಗೆ ಮೂರನೆಯಸ್ಥಾನ, ಸೇಂಗಾ ಅಂದರೆ ಕಡಲೆಕಾಯಿಗೆ ನಾಲ್ಕನೆಯ ಸ್ಥಾನ, ಮತ್ತು ಎಣ್ಣೆ ಬೀಜಗಳಿಗೆ ಐದನೆಯ ಸ್ಥಾನ ಬರುತ್ತದೆ. ಹೀಗೆ ಬಹಳ ಪ್ರಾಮುಖ್ಯವಾದ ಬೆಳೆಗಳನ್ನು ಬೆಳೆಯುತ್ತಿದ್ದೇವೆ. ಇದಕ್ಕೆ ಬಹಳ ಪ್ರೋತ್ಸಾಹ ಅತ್ಯಾವಶ್ಯಕವಾಗಿದೆ.

ಆದುದರಿಂದ ಇದಕ್ಕೆ ಸಹ ಸರ್ಕಾರದವರು ಹೆಚ್ಚಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ತಮಗೆ ಗೊತ್ತಿರಬಹುದು, ಕಬ್ಬು ಚೆನ್ನಾಗಿ ಬೆಳೆಯುತ್ತಿದೆ. ಅದಕ್ಕೆ ಬೇಕಾದಷ್ಟು research ಮಾಡುತ್ತಿದ್ದೇವೆ. ಹತ್ತಿ, ರಾಗಿ, ಅವರೆ, ಇದಕ್ಕೆಲ್ಲ ವಿಶೇಷವಾಗಿ ಖರ್ಚುಮಾಡುತ್ತಿದ್ದೇವೆ. ಆದರೆ ಒಂದು ವಿಷಯ ಮಾತ್ರ ಹೇಳುತ್ತೇನೆ. 43 ಲಕ್ಷ ರೂಪಾಯಿಗಳ ಬಾಕಿಯನ್ನು ವಸೂಲ್ಮಾಡದೆ ಬಿಟ್ಟಿದ್ದೇವೆಂದು ಹೇಳಿದರು. ಅವರು ಬಜೆಟ್ಟಿನಲ್ಲಿ ಸರಿಯಾಗಿ ನೋಡಿಲ್ಲ. 43 ಲಕ್ಷ ರೂಪಾಯಿ ಸಾಲ ವಸೂಲಾಗಬೇಕಾದುದಲ್ಲ; ಅನೇಕ ಬಾಬುಗಳಿಂದ ಈ ಇಲಾಖೆಯಲ್ಲಿ ಬಂದಂಥ ಹಣ, ಸಾಲದ ಬಾಬತ್ತು ಅಲ್ಲ. ಸಾಲದಲ್ಲಿ ಸ್ವಲ್ಪ ಮಾತ್ರ ವಸೂಲ್ಮಾಡುತ್ತಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಮಲ್ಟಿಪರ್ಪಸ್ ಸೊಸೈಟಿಗಳಿಂದ ಹಳೆಯಬಾಕಿ ಎಷ್ಟು ಬರಬೇಕು ?

ಶ್ರೀ ಎಚ್. ಎಸ್. ರುದ್ರಪ್ಪ.—ಇದಕ್ಕೆ ಸಂಬಂಧಪಟ್ಟಿಲ್ಲ. ಅದು ಇದರಲ್ಲಿ ಬರುವುದಿಲ್ಲ. 43ಲಕ್ಷ ರೂಪಾಯಿ ಅನೇಕ ಫಾರಂಗಳಿಂದ ಬರತಕ್ಕದ್ದು ಎಂದು ಬಾಬುವಾರಾಗಿ ರೆವೆನ್ಯೂ ಎಸ್ಟಿಮೇಟ್‌ನಲ್ಲಿ 31-33 ನೆಯ ಪುಟಗಳಲ್ಲಿ ಕೊಟ್ಟಿದೆ.

Sri C. K. RAJAIAH SETTY.—Yesterday, I pointed out that item M-10 was not clarified in the Budget. Will the Hon'ble Minister kindly enlighten me ?

ಶ್ರೀ ಎಚ್. ಎಸ್. ರುದ್ರಪ್ಪ.—ರೆವೆನ್ಯೂ ಸ್ಟೇಟ್‌ಮೆಂಟಿನಲ್ಲಿ 31-33ನೆಯ ಪುಟಗಳಲ್ಲಿ 43 ಲಕ್ಷಕ್ಕೆ ವಿವರಗಳಿವೆ ; ಅದನ್ನು ದಯವಿಟ್ಟು ನೋಡಿ. ಇದು ಈ 43 ಲಕ್ಷಕ್ಕೆ ಸಂಬಧಪಟ್ಟುದಲ್ಲವೆಂದು ಮಾತ್ರ ತಿಳಿಸುತ್ತೇನೆ.

ಈಗ ಬಹಳ ವೇಳೆಯಾಗಿದೆ. ಆದುದರಿದ ಅನೇಕ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದರೂ ಸಹ, ಅವುಗಳಿಗೆಲ್ಲ ಇಲ್ಲಿ ಜವಾಬು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇನೆ.

Sri H. M. CHANNABASAPPA.—Much was said about the Hesaraghatta Farm. I think Government have passed orders approving the scheme to convert it into a plant breeding station so that plants may be reared there and distributed all over the State at a cheaper cost. I would like to know whether the Government have implemented that order.

ಶ್ರೀ ಎಚ್. ಎಸ್ ರುದ್ರಪ್ಪ.—ಹಾರ್ಟಿಕಲ್ಚರ್‌ಗೆ ಸಂಬಂಧಿಸಿದ ವಿಷಯವನ್ನು ಕೇಳಿದ್ದರಿಂದ ಒಂದು ಮಾತನ್ನು ಹೇಳುತ್ತೇನೆ. ಹೆಸರಘಟ್ಟ ಫಾರಂನಲ್ಲಿ ಏನಾಗಿದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತು. ಇದು ನಮ್ಮ ದೇಶದ ದುರದೃಷ್ಟ ಇದರ Income and Expenditure figure ಸದಸ್ಯರ ಮುಂದೆ ಇಟ್ಟರೆ ಸರ್ಕಾರ ಹೇಗೆ ನಡೆಯುತ್ತಿದೆ ಎಂದು ತಿಳಿದುಕೊಳ್ಳಬಹುದೆಂಬ ಅನುಮಾನವಿದೆ. ಈ ಫಾರಂ ಚೆನ್ನಾಗಿ ನಡೆಯುತ್ತಿಲ್ಲ. ಇದಕ್ಕೆ ವರ್ಷಕ್ಕೆ 25 ಸಾವಿರ ರೂಪಾಯಿಗಳು ಖರ್ಚಾಗುತ್ತಿದ್ದು 12-13 ಸಾವಿರ ರೂಪಾಯಿಗಳಷ್ಟು ವರಮಾನ ಬರುತ್ತಿದೆ. ಈ ರೀತಿಯಾಗಿ ಎರಡು, ಮೂರು ವರ್ಷಗಳಿಂದ ನಡೆಯುತ್ತಿದೆ. ಇಂಡಿಯಾ ಸರ್ಕಾರದವರು

(ಶ್ರೀ ಎಚ್. ಎಸ್. ರುದ್ರಪ್ಪ)

ಹೆಚ್ಚಾಗಿ ಹಣವನ್ನು ಇದರಮೇಲೆ ಹಾಕಿ, ಈ ಫಾರಂ ಅಭಿವೃದ್ಧಿಮಾಡುತ್ತೇವೆಂದು ಹೇಳಿದ್ದಾರೆ. ಇದರಿಂದ ನಮ್ಮ ದೇಶಕ್ಕೆ ಹೆಚ್ಚಿನ ಉಪಯೋಗವಾಗುತ್ತದೆ. ಹೀಗೆ ಅವರು ದುಡ್ಡುಕೊಟ್ಟು ಹೆಸರುಘಟ್ಟದಲ್ಲಿ ಫಾರಂನ್ನು ಉತ್ತಮವಾದ ರೀತಿಯಲ್ಲಿ ಮಾಡುತ್ತೇವೆಂದು ಹೇಳಿರುವುದು ಸೂಕ್ತವಾದದ್ದೆಂದು ಯೋಚನೆಮಾಡಿ, ಇಂಡಿಯಾ ಸರ್ಕಾರಕ್ಕೆ ಇದನ್ನು ಕೊಡತಕ್ಕದು ಸೂಕ್ತವೆಂದು ತೀರ್ಮಾನ ಮಾಡಿದ್ದೇವೆ.

ಆಮೇಲೆ ಇದರಲ್ಲಿ ಸಣ್ಣಪುಟ್ಟ ದೋಷಗಳು ಇವೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಪರಿಶೀಲನೆ ಮಾಡುತ್ತೇನೆ. ವೆಟೆರಿನರಿ ಇಲಾಖೆಯ ಬಗ್ಗೆ ಮಾನ್ಯ ಸದಸ್ಯರು ಹೇಳುವಾಗ ವೆಟೆರಿನರಿ ಕಾಲೇಜನ್ನು ಸ್ಥಾಪನೆ ವ್ಯವಸ್ಥೆ ಮಾಡುವುದನ್ನು ಕುರಿತು ಒಂದು ಮುಖ್ಯವಾದ ವಿಷಯವನ್ನು ಹೇಳಿದ್ದಾರೆ. ವೆಟೆರಿನರಿ ಕಾಲೇಜಿಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಸಲಹೆ ಮಾಡಿದ್ದಾರೆ. ಆದುದರಿಂದ ಈ ವಿಷಯದ ಬಗ್ಗೆ ಸಾಧ್ಯವಾದಷ್ಟು ಜಾಗ್ರತೆ ಏರ್ಪಾಡುಮಾಡುತ್ತೇವೆ. ಅನೇಕ ಮಾನ್ಯ ಸದಸ್ಯರು ಇನ್ನೊಂದು ವಿಷಯವನ್ನು ಬಹಳ ಒತ್ತಿ ಹೇಳಿದ್ದಾರೆ. ವೆಟೆರಿನರಿ ಆಸ್ಪತ್ರೆ ಕೊಡಬೇಕು; ಬೀಜದ ಹೋರಿಕೊಡಬೇಕು ಎಂದು ಹೇಳಿದ್ದಾರೆ. ಆದರೆ ಈಗಿನ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಬಹಳ ಕಷ್ಟವಾಗಿದೆ. ಈಗ ನಮ್ಮ ಮೈಸೂರು ದೇಶದಲ್ಲಿ ಒಟ್ಟು 368 ವೆಟೆರಿನರಿ ಇನ್‌ಸ್ಟಿಟ್ಯೂಷನ್‌ಗಳು ಇವೆ. ಕೆಲವೆಡೆ ಬಹಳ ಜಾಸ್ತಿ ಆಗಿವೆ. ಕೊಡಗಿನಲ್ಲಿ 6,181 ಜಾನುವಾರಗಳಿಗೆ ಒಂದು ವೆಟೆರಿನರಿ ಆಸ್ಪತ್ರೆ ಇದೆ. ಹಳೆಯ ಮೈಸೂರಿನಲ್ಲಿ 26,886 ಜಾನುವಾರಗಳಿಗೆ ಒಂದು ಆಸ್ಪತ್ರೆ ಇದೆ. ಮುಂಬಯಿ ಪ್ರದೇಶದಲ್ಲಿ 41,350 ಜಾನುವಾರಗಳಿಗೆ ಒಂದು ಆಸ್ಪತ್ರೆಯಂತೆ ಪ್ರಮಾಣವಾಗಿದೆ. ಹೈದ್ರಾಬಾದು ಪ್ರದೇಶದಲ್ಲಿ 57,270 ಜಾನುವಾರಗಳಿಗೆ ಒಂದು ಆಸ್ಪತ್ರೆಯಾಗಿದೆ. ಮದ್ರಾಸ್ ಪ್ರದೇಶದಲ್ಲಿ 69,573 ಜಾನುವಾರಗಳಿಗೆ ಒಂದು ಆಸ್ಪತ್ರೆ ಇರತಕ್ಕ ಪ್ರಮಾಣವಿದ್ದುದು ಕಂಡು ಬರುತ್ತದೆ. ಆದುದರಿಂದ ಈ ವಿಷಯವನ್ನು ಎಲ್ಲರೂ ಯೋಚನೆಮಾಡಿ ನೋಡಬೇಕು. ಆದಷ್ಟು ಹೆಚ್ಚು ವೆಟೆರಿನರಿ ಆಸ್ಪತ್ರೆಗಳನ್ನು ಸ್ಥಾಪನೆ ಮಾಡಬೇಕೆಂಬ ಆಶೆಯು ನಮಗೂ ಇದೆ. ಆದರೆ ಈಗಿನ ದುಡ್ಡಿನ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ವ್ಯವಸ್ಥೆಮಾಡಲು ಬಹಳ ಕಷ್ಟವಾಗಿದೆ. ಆದಷ್ಟು ಹೆಚ್ಚು ವೆಟೆರಿನರಿ ಆಸ್ಪತ್ರೆಗಳನ್ನು ಮಾಡಬೇಕಾದುದು ಸೂಕ್ತವಾಗಿದೆ. ಈ ಬಗ್ಗೆ ಇಂಡಿಯಾ ಸರಕಾರದವರು ಒಂದ ಸೂಕ್ತ ಸಲಹೆಯನ್ನು ಮಾಡಿ 25,000 ಜಾನುವಾರಗಳಿಗೆ ಒಂದು ವೆಟೆರಿನರಿ ಆಸ್ಪತ್ರೆ ಇರಬೇಕು ಎಂದು ನಮ್ಮ ಗಮನಕ್ಕೆ ತಂದಿದ್ದಾರೆ. ಸಾಧ್ಯವಾದ ಮಟ್ಟಿಗೆ 25,000 ರಿಂದ 27,000 ಜಾನುವಾರುಗಳಿಗೆ ಒಂದು ವೆಟೆರಿನರಿ ಆಸ್ಪತ್ರೆ ಇರುವಂತೆ ಮಾಡಬೇಕೆಂಬ ಅಭಿಲಾಷೆಯನ್ನು ನಾವು ಇಟ್ಟುಕೊಂಡಿದ್ದೇವೆ. ಕೆಲವು ತಾಲ್ಲೂಕುಗಳಲ್ಲಿ ಒಂದೇ ಒಂದು ಆಸ ತ್ರೆ ಇದ್ದು ಅದು ಕೂಡ ಬಹಳ ದೂರದಲ್ಲಿ ಇದೆ. ವೆಟೆರಿನರಿ ಆಸ್ಪತ್ರೆಗಳನು ಹೆಚ್ಚುಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅನೇಕ ಮಾನ್ಯ ಸದಸ್ಯರು ಇನ್ನೊಂದು ಮಹತ್ತ್ವದ ವಿಷಯವನ್ನು ಪ್ರಾಸ್ತಾಪಮಾಡಿ ಹೇಳಿದ್ದು ಫಿಷರೀ ಡಿಪಾರ್ಟಮೆಂಟ ಆಗಿದೆ, ಮೀನು ವ್ಯವಸಾಯದ ಅಭಿವೃದ್ಧಿ ಮಾಡುವುದಕ್ಕಾಗಿ ಗಮನ ಕೊಡಬೇಕೆಂದು ತಿಳಿಸಿದ್ದಾರೆ. ಇಲ್ಲಿಯ ವರೆಗೆ ಮೈಸೂರು ಸಂಸ್ಥಾನಕ್ಕೆ ಸಮುದ್ರ ಕರಾವಳಿ ಇದ್ದಿದ್ದಿಲ್ಲ. ಹೊಸರಾಜ್ಯ ರಚಿತವಾದ ಅನಂತರ ಈ ವ್ಯವಸಾಯಕ್ಕೆ ಅವಶ್ಯವಾಗಿ ಇರಬೇಕಾದ ಸಮುದ್ರತೀರ ನಮ್ಮ ಮೈಸೂರು ರಾಜ್ಯಕ್ಕೆ ಬಂದಿದೆ. ಸಮುದ್ರದ ಕರಾವಳಿಯ ಜನರಿಗೆ ಮೀನು ಇದೊಂದು ಮುಖ್ಯ ಆಹಾರವಾಗಿದೆ. ಈ ವ್ಯವಸಾಯದ ಅಭಿವೃದ್ಧಿ ಮಾಡುವುದು ಒಂದು ಮುಖ್ಯ ಪ್ರಶ್ನೆಯಾಗಿದೆ. ಈಗ ಬಹಳ ವೇಳೆಯಾಗಿರುವದರಿಂದ ಮತ್ತು ಮಾತನಾಡಲು ಹೆಚ್ಚುಕಾಲಾವಕಾಶ ಇಲ್ಲದ ಮೂಲಕ ಈ ವಿಷಯವನ್ನು ಸ್ವಲ್ಪದರಲ್ಲಿಯೇ ಹೇಳಿ ನನ್ನ ಮಾತುಗಳನ್ನು ಮುಗಿಸಬೇಕೆಂದಿದ್ದೇನೆ. ನಮ್ಮ ರಾಜ್ಯಕ್ಕೆ ಇದು ಒಂದು ಹೊಸ ವ್ಯವಸಾಯ ಬಂದಿದೆ. ಮುಂಬಯಿ ರಾಜ್ಯದಲ್ಲಾಗಲ ಮದರಾಸು ರಾಜ್ಯದಲ್ಲಾಗಲ ಬೇಕಾದಷ್ಟು ಸಮುದ್ರತೀರ ಇದ್ದರೂ ಈ ವ್ಯವಸಾಯಕ್ಕೆ ಬಹಳ ಕಡಮೆ ಹಣ ಒದಗಿಸಿದ್ದಾರೆ. ಹಳೆಯ ಮೈಸೂರಿನಲ್ಲಿ ಸಮುದ್ರ ಕರಾವಳಿಯೇ ಇಲ್ಲದ ಮೂಲಕ ಈ ವ್ಯವಸಾಯಕ್ಕೆ ಪ್ರಾಮುಖ್ಯತೆ ಇದ್ದಿಲ್ಲ. ನಾವು ಈಗ ಹೊಸದಾಗಿ ಎಲ್ಲವನ್ನು ಮಾಡಬೇಕಾಗಿದೆ. ಈ ವ್ಯವಸಾಯದ ಅಭಿವೃದ್ಧಿ ಕಾರ್ಯಕ್ಕಾಗಿ 75 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ನಮ್ಮಹತ್ತಿರ ಹಣದ ಅನುಕೂಲವಿಲ್ಲ; ಇಂಡಿಯಾ ಸರಕಾರದವರನ್ನು ಒತ್ತಾಯಪಡಿಸಿ ಹಣದ ಸಹಾಯ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಸಹಾಯ ಮಾಡಲು ಅವರು ಸಂತೋಷದಿಂದ ಒಪ್ಪಿಕೊಂಡಿದ್ದಾರೆ. ಐದು ವರ್ಷಗಳಲ್ಲಿ 75 ಲಕ್ಷ ರೂಪಾಯಿಗಳನ್ನು ಖರ್ಚುಮಾಡತಕ್ಕ ಯೋಜನೆಯು ಇದು ಆಗಿದೆ. ಏನು ಕೆಲಸ ಮಾಡತಕ್ಕದ್ದು ಎಂದರೆ ಮೀನಗಳನ್ನು ಹಿಡಿಯುವುದಕ್ಕೋಸ್ಕರ mechanised boats ಇರುವ ವ್ಯವಸ್ಥೆ ಮಾಡಬೇಕಾಗಿದೆ. ಇನ್ನುಮುಂದೆ ಈ ರೀತಿಯಾಗಿ ಮಾಡಬೇಕೆಂದಿದ್ದೇವೆ.

1957-58 ರಲ್ಲಿ	6	ಮೆಕನೈಜ್ಡ ಬೋಟ್ಸ್
1958-59 ರಲ್ಲಿ	14	,,
1959-60 ರಲ್ಲಿ	15	,,
1960-61 ರಲ್ಲಿ	15	,,

ಅದೇ ರೀತಿಯಾಗಿ cold storage plants ಬಗ್ಗೆ ಈ ರೀತಿ ಮಾಡಲಾಗುವುದು.

1957-58 ರಲ್ಲಿ	2	ಕೊಲ್ಡ್‌ಸ್ಟೋರೇಜ್ ಪ್ಲಾಂಟ್.
1958-59 ರಲ್ಲಿ	2	,,
1959-60 ರಲ್ಲಿ	2	,,
1960-61 ರಲ್ಲಿ	3	,,

ಈ ರೀತಿ ಮಾಡಬೇಕೆಂದು ಏರ್ಪಾಡುಮಾಡಲಾಗಿದೆ. ಅಮೇರಿಕಾದಿಂದ ತೀವ್ರವಾಗಿ ತರಿಸತಕ್ಕ ಸೂಕ್ತ ವ್ಯವಸ್ಥೆ ಮಾಡಿದ್ದೇವೆ. ಈ ಕಾರ್ಯವನ್ನು ಕಾರ್ಯರೂಪಕ್ಕೆ ತರತಕ್ಕಂಥಾದ್ದು ನಮ್ಮ ಕರ್ತವ್ಯವಾಗಿದೆ. ಸಾವಧಾನದಿಂದ ಇಲ್ಲಿಯ ವರೆಗೆ ನನ್ನ ಭಾಷಣವನ್ನು ಎಲ್ಲರೂ ಕೇಳಿದುದಕ್ಕಾಗಿ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

(All the Marathi Members of the Opposition party withdrew from the House at this stage.)

ಶ್ರೀ ಕೆ. ಕೆಂಚಪ್ಪ.—ಸ್ವಾಮಿ, ನಿಮ್ಮವರ್ಗದವರಿಗೆ ಬಹಳ ಕಡಮೆ ಮೊಬಲಗನ್ನು ಒದಗಿಸಿರು

ವುದರಿಂದ ನಮಗಿರುವ ಅತೃಪ್ತಿಯನ್ನು ಸೂಚಿಸುವುದಕ್ಕಾಗಿ ತಮ್ಮ ನೀತಿಗೆ protest ಮಾಡಿ ನಾವುಗಳೂ walk out ಮಾಡುತ್ತೇವೆ.

(All the P. S. P. members withdrew from the House).

Mr. SPEAKER.—Those members who want to stage a walk out should at least under the circumstances inform me beforehand of their intention. I have no objection to their walking out, but if they give me a prior intimation, I can at least allow them to make a statement.

Before proceeding with the voting of the Demands I would like to announce that in all 36 members have taken part including the Ministers. Out of these, 19 are from the Congress Party, 17 from the Opposition, out of which, 7 are from the P.S.P., and the Independents and 10 Scheduled Caste Members, coming from both sides, have taken part.

Demand No. 23—Agriculture, Horticulture, Fisheries.

Mr. SPEAKER.—The question is:

"That a sum not exceeding Rs. 2,05,23,000 be granted to the Government to defray the charges which will come in course of payment during the year ending 31st day of March, 1958, in respect of 'Agriculture'."

The motion was adopted.

Demand No. 24—Rural Development.

Mr. SPEAKER.—The question is:

"That a sum not exceeding Rs. 1,26,72,000 be granted to the Government to defray the charges which will come in course of payment during the year ending 31st day of March 1958, in respect of 'Rural Development'."

The motion was adopted.

1-55 P.M.

Demand No. 25—Veterinary.

Mr. SPEAKER.—The question is:

"That a sum not exceeding Rs. 70,82,300 be granted to the Government to defray the charges which will come in course of payment during the year ending 31st day of March 1958, in respect of 'Veterinary'."

The motion was adopted.

The House will now adjourn and meet tomorrow at 8-30 A.M.

The House adjourned at Two of the Clock to meet at Half past Eight of the Clock on Saturday, the 27th July 1957.

WD 3906—GPB—900—2-1-58.